ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ

ಎಂ.ಫಿಲ್.ಪದವಿಯ ನಿಬಂಧ

# ಕನ್ನಡ ಕಾವ್ಯಮೀಮಾಂಸೆಗೆ ಡಾ॥ ಪು.ತಿ.ನ ಅವರ ಕೊಡುಗೆ

ಸಂಶೋಧನ ವಿದ್ಯಾರ್ಥಿನಿ
ಉಮ್ಮೇಸಲ್ಮ

ಮಾರ್ಗದರ್ಶಕರು
ಪ್ರೊ॥ಕೆ.ಎಸ್.ಮಧುಸೂದನ

ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ
ಬೆಂಗಳೂರು
೨೦೦೯

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ

ಎಂ.ಫಿಲ್.ಪದವಿಯ ನಿಬಂಧ

# ಕನ್ನಡ ಕಾವ್ಯಮೀಮಾಂಸೆಗೆ ಡಾ॥ ಪು.ತಿ.ನ ಅವರ ಕೊಡುಗೆ

ಸಂಶೋಧನ ವಿದ್ಯಾರ್ಥಿನಿ
ಉಮ್ಮೇಸಲ್ಮ

ಮಾರ್ಗದರ್ಶಕರು
ಪ್ರೊ.ಕೆ.ಎಸ್.ಮಧುಸೂದನ

ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ
ಬೆಂಗಳೂರು

೨೦೦೯

## ಅಭ್ಯರ್ಥಿಯ ಪ್ರಮಾಣಪತ್ರ

ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೮-೨೦೦೯ನೇ ಸಾಲಿನ ಎಂ.ಫಿಲ್ ಪದವಿಗಾಗಿ **"ಕನ್ನಡ ಕಾವ್ಯಮೀಮಾಂಸೆಗೆ ಡಾ॥ಪು.ತಿ.ನ ಅವರ ಕೊಡುಗೆ"** ಎಂಬ ನಿಬಂಧವನ್ನು ಪ್ರೊ.ಕೆ.ಎಸ್.ಮಧುಸೂದನ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ನಿಬಂಧ ನನ್ನ ಸ್ವಂತ ಬರವಣಿಗೆ ಆಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸಹಿ/
ಉಮ್ಮೆಸಲ್ಮ
(ಉಮ್ಮೇಸಲ್ಮ)
ಸಂಶೋಧನ ವಿದ್ಯಾರ್ಥಿನಿ

ದಿನಾಂಕ : ೨೬-೦೬-೨೦೦೯
ಸ್ಥಳ : ಬೆಂಗಳೂರು.

## ಮಾರ್ಗದರ್ಶಕರ ಪ್ರಮಾಣಪತ್ರ

ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೮-೨೦೦೯ನೇ ಸಾಲಿನ ಎಂ.ಫಿಲ್ ಪದವಿಗಾಗಿ **"ಕನ್ನಡ ಕಾವ್ಯಮೀಮಾಂಸೆಗೆ ಡಾ॥ಪು.ತಿ.ನ ಅವರ ಕೊಡುಗೆ"** ಎಂಬ ನಿಬಂಧವನ್ನು ಉಮ್ಮೇಸಲ್ಮ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ನಿಬಂಧ ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಬೇರೆಲ್ಲೂ ಪ್ರಕಟಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸಹಿ

(ಪ್ರೊ.ಕೆ.ಎಸ್.ಮಧುಸೂದನ)
ಮಾರ್ಗದರ್ಶಕರು

ದಿನಾಂಕ : ೨೫-೦೮-೨೦೦೮
ಸ್ಥಳ : ಬೆಂಗಳೂರು.

# ಅಧ್ಯಾಯ – ೧

## ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಕನ್ನಡ ಸಾಹಿತ್ಯ ವಿಪುಲವಾಗಿದೆ. ವಿಶ್ವಸಾಹಿತ್ಯಕ್ಕೆ ಗುಣಮಟ್ಟದಲ್ಲಿ ಏನೇನು ಕಡಿಮೆ ಇಲ್ಲದಂತಹ ಪಂಪ, ಕುಮಾರವ್ಯಾಸ, ಬೇಂದ್ರೆ, ಗೋಪಾಲಕೃಷ್ಣ ಅಡಿಗರು, ಡಾ.ಸಿದ್ಧಲಿಂಗಯ್ಯ, ದೇವನೂರು ಮಹಾದೇವರಂತಹ ಲೇಖಕರುಗಳು ಮೂಡಿಬಂದಿದ್ದಾರೆ. ಮುಖ್ಯವಾಗಿ ಕನ್ನಡ ಸಾಹಿತ್ಯದಲ್ಲಿ ಸಂಸ್ಕೃತ ಸಾಹಿತ್ಯಕ್ಕೆ ಸಮಾನಾಂತರವಾಗಿ ಪ್ರತಿಕ್ರಿಯಾತ್ಮಕವಾಗಿ ಕೃತಿಗಳು ಹುಟ್ಟಿಕೊಂಡಿವೆ. ಕಾವ್ಯಜಿಜ್ಞಾಸೆಯನ್ನು ಕುರಿತು ಕಾವ್ಯತತ್ವಗಳನ್ನು ಕುರಿತ ಕೃತಿಗಳು ಸಂಸ್ಕೃತದಲ್ಲಿರುವಂತೆ ಕನ್ನಡದಲ್ಲಿಯೂ ರೂಪುಗೊಂಡಿವೆ.

ಸಂಸ್ಕೃತದಲ್ಲಿ ಮತ್ತು ಹಳಗನ್ನಡದಲ್ಲಿ ಕಾವ್ಯವನ್ನು ಕುರಿತು ಜಿಜ್ಞಾಸೆಯಾದ ಕಾವ್ಯಮೀಮಾಂಸೆಗೆ ಸಂಬಂಧಿಸಿದಂತೆ ಅನೇಕ ಕೃತಿಗಳು ಹುಟ್ಟಿಕೊಂಡಿವೆ. ಹೊಸಗನ್ನಡದಲ್ಲಿಯಂತೂ ಅಲಂಕಾರಶಾಸ್ತ್ರ, ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆಗಳಿಗೆ ಸಂಬಂಧಿಸಿದ ನೂರಾರು ಕೃತಿಗಳು ಮೂಡಿಬಂದಿದೆ. ಅಲ್ಲದೆ ಸೃಜನಶೀಲ ಕವಿಗಳು ತಮ್ಮ ಕಾವ್ಯ ಹಾಗೂ ಇತರ ಪ್ರಕಾರಗಳ ಮೂಲಕ ಒಂದು ನಿರ್ದಿಷ್ಟ ಕಾವ್ಯಮೀಮಾಂಸೆಯನ್ನು ರೂಪಿಸಿರುವುದುಂಟು. ಇವರದಲ್ಲಿ ಕುವೆಂಪು, ಬೇಂದ್ರೆ, ಪು.ತಿ.ನ ಅವರು ಪ್ರಮುಖರು. ಇವರ ಚಿಂತನೆಗಳನ್ನು ಸಮಕಾಲೀನ ಓರಗೆಯ ಬರಹಗಾರರ ಹಿನ್ನೆಲೆಯಲ್ಲಿ ತಲಸ್ಪರ್ಶಿಯಾಗಿಯೂ, ಸಮಗ್ರವಾಗಿಯೂ ಕೈಗೊಳ್ಳಲಿಚ್ಛಿಸುತ್ತೇನೆ. ಈ ಹಿನ್ನೆಲೆಯಲ್ಲಿ ಕಾವ್ಯ ಎಂದರೆ ಏನು? ಕಾವ್ಯದ ಸ್ವರೂಪವೇನು? ಕಾವ್ಯದಿಂದ ನಿರೀಕ್ಷಿಸುವ ಅಂಶಗಳೇನು? ಕಾವ್ಯವು ಹೇಗೆ ಅನನ್ಯವಾದದ್ದು ಮುಂತಾದವನ್ನು ಕುರಿತ ಚಿಂತನೆಗಳು ಪು.ತಿ.ನ ರವರ ಸಮಗ್ರ ಸಾಹಿತ್ಯದಲ್ಲಿ ಹೇಗೆ ಮೂಡಿಬಂದಿದೆ ಎಂಬುದನ್ನು ತೌಲನಿಕವಾಗಿ ಸಮೀಕ್ಷಿಸಿ ಇದನ್ನು ಕುರಿತ ಒಂದು ಸಿದ್ಧಾಂತಕ್ಕೆ ತಲುಪುವುದು ಅಗತ್ಯ. ಈ ಹಿನ್ನೆಲೆಯಲ್ಲಿ ನಾನು "ಕನ್ನಡ ಕಾವ್ಯಮೀಮಾಂಸೆಗೆ ಡಾ॥ಪು.ತಿ.ನ. ಅವರ ಕೊಡುಗೆ" ಎಂಬ ಮಹತ್ವಾಕಾಂಕ್ಷೆಯ ಅಧ್ಯಯನವನ್ನು ಕೈಗೊಳ್ಳಲಿದ್ದೇನೆ.

ಪು.ತಿನ. ಅವರ ನಾಟಕ, ಪ್ರಬಂಧ, ಕಾವ್ಯ, ಗದ್ಯಲೇಖನಗಳು ಇದರಲ್ಲಿ ನೇರವಾಗಿ ಮತ್ತು ಪರೋಕ್ಷವಾಗಿ ಕಾವ್ಯಮೀಮಾಂಸೆಯ ಕುರಿತ ಚಿಂತನೆಗಳು ಸಾಕಷ್ಟಿವೆ. ರಸಪ್ರಕಾಶ ಮತ್ತು ಕಾವ್ಯ ಕುತೂಹಲ ಎನ್ನುವ ನೇರವಾಗಿ ಕಾವ್ಯಮೀಮಾಂಸೆಗೆ ಸಂಬಂಧಪಟ್ಟ ಕೃತಿಗಳು ಇವೆ. ಈ ಕೃತಿಗಳ ಆಳವಾದ ಅಧ್ಯಯನದ ಮೂಲಕ ಕನ್ನಡ ಕಾವ್ಯಮೀಮಾಂಸೆಯ ಕ್ಷೇತ್ರಕ್ಕೆ ಪು.ತಿ.ನ. ನೀಡಿರುವ ಹೊಸ ಆಲೋಚನೆಗಳೇನು? ತಾತ್ವಿಕತೆ ಏನು? ಹಾಗೂ ಕಾವ್ಯಮೀಮಾಂಸೆಯ ಕುರಿತ ಚಿಂತನೆಗಳೇನು? ಎಂಬುದನ್ನು ಗುರುತಿಸುವುದೇ ಈ ಸಂಶೋಧನ ಅಧ್ಯಯನದ ಉದ್ದೇಶವಾಗಿದೆ.

ಈ ಸಂಬಂಧದಲ್ಲಿ ಕೆಳಗೆ ನೀಡಿರುವ ರೀತಿಯಲ್ಲಿ ಅಧ್ಯಾಯಗಳನ್ನು ವಿಂಗಡಿಸಲಾಗಿದೆ. ೧.ಕಾವ್ಯಮೀಮಾಂಸೆಯನ್ನು ಕುರಿತ ಪು.ತಿ.ನ ಅವರ ಚಿಂತನೆ. ೨) ಭಾಷಿಕ ನೆಲೆಯ ಚಿಂತನೆಗಳು ಮತ್ತು ಕೆಲವು ಪಾರಿಭಾಷಿಕ ಶಬ್ದಗಳು. ನಿರ್ದಿಷ್ಟವಾಗಿ ಅವರ ಕಾವ್ಯ ಕುತೂಹಲ, ರಸಪ್ರಕಾಶ ಮತ್ತು ಕಾವ್ಯಜಿಜ್ಞಾಸೆಯನ್ನು ವಸ್ತುವಾಗುಳ್ಳ ಕೆಲವು ಕವಿತೆಗಳನ್ನು (ಕವಿ, ಕಥೆಗಾರ, ನನ್ನ ಹಾಡು) ಮುಂತಾದವುಗಳನ್ನು ಕೇಂದ್ರದಲ್ಲಿರಿಸಿಕೊಂಡು ಅವರ ಆಶಯವನ್ನು ಗುರುತಿಸಲಾಗುವುದು.

ಇಲ್ಲಿ ಅವರ ಕಾವ್ಯ ಸ್ವರೂಪದ ವಿಭಿನ್ನ ಸ್ವರೂಪಗಳನ್ನು ಭಾಷಿಕ ನೆಲೆಯ ವಿಭಿನ್ನ ಮುಖಗಳತ್ತ ಗಮನ ಹರಿಸಲಾಗುವುದು. ಪು.ತಿ.ನ.ರವರ ಪ್ರತಿಯೊಂದು ಚಿಂತನೆ, ಬರಹ ಹಾಗೂ ಅಭಿವ್ಯಕ್ತಿಗಳಲ್ಲಿ 'ರಸ'ಕ್ಕೆ ನೀಡಿದ ಪ್ರಾಧಾನ್ಯತೆ ಏನು ಹಾಗೂ ರಸಸ್ತರದ ಕುರಿತಾದ ಅವರ ಅಭಿಪ್ರಾಯಗಳನ್ನು ಈ ಇಡೀ ಅಧ್ಯಾಯದ ಸ್ವರೂಪದ ಹಿನ್ನೆಲೆಯಲ್ಲಿ ಗುರುತಿಸಲಾಗುವುದು.

ಈ ಅಧ್ಯಯನದಲ್ಲಿ ಒಟ್ಟು ಕನ್ನಡ ಕಾವ್ಯಮೀಮಾಂಸೆಯನ್ನು ಕುರಿತು ಚಿಂತಿಸಲಾಗುವುದಿಲ್ಲ. ಅದು ಇಲ್ಲಿನ ವ್ಯಾಪ್ತಿಯಲ್ಲಿ ಬರುವುದಿಲ್ಲ. ಕನ್ನಡ ನವೋದಯ ಕಾಲದ ಪು.ತಿ.ನ ಅವರ ಓರಗೆಯ ಲೇಖಕರ ಕಾವ್ಯಮೀಮಾಂಸೆಯನ್ನು ಕುರಿತ ಚಿಂತನೆಗಳು ಈ ಅಧ್ಯಯನದ ವ್ಯಾಪ್ತಿಯಲ್ಲಿ ಬರುವುದಿಲ್ಲ. ಆಧುನಿಕ ಕನ್ನಡ ಸಾಹಿತ್ಯ ಚಿಂತನೆಗೆ ಕವಿ ಪು.ತಿ.ನ. ಅಭಿವ್ಯಕ್ತಿಸಿರುವ ಕಾವ್ಯಮೀಮಾಂಸೆಯನ್ನು ಕುರಿತ ಚಿಂತನೆಗಳು ಮಾತ್ರ ನನ್ನ ಅಧ್ಯಯದ ವ್ಯಾಪ್ತಿಯಲ್ಲಿ ಬರುತ್ತದೆ.

ಈ ಅಧ್ಯಯನದಲ್ಲಿ ಒಟ್ಟು ಕನ್ನಡದ ಕಾವ್ಯಮೀಮಾಂಸೆಯ ಚಿಂತನೆಗಳು, ಪು.ತಿ.ನ ಅವರ ಸಮಕಾಲೀನ ಲೇಖಕರ ಸಾಹಿತ್ಯತತ್ವಗಳು, ಈ ಹಿನ್ನೆಲೆಯಲ್ಲಿ ಪು.ತಿ.ನ. ಅವರ ಆಲೋಚನೆಗಳನ್ನು ತೌಲನಿಕವಾಗಿ ಅಧ್ಯಯನ ಮಾಡುವ ಒಂದು ವ್ಯಾಪ್ತಿಯನ್ನು ನಾನು ವಿಸ್ತರಿಸಿಕೊಳ್ಳಲಿದ್ದೇನೆ. ಇಲ್ಲಿ ಪ್ರಶ್ನಾವಳಿಯನ್ನಾಗಲಿ, ಸಂದರ್ಶನಗಳನ್ನಾಗಲಿ, ಕ್ಷೇತ್ರಕಾರ್ಯಗಳನ್ನಾಗಲಿ ಬಳಸಿಕೊಳ್ಳುವ ಅಗತ್ಯ ಕಂಡುಬರುವುದಿಲ್ಲ. ಹೆಚ್ಚೆಂದರೆ ಪು.ತಿ.ನ ಅವರನ್ನು ಕುರಿತು ಬಂದಿರುವ ಸಂಭಾವನಾ ಗ್ರಂಥಗಳು ವಿಮರ್ಶೆಯ ಕೃತಿಗಳನ್ನು ಅವಲೋಕಿಸುವುದಕ್ಕೆ ಅವಕಾಶವಿದೆ.

ಈ ವಿಷಯಗಳನ್ನು ಇದುವರೆಗೆ ಬಂದಿರುವ ಪರಾಮರ್ಶನ ಗ್ರಂಥಗಳನ್ನು ಪರಿಶೀಲಿಸುವುದರ ಜೊತೆಗೆ ಈ ಅಧ್ಯಯನದಲ್ಲಿ ನಡೆಯಬೇಕಾಗಿರುವ ಇನ್ನಿತರ ಮಹತ್ವದ ಸಂಗತಿಗಳನ್ನು ಅಧ್ಯಯನದ ವ್ಯಾಪ್ತಿಯಲ್ಲಿ ಅಳವಡಿಸಲಾಗುವುದು.

ಅಧ್ಯಾಯ:೨ರಲ್ಲಿ ಡಾ.ಪು.ತಿ.ನ ಸಾಹಿತ್ಯದ ಆಶಯ ಮತ್ತು ವ್ಯಕ್ತಿತ್ವ ಹಾಗೂ ಸಾಹಿತ್ಯ ಜೀವನ ಕುರಿತಾದ ಅವರ ಪ್ರಮಾಣವನ್ನು ಪರಿಚಯಿಸಲಾಗುವುದು. ಪು.ತಿ.ನ ಕೃತಿಗಳು, ಬದುಕು, ಬರಹ ಅವರ ಪಾಂಡಿತ್ಯ ಮತ್ತು ವ್ಯಕ್ತಿತ್ವದ ಕುರಿತಾದ ಚರ್ಚೆಯನ್ನು ಇಲ್ಲಿ ನಡೆಸಲಾಗುವುದು. ಮುಖ್ಯವಾಗಿ ಆಧುನಿಕ ಕನ್ನಡ ಸಾಹಿತ್ಯಮೀಮಾಂಸೆಯ ಚರ್ಚೆಗಳ ಸಂದರ್ಭದ ಮತ್ತು ಪು.ತಿ.ನ.

ಅವರ ಸಮಕಾಲೀನ ಮಹತ್ವದ ಸಾಹಿತಿಗಳ ಕೊಡುಗೆಯ ಹಿನ್ನೆಲೆಯಲ್ಲಿ ಪು.ತಿ.ನ ಅವರ ಒಟ್ಟು ಸಾಹಿತ್ಯದ ಸಿದ್ಧಿಸಾಧನೆಗಳನ್ನು ವಿವೇಚಿಸಲಾಗುವುದು.

ಪು.ತಿ.ನ.ರವರ ಒಟ್ಟು ಸಾಹಿತ್ಯದಲ್ಲಿ ಜೀವನದ ಘಟನೆಗಳಿಗೆ ಹಿನ್ನೆಲೆಯಾಗಿ ಬರುವ ಭಕ್ತಿ, ಬಂಡಾಯ, ಭಾಗವತ, ಆಧ್ಯಾತ್ಮ, ಪ್ರಕೃತಿವರ್ಣನೆ, ಜೀವನ ಪ್ರೇಮ, ತ್ಯಾಗ-ವೈರಾಗ್ಯಗಳು, ಪೌರಾಣಿಕ ಅಂಶಗಳು, ಸಾಮಾಜಿಕತೆ, ತಾತ್ವಿಕತೆ, ಪ್ರಣಯ, ಜಿಜ್ಞಾಸೆ, ಚಿಂತನಶೀಲತೆ, ಅಂತಃಸಾಕ್ಷಿ, ಮೌಲ್ಯಪ್ರಜ್ಞೆ, ನವರಸಗಳು, ಸಹಾನುಭೂತಿ, ತತ್ವಾನ್ವೇಷಣೆ, ಸಮಕಾಲೀನತೆ ಮತ್ತು ಸಾರ್ವಕಾಲಿಕತೆ, ಹಬ್ಬಗಳು ಇತ್ಯಾದಿ ಅಂಶಗಳನ್ನು ಅವರ ಸ್ವಂತ ಅಭಿವ್ಯಕ್ತಿಯ ನೆಲೆಯಲ್ಲಿಯೇ ವಿಶ್ಲೇಷಣೆಗೆ ಒಳಪಡಿಸಲಾಗುವುದು.

ಬದುಕಿಗೆ ಬೇಕಾದ ನೈಜ ಆಧ್ಯಾತ್ಮಿಕತೆ, ಬಾಳ್ವೆಯನ್ನು ಸುಂದರ ಹಾಗೂ ಉನ್ನತಗೊಳಿಸಲು ಬೇಕಾಗುವ ಶುಚಿಯಾದ ಪ್ರೇಮಕಾಮಗಳ ತುಡಿತ, ದೈನಂದಿನ ಜೀವನದ ಸಾಮಾಜಿಕ ವಾಸ್ತವತೆಯ ಹಾಗೂ ಈ ಎಲ್ಲಾ ಚಿಂತನೆಗಳು ಒಳಗೊಳ್ಳುವ ಸಾಹಿತ್ಯಿಕ ಸೃಷ್ಟಿ, ಸ್ವರೂಪ ಮತ್ತು ಪರಿಣಾಮಗಳನ್ನು ಕುರಿತ ಜಿಜ್ಞಾಸೆ, ಇವುಗಳು ಔಚಿತ್ಯ ಪೂರ್ಣವಾಗಿ ಅಭಿವ್ಯಕ್ತಗೊಂಡಿರುವುದನ್ನು ಕುರಿತು ಚಿಂತಿಸಲಾಗುವುದು. ಅಲ್ಲದೆ ಇಲ್ಲಿ ಕಾವ್ಯ ಜಿಜ್ಞಾಸೆಯ ಚಿಂತನೆಗಳನ್ನು ಕುರಿತು ಹೆಚ್ಚಿನ ಬೆಳಕನ್ನು ಚೆಲ್ಲಲಾಗುವುದು.

ಅಧ್ಯಾಯ:೩ರಲ್ಲಿ ಕಾವ್ಯಮೀಮಾಂಸೆಯನ್ನು ಕುರಿತ ಡಾ.ಪು.ತಿ.ನ.ಅವರ ಚಿಂತನೆ:- ಪು.ತಿ.ನರವರ ಕಾವ್ಯದ ಆಶಯಗಳನ್ನು ಕುರಿತ ಕಾವ್ಯಮೀಮಾಂಸೆಯ ಚಿಂತನೆಗಳನ್ನು ವಿಶ್ಲೇಷಿಸಿ ಅವುಗಳ ಹಲವು ಮುಖಗಳ ಅನಾವರಣವನ್ನು ಇಲ್ಲಿ ಕೈಗೊಳ್ಳಲಾಗುವುದು. ಈ ಚಿಂತನೆಗಳಿಗೆ ಪೂರಕವಾಗಿ ಈ ಕೆಳಕಂಡಂತೆ ಉಪಅಧ್ಯಾಯಗಳನ್ನು ಮಾಡಿಕೊಳ್ಳಲಾಗುವುದು.

**ಅ) ಕವಿ-ಸಹೃದಯ:**-ಕಾವ್ಯದ ಅಭಿವ್ಯಕ್ತಿಗೆ ಕವಿಯ ಪ್ರತಿಭೆ ಹಾಗೂ ಸಹೃದಯನ ಒಲವುಗಳು, ಕವಿಗಿರಬೇಕಾದ ಗುಣಗಳು ಮತ್ತು ಸಹೃದಯನಾದವನ ಸೂಕ್ಷ್ಮತೆಗಳನ್ನು ಪು.ತಿ.ನ.ರವರ ಚಿಂತನೆಗಳನ್ನು ಆಧಾರವಾಗಿಟ್ಟುಕೊಂಡು ನೋಡಲಾಗುವುದು.

**ಆ) ಕಾವ್ಯಸ್ವರೂಪ:**- ಕಾವ್ಯದ ಲಕ್ಷಣ ಅದು ಒಳಗೊಳ್ಳಬೇಕಾದ ವಾಸ್ತವಿಕತೆಯ ಬಗೆಯನ್ನು ಇಲ್ಲಿ ಹೇಳಲಾಗುವುದು. ಇಲ್ಲಿ ಪು.ತಿ.ನ.ರವರ ಕೆಲವು ಕಾವ್ಯಗಳನ್ನು ಉದಾಹರಣೆಯಾಗಿ ಬಳಸಿಕೊಂಡು ಅವರ ಕಾವ್ಯಸ್ವರೂಪದ ವಿಭಿನ್ನ ನೋಟಗಳನ್ನು ಚಿಂತನ-ಮಂಥನಗಳಿಗೆ ಒಳಪಡಿಸಲಾಗುವುದು.

**ಇ) ಕಾವ್ಯದ ವಸ್ತು:**-ಕಾವ್ಯದ ವಸ್ತುವನ್ನು ಕುರಿತಾದ ಪು.ತಿ.ನ. ರವರ ದೃಷ್ಟಿ ಧೋರಣೆಗಳೇನು? ವಸ್ತು ಎಂದರೇನು? ಅದು ಕಾವ್ಯದಲ್ಲಿ ಮಾಡಬೇಕಾದ ತಾತ್ವಿಕತೆಗಳೇನು? ಎಂಬುದನ್ನು ವಿಶ್ಲೇಷಣಾತ್ಮಕವಾಗಿ ವಿವರಿಸಲಾಗುವುದು.

**ಈ) ರಸಪ್ರಜ್ಞೆ:–** ಪು.ತಿ.ನ.ರವರ ಕಾವ್ಯಮೀಮಾಂಸೆಯ ಚಿಂತನೆಗಳಲ್ಲಿ ರಸವು ಬಹು ಪ್ರಾಮುಖ್ಯತೆಯನ್ನು ಪಡೆದಿರುವಂತಹ ಅಂಶ. ಈ ಭಾಗದಲ್ಲಿ ರಸ ಎಂದರೇನು? ಕಾವ್ಯಸೃಷ್ಟಿಯಲ್ಲಿ ರಸಸ್ತರದ ಪ್ರಾಮುಖ್ಯತೆಗಳೇನು? ಎಂಬುದನ್ನು ವಿವರವಾಗಿ ತಿಳಿಸಲಾಗುವುದು. 'ರಸ' ಎಂಬ ಪದಕ್ಕೆ ಪು.ತಿ.ನ ರವರು ನೀಡುವ ವ್ಯಾಖ್ಯೆಗಳು ಹಾಗೂ ರಸವನ್ನು ತತ್ತ್ವಾನ್ವೇಷಣೆಗೆ ಒಳಪಡಿಸುವ ಬಗೆಯನ್ನು ಅವರದೇ ಆದ ದೃಷ್ಟಿಕೋನಗಳ ನೆಲೆಯಲ್ಲಿ ವಿಶ್ಲೇಷಣಾತ್ಮಕವಾದ ಅಧ್ಯಯನವನ್ನು ಮಾಡಲಾಗುವುದು.

**ಉ) ಕಾವ್ಯ ಮತ್ತು ಇತರೆ ಶಿಸ್ತುಗಳು:–** ಕಾವ್ಯದಲ್ಲಿ ಇತರೆ ಶಿಸ್ತುಗಳು ಬಳಕೆಯಾಗುವ ಬಗೆಯನ್ನು ಇಲ್ಲಿ ಹೇಳಲಾಗುವುದು. ಕಾವ್ಯದ ಇತರೆ ಶಿಸ್ತುಗಳಾದ ಭಾಷೆ, ಶೈಲಿ, ವಿಮರ್ಶೆ, ರಸಪ್ರಜ್ಞೆ ಇವುಗಳಿಗೆ ಪು.ತಿ.ನ. ನೀಡುವ ವಿಶ್ಲೇಷಣೆ ಹಾಗೂ ಮಹತ್ವಗಳೇನೆಂಬುದನ್ನು ಹಾಗೂ ಅವುಗಳಿಗೆ ಪೂರಕವಾಗಿ ಕವಿಯ ಪ್ರತಿಭೆಗಳೇನು ಎಂಬುದರತ್ತ ಬೆಳಕನ್ನು ಚೆಲ್ಲಲಾಗುವುದು.

**ಊ) ಕಾವ್ಯ ಪ್ರಯೋಜನ:–** ಕಾವ್ಯದ ಉಪಯುಕ್ತತೆ, ಅದರ ಗುಣದೋಷಗಳನ್ನು ಈ ಭಾಗದಲ್ಲಿ ಹೇಳಲಾಗುವುದು. ಕಾವ್ಯ ಒದಗಿಸುವ ರಸಾನುಭವ ಅದರ ಮೂಲ ಗುಣವೇನು? ಎಂಬ ಜಿಜ್ಞಾಸೆಗಳತ್ತ ಪು.ತಿ.ನ ರವರು ನೀಡಿರುವ ಚಿಂತನೆಗಳ ಆಧಾರದಲ್ಲಿಯೇ ಇವುಗಳನ್ನು ವಿಶ್ಲೇಷಿಸಲಾಗುವುದು.

ಅಧ್ಯಾಯ:೪ ಭಾಷಿಕ ನೆಲೆಯ ಚಿಂತನೆಗಳು:– ಪು.ತಿ.ನ. ರವರ ಕೃತಿಗಳ ಭಾಷಿಕ ನೆಲೆಯ ಚಿಂತನೆಗಳೇನು ಎಂಬುದನ್ನು ವಿಸ್ತರಿಸಿ ಹೇಳಲಾಗುವುದು. ಈ ದಿಸೆಯಲ್ಲಿ ಕಾವ್ಯಮೀಮಾಂಸೆಯ ಚಿಂತನೆಗಳಲ್ಲಿ ಛಂದಸ್ಸು, ಗದ್ಯಕಲೆ ಹಾಗೂ ಶಾಬ್ಧಿಕ ನೆಲೆಯನ್ನು ಕುರಿತ ಲೇಖಕರ ನಿಲುವುಗಳನ್ನು ಇಲ್ಲಿ ಮಂಡಿಸಲಾಘುವುದು. ಈ ಹಿನ್ನೆಲೆಯಲ್ಲಿ ಈ ಅಧ್ಯಯನಕ್ಕೆ ಪೂರಕವಾಗುವಂತೆ ಉಪಅಧ್ಯಾಯಗಳನ್ನು ಮಾಡಿಕೊಳ್ಳಲಾಗಿದೆ.

**ಅ) ಶಬ್ಧ ಮಾಧುರ್ಯ:–** ಶಬ್ಧ ಮಾಧುರ್ಯದಿಂದ ಕಾವ್ಯಕ್ಕೆ ಒದಗುವ ಸೌಂದರ್ಯವನ್ನು, ಓಜಸ್ಸು, ಕಾಂತಿ, ಪ್ರಸಾದ, ಶ್ಲೇಷೆ, ಮುಂತಾದ ಲಕ್ಷಣಗಳನ್ನು ಪ್ರಾಚೀನ ಅಲಂಕಾರಿಕರ ಹಾಗೂ ಪು.ತಿ.ನ ರವರ ದೃಷ್ಟಿಕೋನದ ಹಿನ್ನೆಲೆಯಲ್ಲಿ ಅಭಿವ್ಯಕ್ತಿಸಲಾಗುವುದು.

**ಆ) ಛಂದಸ್ಸು:–** ಪ್ರಾಚೀನ, ನಡುಗನ್ನಡ ಮತ್ತು ಆಧುನಿಕ ಕನ್ನಡದ ಸಂದರ್ಭಗಳಲ್ಲಿ ಛಂದಸ್ಸಿನಲ್ಲಾದ ಬದಲಾವಣೆಗಳೇನು? ಅದಕ್ಕೆ ಪೂರಕವಾದ ಪ್ರೇರಣೆ ಪ್ರಭಾವಗಳೇನು? ಇದಕ್ಕೆ ಕವಿಗಳ ಸಾಹಿತ್ಯ ಸೃಷ್ಟಿ ಮತ್ತು ಸಂಸ್ಕೃತದ ಛಂದಸ್ಸು ಇವುಗಳನ್ನು ಕುರಿತು ಪು.ತಿ.ನ. ಹೇಳಿದ್ದಾರೆ. ಲೇಖಕರ ಈ ಚಿಂತನೆಗಳನ್ನೇ ವಿಮರ್ಶಾತ್ಮಕವಾಗಿ ಇಲ್ಲಿ ಮಂಡಿಸಲಾಗುವುದು.

**ಇ) ಗದ್ಯಕಲೆ:–** ಗದ್ಯ ಸಾಹಿತ್ಯಕ್ಕೂ ಮತ್ತು ಪದ್ಯ ಸಾಹಿತ್ಯಕ್ಕೂ ಇರುವ ವ್ಯತ್ಯಾಸಗಳೇನು? ಜೊತೆಗೆ ಗದ್ಯಕಲೆಯ ಪ್ರಾಮುಖ್ಯತೆಯನ್ನು ಪು.ತಿ.ನ ಈ ಭಾಗದಲ್ಲಿ ಹೇಳಿದ್ದಾರೆ. ಗದ್ಯಕಲೆಯ ಕೆಲವು

ವೈಶಿಷ್ಟ್ಯಗಳನ್ನು ಲೇಖಕರು ಈ ಭಾಗದಲ್ಲಿ ಹೇಳಿರುವುದನ್ನು ವಿವರಣಾತ್ಮಕವಾಗಿ ಇಲ್ಲಿ ಚರ್ಚಿಸಲಾಗುವುದು.

ಅಧ್ಯಾಯ:೫ ಕೆಲವು ಪಾರಿಭಾಷಿಕ ಶಬ್ದಗಳು (ಪೌತಿನ್ಯ):- ಇದರಲ್ಲಿ ಯಾವುದೇ ಶಬ್ದಗಳನ್ನು ಬಳಸುವಾಗ ಒಬ್ಬ ಸಂಶೋಧಕ ಹೇಗೆ ಎಚ್ಚರಿಕೆಯಿಂದಿರಬೇಕು ಎಂಬುದನ್ನು ಇಲ್ಲಿ ವಿವರಿಸಲಾಗುವುದು. ಅಂದರೆ ಯಾವುದೇ ಸಂಶೋಧನೆಯಲ್ಲಿ ಸಂಶೋಧಕರು ತಾವು ಬಳಸುವ ಶಬ್ದಗಳನ್ನು ಎಚ್ಚರಿಕೆಯಿಂದ ಬಳಸಬೇಕು. ಇದನ್ನು ಕೆಲವು ಸಂದರ್ಭದಲ್ಲಿ ಕೆಲವು ಪಾರಿಭಾಷಿಕ ಶಬ್ದಗಳ ಅರ್ಥದ ವ್ಯಾಪ್ತಿಯನ್ನು ಸಂಶೋಧಕ ನೀಡಬೇಕಾಗುತ್ತದೆ. ಈ ಅಧ್ಯಾಯದಲ್ಲಿ ಪು.ತಿ.ನ.ರವರು ಬಳಸುವ ಕೆಲವು ಪಾರಿಭಾಷಿಕ ಪದಗಳ ಒಂದು ಪಟ್ಟಿಯನ್ನು ಒದಗಿಸುವ ಪ್ರಯತ್ನವನ್ನು ಮಾಡಲಾಗುವುದು.

ಹೀಗೆ ಈ ಅಧ್ಯಾಯಗಳ ಹಿನ್ನೆಲೆಯಲ್ಲಿ ಒಂದು ಮಹತ್ವದ ಅಧ್ಯಯನವನ್ನು ಇಲ್ಲಿ ಕೈಗೊಳ್ಳಲಾಗುವುದು.

# ಅಧ್ಯಾಯ – ೨

## ಪು.ತಿ.ನ ಸಾಹಿತ್ಯ ಆಶಯ

**ಪು.ತಿ.ನ : ಬದುಕು–ಬರಹ:–**

ಸಾಹಿತ್ಯ ಕ್ಷೇತ್ರದಲ್ಲಿ ಪು.ತಿ.ನ.ಅವರದು ಅಗ್ರಸ್ಥಾನ. ತಮ್ಮ ಸ್ವಂತ ಪ್ರೇರಣೆ ಪ್ರಭಾವಗಳಿಂದ ಅವರು ರಚಿಸಿದ ಸಾಹಿತ್ಯದ ವಿಶಾಲ ಪ್ರಪಂಚವು ಅವಿಸ್ಮರಣೀಯವಾದುದು. ಪು.ತಿ.ನ.ರವರದು ವಿಸ್ಮಯ ಭಾವ, ಅದರ ಜೊತೆಗೆ ಸೋಜಿಗವು ತುಂಬಿಕೊಂಡಿರುವ ಪ್ರವೃತ್ತಿ. ಅವರ ಜನನ ೧೭–೩–೧೯೦೫ರಲ್ಲಿ ಮೇಲುಕೋಟೆಯಲ್ಲಿ. "ಮೇಲುಕೋಟೆಯ ಪರಿಸರದಿಂದ ಆರ್ಯದ್ರಾವಿಡ ದ್ವೈತಭಾವಗಳ ರಸವನ್ನು, ಪುರಾಣ ಹಾಗೂ ಕಾಲಕ್ಷೇಪ ಸಂವೇಶಗಳಲ್ಲಿ ಕಥಾರಸ ಪ್ರವಚನ ರಸಗಳನ್ನು ದೇವೋತ್ಸವಗಳಲ್ಲಿ ಗಾನ ಮತ್ತು ಇತರ ಕಲಾರಸಗಳನ್ನು ಮಾಧ್ಯಮಿಕ ಕನ್ನಡ ಶಾಲೆಯಲ್ಲಿ ಕನ್ನಡದ ಗದ್ಯಪದ್ಯಗಳ ರುಚಿಯನ್ನು ನಾನು ಪಡೆದುಕೊಂಡೆ. ನನ್ನ ಪ್ರಪಂಚದ ರಸವತ್ತಾದ ಭಾಗ ನನಗೆ ಮೇಲುಕೋಟೆಯ ಕೊಡುಗೆ"[೧] ಎಂದು ಪು.ತಿ.ನ.ರವರು ಹೇಳಿಕೊಂಡಿದ್ದಾರೆ.

ತಮ್ಮ ಬಿ.ಎ.ಪದವಿ ಮುಗಿಸಿದ ನಂತರ ೧೯೨೭ರಲ್ಲಿ ಸೈನ್ಯ ಇಲಾಖೆಯಲ್ಲಿ ಚೀಫ್ ಕಮಾಂಡೆಂಟರ ಕಛೇರಿಯಲ್ಲಿ ವೃತ್ತಿಜೀವನ ಆರಂಭಿಸಿದರು. ಮುಂದೆ ಹಲವು ಹುದ್ದೆಗಳನ್ನು ಅಲಂಕರಿಸಿದರು. ಶ್ರೀಮತಿ.ಶೇಷಮ್ಮನವರೊಡನೆ ವಿವಾಹವಾದರು. ಇವರ ಪೂರ್ಣನಾಮ ಪುರೋಹಿತ ತಿರುನಾರಾಯಣಾಯ್ಯಂಗಾರ್ಯ ನರಸಿಂಹಚಾರ್ಯ. 'ಪು.ತಿ.ನ. ಎಂಬುದು ಅವರ ಕಾವ್ಯನಾಮ. ಪು.ತಿ.ನ.ರವರು ಭಾವಗೀತೆ, ಗೀತನಾಟಕ, ಭಾವನಾಚಿತ್ರ, ರಸಚಿತ್ರ, ಸಂಗೀತರೂಪಕ, ಪ್ರಬಂಧ, ವಿಚಾರ ಸಾಹಿತ್ಯ, ಸಣ್ಣಕಥೆ, ಗದ್ಯನಾಟಕ, ಮಹಾಕಾವ್ಯ ಹೀಗೆ ಹಲವು ಪ್ರಕಾರಗಳಲ್ಲಿ ತಮ್ಮ ಸಾಹಿತ್ಯ ಕೃಷಿಯನ್ನು ಮಾಡಿದ್ದಾರೆ. ಗೀತನಾಟಕಗಳು ಇವರ ಪ್ರಾತಿನಿಧಿಕ ಪ್ರಕಾರ. ಗೀತಾನಾಟಕಗಳನ್ನು ಸಾಹಿತ್ಯ ಪ್ರಮುಖವಾದವು, ಸಂಗೀತ ಪ್ರಮುಖವಾದುದ್ದೆಂದು ಸ್ಥೂಲವಾಗಿ ವಿಂಗಡಿಸಬಹುದು.

ಅಹಲ್ಯೆ', 'ಶಬರಿ', 'ವಿಕಟಕವಿವಿಜಯ', 'ಸತ್ಯಾಯನ ಹರಿಶ್ಚಂದ್ರ', ಮೊದಲ ವರ್ಗದವು. 'ಗೋಕುಲ ನಿರ್ಗಮನ', 'ಹಂಸದಮಯಂತಿ', ಮತ್ತು ಇತರ ರೂಪಕಗಳು ಎರಡನೆ ವರ್ಗದವು. ಪು.ತಿ.ನ.ರವರದು ಕ್ರಿಯಾಶೀಲಯುತವಾದ ಪ್ರವೃತ್ತಿ. ಇವರು ೧೯೫೨ರಲ್ಲಿ ಶಾಸನ ಸಭಾ ಕಛೇರಿಯಲ್ಲಿ ಸಂಪಾದಕತ್ವ ಮತ್ತು ೧೯೬೦–೧೯೬೩ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಇಂಗ್ಲೀಷ್ ಕನ್ನಡ ನಿಘಂಟು ಸಂಪಾದಕತ್ವವನ್ನು ಮಾಡಿದ್ದಾರೆ.

'ಹಣತೆ', 'ಮಾಂದಳಿರು', 'ಶಾರದಯಾಮಿನಿ', 'ಗಣೇಶದರ್ಶನ', 'ರಸಸರಸ್ವತಿ', 'ಮಲೆದೇಗುಲ' ಮುಂತಾದವುಗಳಲ್ಲಿ ನವೋದಯದ ಸೊಗಸಾದ ಪ್ರಕೃತಿ, ಪ್ರೇಮ, ಭಕ್ತಿ ಮತ್ತು ಆಧ್ಯಾತ್ಮಗಳು ಕವನಗಳ ವಸ್ತುಗಳಾಗಿವೆ. ಇವರ ಜೊತೆಗೆ ಅಂದಿನ ರಾಷ್ಟ್ರೀಯ ಎಚ್ಚರದ ದನಿಯೂ

ಸ್ಥಾನ ಪಡೆದಿದೆ. ಸಂಗೀತ ಪ್ರಿಯವಾದ ಮನಸ್ಸು ಹಾಡುಗಳನ್ನು ರಚಿಸಿದೆ. ಗದ್ಯನಾಟಕ, ಭಾವನಾಚಿತ್ರ, ಸಣ್ಣಕಥೆ, ಕಾವ್ಯಮೀಮಾಂಸೆ ಹಾಗೂ ಪ್ರಬಂಧಗಳನ್ನು ಕೊಟ್ಟಿದ್ದಾರೆ. ಇವರ 'ರಾಮಾಚಾರ್ಯ ನೆನಪು' ಹೆಸರಿಗೆ ತಕ್ಕಂತೆ ನೆನಪುಗಳ ಸಂಕಲನವಾಗಿದೆ. 'ಕಾವ್ಯ ಕುತೂಹಲ' ಅವರ ಕಾವ್ಯಮೀಮಾಂಸೆಯ ಮುಖ್ಯಕೃತಿ.[೨]

ನಂತರ ಪು.ತಿ.ನ. ೧೯೭೯ರಲ್ಲಿ ಅಮೇರಿಕಾ ಪ್ರವಾಸವನ್ನು ಕೈಗೊಂಡರು. ೧೯೮೧ರಲ್ಲಿ ೫೩ನೇಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು (ಚಿಕ್ಕಮಗಳೂರಿನಲ್ಲಿ).

ಡಾ. ಪು.ತಿ.ನರಸಿಂಹಾಚಾರ್ಯರ ಕೃತಿಗಳು

**ಕಾವ್ಯ:–**

೧. ಹಣತೆ

೨. ಎಂಬತ್ತರ ನಲುಗು

೩. ಇರುಳ ಮೆರಗು

೪. ಗಣೇಶ ದರ್ಶನ

೫. ಮಲೆದೇಗುಲ

೬. ಮಾಂದಳಿರು

೭. ರಸ ಸರಸ್ವತಿ

೮. ಶಾರದ ಯಾಮಿನಿ

೯. ಹಳೆಯ ಬೇರು ಹೊಸ ಚಿಗುರು

೧೦. ಹೃದಯವಿಹಾರಿ

೧೧. ಪು.ತಿ.ನ.ಸಮಗ್ರ ಕವನಗಳು

**ಪು.ತಿ.ನ.ರವರ ಮಹಾಕಾವ್ಯ:–**

ಶ್ರೀ ಹರಿಚರಿತೆ

**ಗೀತರೂಪಕಗಳು:–**

೧. ಅಹಲ್ಯೆ

೨. ಕವಿ

೩. ಕುಚೇಲಕೃಷ್ಣ

೪. ಗೋಕುಲನಿರ್ಗಮನ

೫. ದೋಣಿಯ ಬಿನದ

೬. ವಿಕಟಕವಿ ವಿಜಯ

೭. ಶಬರಿ

೮. ಶ್ರೀರಮಣಪ್ರಭ

೯. ಶ್ರೀರಾಮಪಟ್ಟಾಭಿಷೇಕ

೧೦. ಸತ್ಯಾಯನ ಹರಿಶ್ಚಂದ್ರ

೧೧. ಹಂಸದಮಯಂತಿ ಮತ್ತು ಇತರ ರೂಪಕಗಳು

**ನಾಟಕ**

ಜಾಹ್ನವಿಯ ಜೋಡಿದೇವಿಗೆ ಮತ್ತು ಇತರ ನಾಟಕಗಳು

**ಪ್ರಬಂಧ ಕತೆ ಮತ್ತು ವ್ಯಕ್ತಿಚಿತ್ರಗಳು:–**

೧. ಈಚಲ ಮರದ ಕೆಳಗೆ

೨. ಧ್ವಜರಕ್ಷಣೆ ಮತ್ತು ಇತರ ಕಥೆಗಳು

೩. ಧೇನುಕ ಪುರಾಣ

೪. ಯದುಗಿರಿಯ ಗೆಳೆಯರು

೫. ರಥಸಪ್ತಮಿ ಮತ್ತು ಇತರ ಚಿತ್ರಗಳು

೬. ರಾಮಾಚಾರಿಯ ನೆನಪು

**ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆ:–**

೧. ಕಾವ್ಯ ಕುತೂಹಲ

೨. ದೀಪರೇಖೆ

೩. ರಸಪ್ರಜ್ಞೆ

**ಅನುವಾದಗಳು:–**

೧. ಗಯಟೆಯ ಫೌಸ್ಟ್ ಭಾಗ–೧

೨. ನಮ್ಮಾಳ್ವಾರ್

೩. ಬದಲಿಸಿದ ತಲೆಗಳು

೪. ಕನ್ನಡ ಭಗವದ್ಗೀತೆ

೫. ಮಹಾಪ್ರಸ್ಥಾನ

೬. ಸಿರಿಬಾಯಿ ನುಡಿ(೧೦೦ಪದ್ಯಗಳು)

೭. ಸಮಕಾಲೀನ ಭಾರತೀಯ ಸಾಹಿತ್ಯ

**ಆಯ್ದ ಸಂಗ್ರಹಗಳು:–**

೧. ಅತಿಥಿ

೨. ಋತುಗೀತ ಲಹರಿ

೩. ನವಿಲುಗರಿ"[೩]

**ಪ್ರಶಸ್ತಿಗಳು:–**

ಕನ್ನಡದ ಹಿರಿಯರ ಕವಿಗಳಲ್ಲೊಬ್ಬರಾದ ಪು.ತಿ.ನ. ಅವರ ಸೇವೆಗಾಗಿ ಹಲವು ರೀತಿಯ ಪುರಸ್ಕಾರಗಳು ಲಭಿಸಿವೆ. ಅವುಗಳೆಂದರೆ ೧೯೬೫ರಲ್ಲಿ 'ಹಂಸದಮಯಂತಿ ಮತ್ತು ಇತರ ರೂಪಕಗಳು' ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ೧೯೬೬ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪುರಸ್ಕಾರ, ೧೯೭೧ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿ ಪ್ರದಾನ, ೧೯೮೯ರಲ್ಲಿ 'ಶ್ರೀಹರಿಚರಿತೆ'ಗೆ ಗ್ರಂಥಲೋಕ ಪ್ರಶಸ್ತಿ, ೧೯೯೧ರಲ್ಲಿ ಪಂಪಪ್ರಶಸ್ತಿ ಹಾಗೂ ೧೯೯೧ರಲ್ಲಿ ಭಾರತ ಸರ್ಕಾರದ 'ಪದ್ಮಶ್ರೀ' ಪ್ರಶಸ್ತಿಯು ಲಭಿಸಿದೆ.

ಕನ್ನಡ ಸಾಹಿತ್ಯ ರಂಗದ ಏಳಿಗೆಗೆ ದುಡಿದ ಪು.ತಿ.ನ. ೧೨-೧೦-೧೯೯೮ರಲ್ಲಿ ನಿಧನರಾದರು. ಇದರಿಂದ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಯಿತು. ಪು.ತಿ.ನ. ವಾಸ್ತವದಲ್ಲಿ ನಮ್ಮೊಂದಿಗಿಲ್ಲದಿದ್ದರೂ ಅವರ ಸಾಹಿತ್ಯದ ಮೂಲಕ ಅವರು ನಮ್ಮೊಂದಿಗೆ ಇರುವಂತೆಯೇ ಭಾಸವಾಗುತ್ತದೆ. ಇದೇ ಅವರ ಸಾಹಿತ್ಯದ ವಿಶಿಷ್ಟ್ಯತೆಯೆಂದರೆ ತಪ್ಪಾಗಲಾರದು.

**ಪು.ತಿ.ನ.ರವರ ವ್ಯಕ್ತಿತ್ವ:–**

ಕನ್ನಡ ಸಾಹಿತ್ಯ ಕ್ಷೇತ್ರ ಕಂಡ ಒಬ್ಬ ದೊಡ್ಡ ಕವಿಯೆಂದರೆ ಪು.ತಿ.ನ. ಪು.ತಿ.ನ.ರವರ ವ್ಯಕ್ತಿತ್ವದಲ್ಲಿ ನಾವು ಚಿಂತನಶೀಲತೆ, ಸೃಜನಶೀಲತೆ ಮತ್ತು ತತ್ವಾನ್ವೇಷಕ ಪ್ರವೃತ್ತಿಯನ್ನು ಕಾಣುತ್ತೇವೆ. ವೈಚಾರಿಕತೆ ತುಂಬಿದ ಹಲವಾರು ವಿಷಯಗಳನ್ನು ಅವರು ಸ್ವಾರಸ್ಯಕರವಾದ ಹಾಗೂ ಕೌತುಕ ಪ್ರವೃತ್ತಿಯಿಂದ ಓದುಗರಿಗೆ ತಿಳಿಯುವಂತೆ ಬರೆಯುತ್ತಾರೆ. ಆದರೆ ಸಂಸ್ಕೃತ ಪ್ರಧಾನವಾದ ಪದಬಂಧಗಳ ಶಿಸ್ತು ಕೂಡ ಅವರ ಬರಹದ ವೈಶಿಷ್ಟ್ಯ ಎಂದರೆ ತಪ್ಪಾಗಲಾರದು.

"ಪು.ತಿ.ನ.ಅವರ ವೈದಿಕ ಸಂಪ್ರದಾಯದ ಕೌಟುಂಬಿಕ ಹಿನ್ನೆಲೆಯು ಅವರ ಸಾಹಿತ್ಯ ಸೃಷ್ಟಿಯ ಮೇಲೆ ಪ್ರಮುಖವಾದ ಪ್ರಭಾವ ಬೀರಿದೆ"[೪] ಎಂಬ ಮಾತು ನಿಜವೆನಿಸುತ್ತದೆ. ಸಂಪ್ರದಾಯದ ಕುರಿತಾದ ಪು.ತಿ.ನ.ರವರಿಗೆ ಅತಿಯಾದ ಒಲವನ್ನು ಅವರ ಸಾಹಿತ್ಯದಲ್ಲಿ ಕಾಣಬಹುದು. ವೈಜ್ಞಾನಿಕ ಚಿಂತನೆಯನ್ನು ತಾತ್ವಿಕವಾಗಿ, ತಾರ್ಕಿಕವಾಗಿ ವಿವೇಚನೆಗೆ ಒಳಪಡಿಸುವ ಮನೋಧರ್ಮವನ್ನು ಸಹ ನಾವು ಗುರುತಿಸಬಹುದು.

ಸತ್ಯ, ಧರ್ಮ, ನ್ಯಾಯ ಮತ್ತು ಧರ್ಮ ಅರ್ಥ ಕಾಮಗಳು ಅವರ ಸಾಹಿತ್ಯದ ಪ್ರತಿಯೊಂದು ಅಂಶಗಳ ವಿಷಯದಲ್ಲಿ ಬರುತ್ತದೆ. ಆತ್ಮ ಮತ್ತು ಪರಮಾತ್ಮನ ನಡುವೆ ಇರುವ ಭವದ ಜಾಗರ ಸ್ಥಿತಿಯನ್ನು ಸಹ ಅವರು ಚಿತ್ರಿಸಿದ್ದಾರೆ. ಮನುಷ್ಯನ ಹಲವು ಪ್ರಕಾರದ ಮನೋವೈಕಲ್ಪಗಳಿಗೆ ಒಂದು ದಿವ್ಯಸ್ಪರ್ಶವಿದ್ದಂತೆ ಪು.ತಿ.ನ. ಸಾಹಿತ್ಯ. ಅದುದರಿಂದ ಕವಿ ಪು.ತಿ.ನ. ಕಾವ್ಯದ ಮೂಲ ರಸ. ಆ ರಸದ ಅನುಭವದಿಂದಲೇ ಭವಬಂಧನದಿಂದ ಮುಕ್ತಿ ಮತ್ತು ಅಂತರ್ ದೃಷ್ಟಿಯನ್ನು ಬೆಳೆಸಲು ಸಾಧ್ಯ ಎಂಬುದನ್ನು ಪು.ತಿ.ನ.ತಮ್ಮ ಸಾಹಿತ್ಯದ ಮೂಲಕ ಅನಾವರಣಗೊಳಿಸಿದ್ದಾರೆ.

ಪು.ತಿ.ನ.ರವರ ವ್ಯಕ್ತಿತ್ವ ಸಹೃದಯನನ್ನು ಸದಾ ಸ್ಫೂರ್ಜನಗೊಳಿಸಬೇಕು, ರಸಸ್ತರ ಜಾಗರ ಗೊಳಿಸಬೇಕೆಂದು ತುಡಿಯುತ್ತಿರುತ್ತದೆ. ಬದುಕಿನಲ್ಲಿ ಬರುವ ನೋವು, ನಲಿವು, ಸುಖ-ದುಃಖ, ಪ್ರೀತಿ, ದ್ವೇಷ, ಭಕ್ತಿ, ಪ್ರಕೃತಿ, ಸಾಮರಸ್ಯ ಇವುಗಳಿಗೆ ಮುಕ್ತವಾಗಿ ಅಭಿವ್ಯಕ್ತಿಸುವುದೇ ಅವರ ವ್ಯಕ್ತಿತ್ವದ ವೈಶಿಷ್ಟ್ಯ

**ಪು.ತಿ.ನ. ಸಾಹಿತ್ಯದ ಆಶಯ:-**

ಪು.ತಿ.ನ.ರವರ ಸಾಹಿತ್ಯ ಪ್ರವೃತ್ತಿ ವಿಶಾಲ ದೃಷ್ಟಿಯುಳ್ಳದ್ದು ಮತ್ತು ಶಮನೋನ್ಮುಖವಾದದ್ದು. ಚಿದಾನಂದವನ್ನು, ಸ್ಫೂರ್ತಿಯನ್ನು ನೀಡುವಂತಹದ್ದು. ಅವರ ಸಾಹಿತ್ಯದಲ್ಲಿ ಬರುವ ಕೆಲವು ಆಶಯಗಳನ್ನು ಈ ಕೆಳಗಿನ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಇಲ್ಲಿ ನೋಡಲಾಗಿದೆ.

**ಅ) ಭಕ್ತಿ:-** ಇವರ ಪ್ರತಿಯೊಂದು ಕಾವ್ಯ ರಚನೆಯಲ್ಲಿ ನಾವು ಭಕ್ತಿಯನ್ನು ಕಾಣುತ್ತೇವೆ ಹಾಗೂ ಆ ಭಕ್ತಿಯಲ್ಲಿಯೇ ಬಂಡಾಯದ ಸ್ವರೂಪವೂ ಕೂಡ ಅಡಗಿರುವುದು ಇವರ ಕಾವ್ಯದ ಸ್ವರೂಪ. ದೇವರು ಇದ್ದಾನೆಯೇ ಅಥವಾ ಅದು ಕೇವಲ ಒಂದು ನಂಬಿಕೆಯೇ ಎಂಬ ಹಲವು ಬಗೆಯ ಪ್ರಶ್ನೆಗಳಿಗೆ ಪು.ತಿ.ನ. ಈ ರೀತಿಯಾಗಿ ಉತ್ತರಿಸುತ್ತಾರೆ. "ದೇವರು ಇದ್ದಾನೆಯೇ ಇಲ್ಲವೋ ಎಂಬುದು ಚಿರಜಿಜ್ಞಾಸೆಯ ವಿಷಯ. ಆದರೆ ಮೈತ್ರಿಯುಂಟು, ದುರ್ದಮ್ಯವಾದ ತ್ರೈಮೂಲ್ಯಾನುಸರಣೆಯುಂಟು, ಮನುಷ್ಯ ತನ್ನನ್ನು ತಾನು ನೋಡಿ ಅರಿತು ಸಾಕ್ಷಾತ್ಕರಿಸಿಕೊಳ್ಳಬೇಕೆಂಬ ಉತ್ಕಟೇಚ್ಛೆಯುಂಟು, ಸ್ಥಿಮಿತ ಜ್ಞಾನದಿಂದ ಪ್ರಾಪ್ತವಾಗುವ ಭಕ್ತಿ ಪ್ರವೃತ್ತಿಗಳುಂಟು, ಶುಭಯೋಗಗಳೂ ಆಕಸ್ಮಿಕ ಘಟನೆಗಳು, ಸನ್ಮನುಷ್ಯರನ್ನು ಪ್ರೇರಿಸಿ ಪ್ರಕಟಗೊಳ್ಳುವಂಥವು. ಇವಕ್ಕೆ ಒಂದು ಅವಲಂಬನ ರೂಪವಾಗಿ "ದೇವರು" ಎಂಬ ಸಂಕೇತ ಮಾನವನ ಅಂತಃಕರಣದಲ್ಲಿ ಬಹಳ ಹಿಂದಿನಿಂದಲೂ ಅವಿರ್ಭವಿಸಿ ನೆಲೆಗೊಂಡಿದೆ" ಇದಕ್ಕೆ ಮಲೆದೇಗುಲದ ಒಂದು ಪದ್ಯದ ಸಾಲುಗಳನ್ನು ಇಲ್ಲಿ ಉದಾಹರಣೆಯಾಗಿ ನೋಡಬಹುದು.

**"ಉಗ್ರನೊಳಗುಗ್ರನ ಶಾಂತನೊಳು ಶಾಂತನ**
**ಉದಾಸೀನನೊಳುದಾಸೀನನನ್ನು**
**ಒಲಿದವರೊಳೆತ್ತುವನ ಹಗೆವವರೊಳಿಳಿಸುವವನ**

**ಇಂತೆಲ್ಲ ಪರಿಯೊಳೊ ಕಾಂಬನನ್ನು**

**ಅದು ಅವನು ಅವಳೆಂಬ ಬಗೆಬಗೆಯ ನೆಲೆಯೊಳಗೆ**

**ಸೊಗ ದುಕ್ಕಗಳನೆನಗೆ ತೋರುತಿಹನ**

**ಕುರಿತ ಚಿಂತಿಸೆ ಬೆರಗ ತರುವವನ ಎಂತು ನಾ**

**ಮರೆವೆ ಸಕಲಾಂತಸ್ಥ ವಿಪುಲಮುಖನ**

**ಅವಗೆ ನಾನೀ ಮಾಲೆಯೊಳಗಾದೆ ಭವಲೀಲೆಯು ದೀಕ್ಷಣಗವಾಕ್ಷ**

**ಎನ್ನ ಹಂಕೃತಿ ಪದದೊಳಿದನೆಲ್ಲ ನಿರುಕಿಸುತ ಬಿನದಗೋಳೆಸರ್ವಪಕ್ಷ"[5]**

**ಆ) ಬಂಡಾಯ:–** ಆಕ್ರೋಶಕ್ಕೆ, ತೀವ್ರತೆಗೆ ಒಳಗೊಂಡು ಭಾವನೆಗಳಿಗೆ ಮಹತ್ವಕೊಡದೆ ಕೇವಲ ಕೋಪ ವ್ಯಕ್ತಪಡಿಸುವ 'ಭಾವಾಭಿವ್ಯಕ್ತಿ' ಅದು ಬಂಡಾಯವೆನಿಸುವುದಿಲ್ಲ. ನಮ್ಮ ಭಕ್ತಿಯಲ್ಲಿಯೇ ಬಂಡಾಯವಿರಬೇಕು. ಮನುಷ್ಯ ತನ್ನನ್ನು ತಾನು ಅರಿತು, ತನ್ನಲ್ಲಿರುವ ಕೆಡುಕನ್ನು ಆತ್ಮಜಿಜ್ಞಾಸೆಗೆ ಒಳಪಡಿಸುವುದೇ ಬಂಡಾಯ ಎನ್ನುತ್ತಾರೆ ಪು.ತಿ.ನ.

**ಇ) ಭಾಗವತ ಪ್ರಜ್ಞೆ:–** ಪು.ತಿ.ನ. ರವರು ಸಂಪ್ರದಾಯನಿಷ್ಟ ಸಾಹಿತಿಗಳು. ತತ್ವಯುತ ಪುರುಷಾರ್ಥಗಳ ಬಗ್ಗೆ ವಿವರಿಸುವಾಗ ಅವರು ಭಗವದ್ಗೀತೆ, ಉಪನಿಷತ್ತು ಮತ್ತು ಪರಮಾತ್ಮನನ್ನು ಕುರಿತು ಹೇಳುತ್ತಾರೆ. "ಜೀವಾತ್ಮನು ಭಗವದ್ ಸಾನಿಧ್ಯ ಪಡೆಯಲು, ಜೀವಾತ್ಮನಿಗೆ ತಾನು ಭಗವಂತನ ಶೇಷ, ನಾನು ಮಾಡುವುದು ಭಗವಂತನ ಸಾಮರ್ಥ್ಯದಿಂದಲೇ, ಫಲವೂ ಅವನದೇ ಎಂಬ ನಿಶ್ಚಲ ಭಕ್ತಿ ಇರಬೇಕು ಎನ್ನುತ್ತಾರೆ ಪು.ತಿ.ನ."[6] ಹರಿಭಕ್ತಿ ಭಾವವನ್ನು, ಸಾತ್ವಿಕ ಭಾವ ಮತ್ತು ಸಮರ್ಪಣ ಪ್ರಭಾವವನ್ನು ತಮ್ಮ ವಿಚಾರಗಳ ಮೂಲಕ ತಿಳಿಯಪಡಿಸುತ್ತಾರೆ. ಈ ಭಾಗವತ ಪ್ರಜ್ಞೆಯ ಅರಿವು ಕವಿಯಾದವನಿಗಿರಬೇಕೆಂಬುದೇ ಅವರ ಆಶಯ.

**ಈ) ಜೀವನಪ್ರೇಮ:–** ಬದುಕು ಮಾನವನ ಪ್ರತಿಯೊಂದು ಸ್ತರಕ್ಕೂ ಒಂದು ದಿವ್ಯಚೇತನ ಎಂದು ಪು.ತಿ.ನ. ಅಭಿಪ್ರಾಯ ಪಡುತ್ತಾರೆ. ಬದುಕಿನ ವಾಸ್ತವತೆಯ ಕುರಿತು ಹಲವು ಸಂದರ್ಭಗಳನ್ನು ಅವರು ತಮ್ಮ ಕೃತಿಗಳಲ್ಲಿ ಅನಾವರಣ ಮಾಡಿದ್ದಾರೆ. ಬದುಕನ್ನು ಯಥಾವತ್ತಾಗಿ ಸ್ವೀಕರಿಸುವ ಪರಿ ಅವರದು. ಜೀವನದೊಂದಿಗೆ ಸಾಮರಸ್ಯ, ಪ್ರೇಮ ಇರಬೇಕಾದುದು ಸಹಜ. ಇದನ್ನು ಒಂದು ಕೌಟುಂಬಿಕ ನೆಲೆಯ ಆಧಾರದ ಮೇಲೆ ವಿವರಿಸುತ್ತಾರೆ. ಬದುಕಿನ ರಾಗದ್ವೇಷ, ಸುಖ–ದುಃಖ, ನೋವು–ನಲಿವು ಇವುಗಳನ್ನು ಭವಜಾಗರದ ತೀವ್ರ ಅಪೇಕ್ಷೆಗಳು ದೈವ ನೀಡಿದಂತೆ ಪಡೆಯುವುದೇ ನಮ್ಮ ಕೆಲಸ ಎಂಬುದೇ ಅವರ ನಿಲುವು. ನಮಗೆ ದೊರೆತಿರುವ ಜೀವನದ ಕುರಿತು ನೀರಸಭಾವವಿರದೇ ಅದನ್ನು ನಿತ್ಯವೂ ಚಿರಯೌವನಯುತವಾಗಿ, ರಸಭರಿತವಾಗಿ ರೂಪಿಸಿಕೊಳ್ಳುವುದು ನಮ್ಮ ಕೈಯಲ್ಲಿಯೇ ಇದೆ ಎಂದು ಹೇಳುತ್ತಾರೆ. ಪು.ತಿ.ನ. ಅವರ ಕಾವ್ಯ ಪ್ರೇರಣೆಯು ಬದುಕಿನಿಂದ ನೇರವಾಗಿ ಗ್ರಹಿಸಲ್ಪಟ್ಟಿದೆ.

**ಉ) ನಿಸರ್ಗಪ್ರೀತಿ:-** ಪ್ರಕೃತಿ ವರ್ಣನೆಯು ಇತರೆ ಕವಿಗಳಿಗಿಂತ ಪು.ತಿ.ನ.ರವರಲ್ಲಿ ವಿಶಿಷ್ಟವು ವಿಭಿನ್ನವೂ ಕೂಡ ಆಗಿದೆ. ಪ್ರಕೃತಿಯ ವರ್ಣನೆಯಲ್ಲಿಯೇ ದೈವತ್ವದ ಅಂಶವನ್ನು, ರಸಸ್ತರ ಜಾಗರಣವನ್ನು ಮಾಡಿಸುವ ಕಲೆಯು ಕೂಡ ಅವರಿಗೆ ಮೀಸಲು. ಅವರು ಪ್ರಕೃತಿಯ ಪ್ರತಿಯೊಂದು ಅಂಶವನ್ನು(ಪ್ರಾಣಿ, ಪಕ್ಷಿ, ಕೆರೆ, ಪರ್ವತ, ಋತು, ಚಂದ್ರ, ನಕ್ಷತ್ರ) ಬಳಸಿಕೊಂಡಿದ್ದಾರೆ. ತಮ್ಮ ಕಾವ್ಯಕೌಶಲ ಗುಣದಿಂದ ಅವುಗಳಿಗೂ ಕೂಡ ಜೀವತುಂಬುವ, ತೇಜಸ್ಸು ತರುವ ಕಾರ್ಯವನ್ನು ಮಾಡಿದ್ದಾರೆ. ಇದರಿಂದ ತಿಳಿಯುವುದೇನೆಂದರೆ 'ಪ್ರಕೃತಿ' ಎಂದರೆ ಅವರಿಗೆ ಎಷ್ಟು ಪ್ರಿಯವಾದುದು ಎಂಬುದು. "ಪು.ತಿ.ನರಸಿಂಹಚಾರ್ಯರು ತಾತ್ವಿಕ, ಪ್ರಕೃತಿಯ, ಸೂಕ್ಷ್ಮದೃಷ್ಟಿಯ ವಿಖ್ಯಾತ ಕವಿಗಳು"[2] ಪ್ರಕೃತಿಯ ಸೂಕ್ಷ್ಮ ಕಲ್ಪಕಥೆಗಳಿಂದ, ಅದು ವ್ಯಕ್ತಪಡಿಸುವ ವಿಶೇಷ ಅಂಶಗಳಿಂದ ಅವರ ಕಾವ್ಯ ವ್ಯಕ್ತಿತ್ವವೂ ವ್ಯಕ್ತಗೊಳ್ಳುತ್ತದೆ. ನಿಸರ್ಗದ ಶಾಂತಚಿತ್ತ ಮತ್ತು ನಿರ್ಮಲವಾದ, ಇಂಪಾದ ಚಟುವಟಿಕೆಗಳಿಂದ ಮನಸ್ಸು ಪುಳಕಿತಗೊಳ್ಳುತ್ತದೆ. ಇಂತಹ ಭಾವಾಭಿವ್ಯಕ್ತಿಗೆ ಪು.ತಿ.ನ. ಪ್ರಕೃತಿ ಪ್ರಜ್ಞೆಯೇ ಕಾರಣ. ನಿಸರ್ಗದ ವಿವಿಧ ಚಲನೆಗಳನ್ನು ತಮ್ಮ ಭಾವಲಹರಿಯಲ್ಲಿ ಹಿಡಿದಿಡುವ ಪ್ರಯತ್ನ ನಡೆಸಿದ್ದಾರೆ. ಪ್ರಕೃತಿಯ ವರ್ಣನೆಯು ಭವದಿಂದ ಭಾವಲೋಕಕ್ಕೆ ಕರೆದ್ಯೊಯುವುದರಲ್ಲಿ ಎರಡು ಮಾತಿಲ್ಲ.

ಇದಕ್ಕೆ ಉದಾಹರಣೆಯಾಗಿ "ಮಾಗಿಯ ಮಾಂದಳಿರು" ಕವನದಲ್ಲಿ ಚಳಿಗಾಲದ ಸೊಗಸಾದ ವರ್ಣನೆಯು ಮತ್ತು ಬದುಕಿನ ಸಾರ್ಥಕತೆಯು ಎರಡು ಒಟ್ಟೊಟ್ಟಿಗೆ ಅನಾವರಣಗೊಂಡಿರುವುದನ್ನು ಕಾಣಬಹುದು.

**"ನಿನ್ನ ಬಾಳು ಸಾರ್ಥಬಾಳು,**
**ಸಾವು ಬದುಕಿಗಿಂತ ಮೇಲು**
**ನಿನ್ನ ಹುಟ್ಟಿನಿಂದ ವನದ**
**ಬಂಜೆ ಬಾಳು ಬೆಸಲೆಯಾಯ್ತು;**
**ನಿನ್ನ ಸಾವಿನಿಂದ ಜಗದ**
**ಮಾಗಿ ಸೆರೆಯು ಸಡಿಲವಾಯ್ತು**
**ಇಂದು ನೀನು ಕೆಡೆದ ಇರುಳೆ**
**ಸುಪ್ತವನದ ಉದಯವಾಯ್ತು;**
**ಇಂದು ಬಿಗಿದ ನಿನ್ನ ಕೊರಳ**
**ನವೋದಯದ ಕಹಳೆಯಾಯ್ತು;**
**ಸೋತು ಗೆದ್ದ ಧೀರ ನೀನು!**
**ಸತ್ತು ಬದುಕಿದ ಮರ ನೀನು!**

**ಧನ್ಯ ನೀನು,**

**ಮಾನ್ಯ ನೀನು"**[೧೮]

ಪು.ತಿ.ನ.ಅವರ ಪ್ರಕೃತಿ ಕವನಗಳಲ್ಲಿ 'ಚಿಕುಹೂ' ಅತ್ಯಂತ ಪ್ರಭಾವಶಾಲಿ ಕವನವಾಗಿದೆ. "ಮರಮರಳಿ ಕುಕಿಲುವ ಕೋಗಿಲೆಯ ವರ್ಣನೆಯನ್ನು ಕವಿ ಅತ್ಯಂತ ತನ್ಮಯನಾಗಿ ಇಲ್ಲಿ ಮಾಡಿದ್ದಾರೆ"[೧೯]

**ಚಿಕುಹೂ ಚಿಕುಹೂ ಚಿಕುಹೂ**

**ಸನ್ನೆಯವೊಲು ಮುಹುರ್ಮುಹು**

**ಆರೆಚ್ಚರಕೀ ತುತ್ತುರಿ**

**ಬಾನೊಳು ಮೊಳಗುತಿದೆ?**

**ಎನ್ನ ಕಿವಿಯೊಳೀ ಸವಿದನಿ**

**ಸಿಂಪಿ ಸಂತಿದೆ ಸೊದೆಸೀರ್ವನಿ**

**ವಿಸ್ಮೃತಿಗೈದಿರುವಾತ್ಮವ**

**ನುಜ್ಜೀವಿಪ ತೆರೆದೆ.**

ಕೋಗಿಲೆಯ ಚಿಕುಹೂ ನಾದ ಕವಿಯ ಮನಸ್ಸನ್ನು ಸೂರೆಗೊಳ್ಳುತ್ತಿರುವ ಬಗೆಯನ್ನು ಕವಿ ಈ ಪದ್ಯಭಾಗದಲ್ಲಿ ಹೇಳುತ್ತಾರೆ. ಆ 'ಚಿಕುಹೂ' ನಾದಕ್ಕೆ ಮನಸೋತ ಬಗೆ, ಅದರ ವರ್ಣನೆ ಈ ಕವನದಲ್ಲಿದೆ. "ಪ್ರಕೃತಿಯೆಂದರೆ ಬರೀ ಬೆಟ್ಟ, ಕಾಡು, ಹೊಳೆ, ಮಳೆ, ಮೋಡಗಳಲ್ಲ. ಸಮಸ್ತ ಜಗತ್ತು, ಪ್ರಕೃತಿ; ಅದರ ವಿಷಯದ ಕವಿ ವರ್ಣನೆಗಳೆಲ್ಲಾ ಆತ್ಮಾಂಶಗಳನು ಬಿಡಿಸಿ ತೋರತಕ್ಕವು"[೨೦] ಹೀಗೆ ಪು.ತಿ.ನ.ಪ್ರಕೃತಿಯಲ್ಲಿ ರಸಜಾಗರಸ್ಥಿತಿಯನ್ನು ಕಾಣುತ್ತಾರೆ. ಪ್ರಕೃತಿಯಲ್ಲಿ ದೈವತ್ವವನ್ನು ಹಾಗೂ ಆತ್ಮಶುದ್ಧಿಯನ್ನು ಕಾಣುವ ಬಗೆಯನ್ನು ಅದರ ವಿವಿಧ ಮುಖಗಳನ್ನು ಪ್ರಕೃತಿ ವರ್ಣನೆಯಲ್ಲಿ ಅನಾವರಣಗೊಳಿಸಿದ್ದಾರೆ.

ಪ್ರಕೃತಿಯ ಲೀಲೆಯನ್ನು ಪುರಾಣಪುರುಷನಿಗೋ, ಮಹಾಶಕ್ತಿಗೋ ಹೋಲಿಸಿದ್ದಾರೆ ಪು.ತಿ.ನ"[೨೧] ಪು.ತಿ.ನ.ರವರ ಪ್ರಕೃತಿ ವರ್ಣನೆಯಲ್ಲಿ ಬೆಳದಿಂಗಳು, ಮೋಡಗಳು, ನಕ್ಷತ್ರಗಳು ಇವೆಲ್ಲವೂ ಸೇರಿಕೊಂಡಿರುವುದು ಒಂದು ಸ್ವಾರಸ್ಯಕರ ಸಂಗತಿ. ಪ್ರಕೃತಿಯು ಮನುಷ್ಯ ಜೀವನದೊಂದಿಗೆ ಹೊಂದಿರುವ ಅವಿನಾಭಾವ ಸಂಬಂಧವನ್ನು ವರ್ಣಿಸಿದ್ದಾರೆ. ಮಾನವನ ಸಂಬಂಧಗಳು ಹೇಗೆ ಪ್ರಕೃತಿ ಸಹಜವೋ ಅಷ್ಟೇ ಸಹಜ ಪ್ರಕೃತಿಯು ಎಂಬ ನಿಲುವು ಅವರದು. ಹಾಗೆಯೇ ಪ್ರಕೃತಿ ಒದಗಿಸಿರುವ ಈ ಸುಂದರ ಅನುಭವಕ್ಕೆ ಕೃತಜ್ಞತಾ ಭಾವವೂ ಅವರಲ್ಲಿರುವುದು ಒಂದು ಗುಣ ವಿಶೇಷತೆ–

ಊ) **ಪ್ರಣಯ** :– ಪು.ತಿ.ನ. ಅವರ ಕವನಗಳಲ್ಲಿ ವ್ಯಕ್ತವಾಗುವ ಪ್ರಣಯ ನಿರ್ಮಲವಾದದ್ದು. ಪು.ತಿ.ನ. ಅವರ 'ಪ್ರತೀಕ್ಷೆ' ಎಂಬ ಕವನದಲ್ಲಿ ಬರುವ ಹೆಣ್ಣು ಒಬ್ಬ ಅಭಿಸಾರಿಕೆಯಾದರೂ ಅಲ್ಲಿ ಕವಿ ಒಂದು

ನಿರ್ಮಲ ಪ್ರಣಯದ ಅನಾವರಣವನ್ನು ಮಾಡುತ್ತಾರೆ. ಇವರ ಕವನಗಳಲ್ಲಿ ಕಂಡು ಬರುವ ಪ್ರಣಯದ ವರ್ಣನೆಯೂ ಜಡತ್ವಕ್ಕೂ ಜೀವ ಚೈತನ್ಯ ತುಂಬುವಂತಹದ್ದು- ಉದಾ:-

**ಎಲ್ಲ ಕರಣವ ಕಿವಿಗೆ ಹೊಂದಿಸಿ**
**ನಿಲ್ಲುವೆನು ದನಿಯರಸುತ**
**ಅನ್ಯಗಿಲ್ಲದ ಧೀರ ಗಮನದ**
**ಛಂದವಾಲಿಪ ನಲ್ಲದೊಂದನೆ**
**ತುಡಿಯುವೆದೆಯೊಳು ಹರಸುತ**

ಎಂಬ ಈ ಪದ್ಯದ ಸಾಲುಗಳಲ್ಲಿ ನೈಜ ಪ್ರಣಯವನ್ನು ಸೂಕ್ಷ್ಮವಾಗಿ ಗಮನಿಸಬಹುದು.

**ಋ) ಆಧ್ಯಾತ್ಮ :-** ಪು.ತಿ.ನ.ರವರ ಕವನಗಳಲ್ಲಿ ಆಧ್ಯಾತ್ಮವು ಎತ್ತಿಕಾಣುತ್ತದೆ. ಅವರಲ್ಲಿ ಮುಕ್ತಿಯ ಹಂಬಲವನ್ನು ಹೊತ್ತ ಚಿಂತನೆಯೇ ಹೆಚ್ಚು. ಭವದ ಆಕರ್ಷಣೆಯನ್ನು ತೊರೆದು ರಸಸ್ತರಕ್ಕೇರುವುದರಲ್ಲೇ ಆತ್ಮ ಶಮನ ಮಾಡಿಕೊಳ್ಳುವುದು. ಈ ರೀತಿಯಾದ ಆತ್ಮದ ಕುರಿತಾದ ತತ್ವಾನ್ವೇಷಣೆಯೇ ಆಧ್ಯಾತ್ಮದ ಹೊಸ ಬಗೆ. ಇದನ್ನೇ ನಾವು ಪು.ತಿ.ನ.ರವರ ಕವನಗಳಲ್ಲಿ ಕಾಣುತ್ತೇವೆ. ಪು.ತಿ.ನ.ರವರು ಅಳವಡಿಸಿಕೊಂಡ ರೀತಿ, ಸನಾತನ ಮೌಲ್ಯಗಳಿಗೆ ಬದ್ಧವಾಗುತ್ತಲೇ ಆಧುನಿಕತೆಗೆ ತೆರೆದುಕೊಂಡ ಸಮನ್ವಯ, ಸಾಧನೆಯ ಪಥದಲ್ಲಿ ಮುಂದೊತ್ತುತ್ತಲೇ ವಿವಿಧ ಮಾರ್ಗಗಳನ್ನು ಕಂಡು ಕೊಂಡ ಅಭಿವ್ಯಕ್ತಿ ಕ್ರಮ"[9] ಎಂಬುದು ಹೆಚ್ಚು ಸ್ಪಷ್ಟವಾಗಿದೆ.

**ಎ) ಚಿಂತನಶೀಲತೆ:-** ಪು.ತಿ.ನ. ತಮ್ಮ ಚಿಂತನ ಪ್ರವೃತ್ತಿಯಿಂದ ಸತ್ಯವನ್ನು ಪ್ರತಿಪಾದಿಸುತ್ತಾರೆ. ಇದು ಅವರ ಕಾವ್ಯದ ವೈಶಿಷ್ಟ್ಯಗಳಲ್ಲಿ ಒಂದು. ಸತ್ಯ ಮತ್ತು ಪ್ರತೀಕಗಳನ್ನು ಎದುರುಬದುರಾಗಿ ನಿಲ್ಲಿಸುವ ಪರಿ ಅವರದು. ಮಾನವ ಪ್ರಕೃತಿ ಸಹಜವಾದ ಗುಣಕ್ಕೆ ಆತನು ಸ್ಪಂದಿಸುವ ಬಗೆಯನ್ನು ಚಿಂತನೆಗೆ ಒಳಪಡಿಸುವುದೇ ಅವರ ಕಾವ್ಯದ ತತ್ವ. ಪು.ತಿ.ನ.ರವರು ತಮ್ಮ ಮನಸ್ಸಿನಲ್ಲಿ ಮೂಡಿದ ಭಾವನೆಗಳಿಗೆ ಸ್ಪಂದಿಸುತ್ತಾ ಏನು? ಏಕೆ? ಎಂಬ ತಾತ್ವಿಕ ಚಿಂತನಾಶೀಲತೆಯನ್ನು ಬೆಳೆಸಿಕೊಂಡು ಬಂದವರು. ಸುಪ್ತ ಪ್ರಜ್ಞೆಯ ವಿಭಿನ್ನ ಮುಖಗಳನ್ನು, ಬದುಕಿನ ವಾಸ್ತವತೆಯನ್ನು, ರಸಸ್ಥಿತಿಯನ್ನು ಹಾಗೂ ಅದು ಸಹೃದಯನಿಗೆ ಆನಂದವನ್ನು, ಭವದ ಉಪಶಮನವನ್ನು ಮಾಡುತ್ತಿದೆಯೇ? ಇಲ್ಲವೇ? ಎಂಬ ಹಲವು ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಪಡೆದ ನಂತರವೇ ಅವರು ಕಾವ್ಯರಚನೆಯನ್ನು ಕೈಗೊಳ್ಳುವುದು. ಈ ಆಶಯವು ಅವರ ಹಲವಾರು ಸಾಹಿತ್ಯಿಕ ಅಭಿವ್ಯಕ್ತಿಗಳಲ್ಲಿ ನಾವು ಕಾಣಬಹುದು. ಅವರ ಈ ನಿಲುವಿಗೆ ಈ ಪದ್ಯದ ಎರಡು ಸಾಲು ಉತ್ತಮ ಉದಾಹರಣೆಗಳು-

**ಏನೇತಕೆ ಎಂಬುದೆ ಹವ್ಯಾಸ**
**ಇದನುಳಿದಾಗದು ಪದ ವಿನ್ಯಾಸ (ಅಹಲ್ಯೆ ಗೀತನಾಟಕ)**

ಏ) **ಜಿಜ್ಞಾಸೆ:-** ಬುದ್ಧಿಗ್ರಾಹ್ಯವಾದ ಪರಿಕಲ್ಪನೆಗಳ ನೆಲೆಯಲ್ಲಿಯೇ ಶ್ರೀಪು.ತಿ.ನ. ರವರ ಸಾಹಿತ್ಯ ಮೈದಳೆದಿದೆ. ಅನುಭವ-ಪ್ರತಿಮೆ ಇವುಗಳ ಸಮನ್ವಯ ಇವರ ಕಾವ್ಯದ ನೆಲೆಯಾಗಿದೆ. ಕಾವ್ಯ, ಜೀವನ, ವಾಸ್ತವತೆ, ಸತ್ಯ, ನ್ಯಾಯ, ನೀತಿ, ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಮೌಲ್ಯಗಳಿಗೆ ಒಂದು ಜಿಜ್ಞಾಸೆಯುಕ್ತವಾದ ಅರಿವು ಮೂಡಿಸುವುದೇ ಅವರ ಕಾವ್ಯದ ವೈಖರಿ. ಆತ್ಮ ಮತ್ತು ಪರಮಾತ್ಮನ ಕುರಿತ ಜಿಜ್ಞಾಸೆಯೂ ಅತ್ಯಂತ ಮಹತ್ವದಾಗಿದೆ. ಭವಸ್ತರದ ಮತ್ತು ಭಾವಸ್ತರದ ಚಿಂತನೆಗಳಿಗೆ ಒಂದು ಮೂರ್ತ ರೂಪವನ್ನು ಒದಗಿಸುವುದೇ ಅವರ ಕಾವ್ಯಜಿಜ್ಞಾಸೆಯುಕ್ತ ಮನಸ್ಸಿಗೆ ಮತ್ತು ಅವರ ಕಾವ್ಯ ಕಲೆಯ ಜೀವಂತಿಕೆಗೆ ಮೂಲ ಕಾರಣವಾಗಿದೆ. ವಿಜ್ಞಾನಿಯ ದೃಷ್ಟಿ ಮತ್ತು ಕವಿ ಹೃದಯ ಸೃಷ್ಟಿ. ಈ ಎರಡು ತತ್ವಗಳು ಪು.ತಿ.ನ.ರವರ ಜಿಜ್ಞಾಸಾತ್ಮಕ ಮನೋಭಾವಕ್ಕೆ ಉದಾಹರಣೆಯಾಗಿದೆ.

ಐ) **ಪೌರಾಣಿಕತೆ:-** ವೇದ, ಉಪನಿಷತ್ತು, ಪುರಾಣ, ಆಗಮ, ತರ್ಕ ಮುಂತಾದ ಹಲವು ಸಾಂಪ್ರದಾಯಿಕ ಮೌಲ್ಯಗಳಲ್ಲಿ ಪಾಂಡಿತ್ಯವನ್ನು ಪಡೆದಿದ್ದರು. "ಭೌತಿಕ ನೆಲೆಯಿಂದ ಹೊರಟ ಲೌಕಿಕವಾದಿ ಮತ್ತು ನಿತ್ಯದ ಜಗತ್ತಿನ ರೂಪಕಗಳು. ಎರಡನೆಯದು ಲೌಕಿಕದ ಕಣ್ಣಳತೆಗೆ ದಕ್ಕದ ಆದರೆ ಭಾವನಾತ್ಮಕ ಪುರಾಣರೂಪಿಯಾದ ಹಾಗೂ ಧಾರ್ಮಿಕತೆಯ ನಡುವನ ಇಬ್ಬಂದಿತನದಲ್ಲಿ ನಡೆಯುತ್ತಿರುವ ಊರ್ಧ್ವಮುಖಿಯಾದ ಚೈತನ್ಯ"[೧೩] ಎಂದು ಕೆ.ಕೇಶವಶರ್ಮ ಪು.ತಿ.ನ.ರವರ ಪೌರಾಣಿಕ ಚಿಂತನೆಗಳನ್ನು ಕುರಿತು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಇವರ ಸಾಹಿತ್ಯಿಕ ಅಭಿವ್ಯಕ್ತಿಗಳಲ್ಲಿ ಭಗವದ್ಗೀತೆ ಮತ್ತು ಸಂಪ್ರದಾಯತತ್ವ ಇವು ಪ್ರಧಾನವಾಗಿ ಕಂಡುಬರುತ್ತದೆ. ಏಕೆಂದರೆ ಪು.ತಿ.ನ. ಸಂಪ್ರದಾಯನಿಷ್ಠೆ ಕವಿಯಾಗಿದ್ದರು. ಈ ಮೌಲ್ಯಗಳ ಹಿನ್ನೆಲೆಯಲ್ಲಿ ಜೀವಾತ್ಮ-ಪರಮಾತ್ಮಗಳೆಂಬ ಧಾರ್ಮಿಕ ಅಂಶಗಳಿಗೆ ಒಂದು ವೈಚಾರಿಕವಾದ ಮತ್ತು ಧಾರ್ಮಿಕವಾದ ನಿಲುವುಗಳನ್ನು ನೀಡುತ್ತಾರೆ. ಇವುಗಳನ್ನು ವಿವರಿಸುವಾಗ ಚಾರಿತ್ರಿಕವಾದ ಮತ್ತು ಸಾಂಸ್ಕೃತಿಕವಾದ ಆಯಾಮವನ್ನು ಒದಗಿಸಿದ್ದಾರೆ. ಬದುಕಿನ ವಾಸ್ತವಿಕ ನೆಲೆಗಳಿಗೆ ತಕ್ಕ ಉತ್ತರಗಳನ್ನು ನೀಡುತ್ತಾರೆ. ಇದಕ್ಕೆ ಈ ಮಾತುಗಳನ್ನು ಇಲ್ಲಿ ಗಮನಿಸಬಹುದು. "ನಮ್ಮ ಪುರಾಣದ ದಶಾವತಾರದ ಕಲ್ಪನೆ ಅವರಿಗೆ ವ್ಯಕ್ತಿತ್ವದ ವಿಕಾಸದ ಹಂತಗಳಾಗಿ ಕಂಡಿವೆ"[೧೪] ಹೀಗೆ ವ್ಯಕ್ತಿತ್ವದ ವಿಕಾಸದ ಹಿನ್ನೆಲೆಯಾಗಿ, ಜೀವನ್ಮುಖಿಯಾಗಿ ವಾಸ್ತವಕ್ಕೆ ಹತ್ತಿರವಾಗಿ ಪು.ತಿ.ನ.ರವರು ತಮ್ಮ ಸಾಹಿತ್ಯದ ಆಶಯಗಳಲ್ಲಿ ಒಂದಾದ ಪೌರಾಣಿಕತೆಯನ್ನು ತಮ್ಮ ಸಾಹಿತ್ಯದುದ್ದಕ್ಕೂ ಬಳಸಿಕೊಂಡಿದ್ದಾರೆ.

ಒ) **ಸಾಮಾಜಿಕತೆ:-** ಕೇವಲ ಆಧ್ಯಾತ್ಮ, ರಸಪ್ರಜ್ಞೆ ಇವುಗಳನ್ನೇ ತಮ್ಮ ಕಾವ್ಯದ ಪ್ರಧಾನವಸ್ತುವಾಗಿರದೆ, ಸಾಮಾಜಿಕ ಪ್ರಜ್ಞೆಯು ಅವರ ಬೆಳವಣಿಗೆಯ ಪ್ರಧಾನ ಅಂಶವಾಗಿತ್ತು. ಆಳವಾಗಿ ನಿಸರ್ಗವನ್ನು ಅವರು ಹೇಗೆ ಗ್ರಹಿಸಿದರೋ ಅದೇ ಮನೋಧರ್ಮದಿಂದಲೇ ಪು.ತಿ.ನ.ಸಾಮಾಜಿಕ ಚಿಂತನೆಗಳನ್ನು ತಮ್ಮ

ಬರವಣಿಗೆಯಲ್ಲಿ ಅಳವಡಿಸಿಕೊಂಡರು. ಸಾಮಾಜಿಕ ಮೌಲ್ಯಗಳನ್ನು ಸಾಮಾಜಿಕ ಪ್ರತೀಕಗಳಿಂದಲೇ ಅಭಿವ್ಯಕ್ತಿಸುವ ಕ್ರಮ ಅನನ್ಯವಾದುದು. ಇದನ್ನು ಅವರ 'ಪತಿತಪಾವನ' ಎಂಬ ಕವನದಲ್ಲಿ ಮುಕ್ತವಾಗಿ ಅಭಿವ್ಯಕ್ತಿಸಿರುವುದನ್ನು ನಾವು ಕಾಣಬಹುದು.

**"ಪತಿತಳಿರುವ ಗುಡಿಯೊಳಿಂದು**
**ತೀರ್ಥವನ್ನು ತೆಗೆವರುಂಟೆ**
**ಅವಳ ನೆಳಲ ಸೋಂಕಿನಿಂದ**
**ಅಶುಚಿ ದೇಗುಲ!"**
**ಅವಳ ಮೊದಲು ಹೊರಗೆ ದೂಡಿ;**
**ಮಂತ್ರ ಜಪಿಸಿ ನೀರ ಚೆಲ್ಲಿ**
**ಇಲ್ಲದಿರಲು ನಿಲ್ಲೆವಿಲ್ಲಿ!**
**ಎಂದ ಕೂಗದು"**[೧೫]

ಒಬ್ಬ ಬಡ ವಿಧವೆಯೂ ದೇವಾಲಯದಲ್ಲಿ ಪ್ರವೇಶಿಸಿದ್ದರಿಂದ ಆ ಗುಡಿಯೂ ಅಶುಚಿಯಾಯಿತೆಂದು ಜನರು ಆಕೆಯನ್ನು ಹೊರನೂಕುವ ಒಂದು ಸಾಮಾಜಿಕ ಚಿತ್ರಣವನ್ನು ಪು.ತಿ.ನ. ಇಲ್ಲಿ ನೀಡಿದ್ದಾರೆ. ಸಮಾಜದಲ್ಲಿ ಈ ಅಶುಭ-ಶುಭ, ಮೇಲು-ಕೀಳೆಂಬ ಪಿಡುಗು ಹೇಗೆ ಹಬ್ಬಿದೆ ಎಂದು ಸೊಗಸಾಗಿ ವ್ಯಕ್ತಪಡಿಸಿದ್ದಾರೆ.

ಈ ರೀತಿ ಮತ್ತೊಂದು ಸಾಮಾಜಿಕ ಪ್ರಜ್ಞೆಯುಳ್ಳ ಕವನವೆಂದರೆ 'ಪ್ರತೀಕ್ಷೆ' ಈ ಕವಿತೆಯಲ್ಲಿ ಬರುವ ನಾಯಕಿಯೂ ಒಬ್ಬ ವೇಶ್ಯೆ. ಸಮಾಜದಿಂದ ದೂಡಲ್ಪಟ್ಟವಳು. ಆದರೆ ಆಕೆಯನ್ನು ಇಲ್ಲಿ ಎಲ್ಲಿಯೂ ಅಂತಹ ನಿಂದನಾತ್ಮಕವಾದ ಮಾತುಗಳಿಂದ ಸೂಚಿಸದೇ ಇರುವುದು ಪು.ತಿ.ನ.ರವರ ಕಾವ್ಯ ಕೌಶಲವನ್ನು ಎತ್ತಿ ತೋರಿಸುತ್ತದೆ. ಈ ಕಥೆಯ ನಾಯಕಿಯೂ ವೇಶ್ಯೆಯಾದರೂ ಆಕೆಯ ನಿರ್ಮಲ ಪ್ರೀತಿಯನ್ನು, ಕಾತರವನ್ನು, ಹಂಬಲವನ್ನು, ದೇವಾಲಯದ ಶಾಂತತೆಗೆ ಹೋಲಿಸಿದ್ದಾರೆ.

**"ಅಕೋ.**
**ಬಾನವರಿಗಿಳೆನೆನಪ ತರುವೀ**
**ಗುಡಿಯ ಗಂಟೆಯ ಬಾಜನೆ**
**ಬೀದಿಯೊಳು ನೂರ್ ಕೊರಲ ತರುತಿದೆ;**
**ಹೃದಯದೇಕಾಂತವನು ಸಾರುವ**
**ದನಿಯ ತಹುದೋ ಕಾಣಿಸೇ"**[೧೬]

ಇದೇ ರೀತಿಯ ಸಾಮಾಜಿಕ ಸಂವೇದನೆಯನ್ನೂ ಅವರ "ಸಿರಿವಂತ ಸೂಳೆಯರ ಹಾಡು" ಮತ್ತು "ಒಡಸೂಳೆಗೆ ಅವಳ ಗೆಳತಿ" ಎಂಬ ಕವನಗಳಲ್ಲಿ ಕಾಣಬಹುದು. ಹೀಗೆ ಸಾಮಾಜಿಕವಾಗಿಯೂ ಕೂಡ ಒಬ್ಬ ಅಭಿಸಾರಿಕೆಯ ನಿರ್ಮಲ ಪ್ರೇಮದ ಅನಾವರಣವನ್ನು ಈ ಪದ್ಯದಲ್ಲಿ ನಾವು ಗುರುತಿಸಬಹುದು. ಸಮಾಜದ ನಿಂದನೆಗೆ ಒಳಪಟ್ಟ ಒಬ್ಬ ಹೆಣ್ಣಿನ ಚಿತ್ರಣದಲ್ಲಿಯೂ ಕೂಡ ಪು.ತಿ.ನ. ಒಂದು ಶುದ್ಧ ಪ್ರೇಮದ ಕಲ್ಪನೆಯನ್ನು ತರುತ್ತಾರೆ. ಇದು ಅವರ ವೈಶಿಷ್ಟ್ಯ.

**ಓ) ಮೌಲ್ಯಪ್ರಜ್ಞೆ :–** ತ್ಯಾಗ, ಒಲುಮೆ, ವೈರಾಗ್ಯ, ಜ್ಞಾನ, ವಾಸ್ತವಿಕತೆ, ದೇವಸ್ಥಾನದ ಪ್ರಸ್ತಾಪ, ನಿಷ್ಕಲ್ಮಶ ಪ್ರೇಮ, ಸ್ಥೈರ್ಯ, ಕಾಂತಿ ಇವುಗಳನ್ನು ತಮ್ಮ ಸಾಹಿತ್ಯಾಭಿವ್ಯಕ್ತಿಯಲ್ಲಿ ತರುತ್ತಾರೆ. ಮನುಷ್ಯನ ಜೀವನಕ್ಕೆ ಸಂಬಂಧಪಟ್ಟ ಹಾಗೂ ಬದುಕಿಗೆ ಹತ್ತಿರವಾದಂತಹ ಈ ಮೌಲ್ಯಗಳನ್ನು ಪು.ತಿ.ನ ಸತ್ಯದ ಏಕರೂಪಾತ್ಮಕವಾದ ದೃಷ್ಟಿಯಿಂದ ನೋಡುವ ಪ್ರಯತ್ನವನ್ನು ಮಾಡುತ್ತಾರೆ. ತಮ್ಮ ಸಾಹಿತ್ಯಿಕ ನೆಲೆಯ ಈ ಗುಣಗಳನ್ನು ಅವರು ಪ್ರಾಪಂಚಿಕ ತಿಳುವಳಿಕೆಗೆ ತರುವ ಪ್ರಯತ್ನ ಮಾಡುತ್ತಾರೆ.

**ಔ) ಅಂತಃಸಾಕ್ಷಿ:–** ಜಿಜ್ಞಾಸುಯುಕ್ತವಾದ ಪ್ರವೃತ್ತಿಯುಳ್ಳ ಮನಸ್ಸು ಪು.ತಿ.ನ.ರವರದು. ಹಾಗೆಯೇ ಅಂತಃಸಾಕ್ಷಿಯು ಕೂಡ ಅವರ ವಿಶೇಷ ಅಭಿವ್ಯಕ್ತಿಯಲ್ಲಿ ಒಂದು. ವ್ಯಕ್ತ ಮನಸ್ಸಿನ ಮುಕ್ತಭಾವನೆಗಳನ್ನು ತೆರೆದಿಡುವ ಸಾಹಸ ಅವರ ಕಾವ್ಯಕ್ಕೆ ಇದೆ. ಒಬ್ಬ ನಿಜವಾದ ಕವಿಯಲ್ಲಿರಬೇಕಾದ ಈ ಗುಣ ಪು.ತಿ.ನ.ರವರಲ್ಲೂ ಇದೆ. "ಸತ್ಯದ ಆಧಾರದ ಮೇಲೆ ಪು.ತಿ.ನ. ಕಾವ್ಯದಲ್ಲಿ ಅಂತಃಕರಣದ ಸೆಳೆಯನ್ನು ಕಂಡುಕೊಳ್ಳುವುದು ಅವರನ್ನು ಗೌರವಿಸುವ ಒಂದು ಕ್ರಿಯೆಯಾಗಿದೆ."[೧೭] ಎನ್ನುವಲ್ಲಿ ಅರ್ಥವಿದೆ. ಅಂತಃಕರಣ ಒಂದು ಧರ್ಮದ ತಳಹದಿಯಂತಿದೆ. ಇಂತಹ ಸಂವೇದನೆಗಳನ್ನು ಕವಿ ತನ್ನ ಸುಪ್ತ ಮನೋಸ್ಥಿತಿಯ ಮೂಲಕ ವ್ಯಕ್ತಪಡಿಸುತ್ತಾನೆ. ಈ ಬಗೆಯ ಅಂತಃಸಾಕ್ಷಿ ಧರ್ಮ, ಪರಂಪರೆ ಮತ್ತು ಅನುಭವಗಳಲ್ಲಿ ಪು.ತಿ.ನ.ವ್ಯಕ್ತಪಡಿಸಿದ್ದಾರೆ.

**ಅಂ) ಸಹಾನುಭೂತಿ:–** ಮನುಷ್ಯನ ಪರಸ್ಪರ ಸಂಬಂಧಗಳು ಹಾಗೂ ಆ ಸಂಬಂಧಗಳ ನಡುವೆ ಏರ್ಪಡುವ ಭಿನ್ನಾಭಿಪ್ರಾಯಗಳನ್ನು ಒಂದು ಶಾಂತಚಿತ್ತ ಮನೋಧರ್ಮದಿಂದ ಇವುಗಳ ನಡುವಿನ ಸಾಮರಸ್ಯವನ್ನು ಒಂದಕ್ಕೊಂದು ಪೂರಕ ಹಾಗೂ ಪ್ರೇರಕವಾಗಿ ತರುವ ಪ್ರಯತ್ನ. ಪ್ರೀತಿ, ವಿಶ್ವಾಸ, ಸಹಾನುಭೂತಿ ಎಂಬ ಈ ಮೌಲ್ಯಗಳಿಗೆ ವಾಸ್ತವಿಕ ದೃಷ್ಟಿಕೋನದ ಮೂಲಕ ಒಂದು ಸಂವೇದನಾ ಪ್ರವೃತ್ತಿಯನ್ನು ಜಾಗರಗೊಳಿಸುವುದೇ ಕಾವ್ಯದ ತತ್ವ, ಅದನ್ನು ಪು.ತಿ.ನ. ಸಾಹಿತ್ಯದಲ್ಲಿ ಯಥೇಚ್ಛವಾಗಿ ಕಾಣಬಹುದು. ಬದುಕಿನೊಂದಿಗೆ ಆತ್ಮೀಯತೆ ಮತ್ತು ಬದುಕಿನ ಎಲ್ಲಾ ಸಂಗತಿಗಳನ್ನು, ವಿಷಾದವನ್ನೂ, ವಿವರಿಸುವಲ್ಲಿ ಸಹಾನುಭೂತಿಯ ಕುರುಹನ್ನು ಕಾಣಬಹುದು. ಇದನ್ನು ಅವರು ಸೂಚಿತವಾಗಿ ವ್ಯಕ್ತಪಡಿಸದೇ ಸಹೃದಯನ ನಿಲುವಿಗೆ ಬಿಡುತ್ತಾರೆ. ಒಟ್ಟಾರೆಯಾಗಿ ಅವರ ಕಾವ್ಯಗಳಲ್ಲಿ ಸಹಾನುಭೂತಿ ಅಂಶವು ಪ್ರಬಲವಾಗಿದೆ ಎಂದರೆ ತಪ್ಪಾಗಲಾರದು.

**ಅಃ) ನವರಸಗಳು:–** 'ರಸ'ವೇ ಪು.ತಿ.ನ.ರವರ ಕಾವ್ಯದ ಮೂಲವಸ್ತು. ರಸ ಎಂದರೆ ಒಂದು 'ಮನಃಸ್ಥಿತಿ' ಎನ್ನುತ್ತಾರೆ. ಪು.ತಿ.ನ. ಹಾಗೆಯೇ ಕಾವ್ಯ ಎನ್ನುವುದು ನವರಸಗಳನ್ನು ಹೊಂದಿ ಅಭಿವ್ಯಕ್ತಗೊಳ್ಳುವ ಒಂದು ಕಲೆ. ಇದೇ ಕಾವ್ಯದ ನೆಲೆಕೂಡ. 'ನವರಸ'ಗಳ ಒಟ್ಟು ಸತ್ವಯುತವಾದ ಬಗೆಯನ್ನು ಅವರಲ್ಲಿ ಕಾಣುತ್ತೇವೆ. ಶಾಂತ, ರೌದ್ರ, ಭೀಭತ್ಸ, ಹಾಸ್ಯ ಎಂಬ ನವಮುತ್ತುಗಳ ಜೋಡಣೆ ಅವರ ಸಾಹಿತ್ಯದಲ್ಲಿದೆ.

**ಕ) ತತ್ವಾನ್ವೇಷಣೆ:–** ಪು.ತಿ.ನ.ರವರಷ್ಟು ಮನಸ್ಸಿನ ನಿಜಾಂಶಗಳನ್ನು ವ್ಯಕ್ತಪಡಿಸಿದ ಮತ್ತು ಅದಕ್ಕೊಂದು ಅದ್ಭುತ ವಿನ್ಯಾಸ ನೀಡಿದ ಕವಿ ಸಮೂಹ ಅಪರೂಪ. ವಿಜ್ಞಾನದ ವಿಷಯವು ಹೇಗೆ ತರ್ಕಕ್ಕೆ, ತತ್ವಕ್ಕೆ, ಅನ್ವೇಷಣೆಗೆ ಒಳಪಟ್ಟಿರುತ್ತವೆಯೋ ಹಾಗೆಯೇ ಸಾಹಿತ್ಯಿಕ ಚಿಂತನೆಯೂ ಕೂಡ ತತ್ವಾನ್ವೇಷಣೆಗೆ ಒಳಪಡಿಸಬೇಕೆಂದು ಅವರ ನಿಲುವು. ವೈಜ್ಞಾನಿಕ ದೃಷ್ಟಿಯಿಂದ ನಮ್ಮ ಮನಸ್ಸಿನ ಭಾವನೆಗಳಿಗೆ ಒತ್ತು ನೀಡಬೇಕು. ಅವುಗಳನ್ನು ಜಿಜ್ಞಾಸೆಗೆ ಅಂದರೆ ತಾತ್ವಿಕ ಜಿಜ್ಞಾಸೆಗೆ ಒಳಪಡಿಸಿ ಅದರ ರಸಾನುಭವವನ್ನು ಜಾಗರಗೊಳಿಸಿ ಅದನ್ನು ಮುಕ್ತಿಯಿಂದ ಮುಮುಕ್ಷುವಿಗೆ ಕರೆದೊಯ್ಯಬೇಕು ಎಂದು ಅಭಿಪ್ರಾಯ ಪಡುತ್ತಾರೆ. ಇದನ್ನು ಈ ವಾಕ್ಯದ ಮೂಲಕ ಸ್ಪಷ್ಟಪಡಿಸುತ್ತಾರೆ. "ಎನ್ನದು ತತ್ವಾನ್ವೇಷಣಾ ಕಾರ್ಯ"ಎಂದು ಈ ಎಲ್ಲ ಗ್ರಹಿಕೆಗಳಿಂದ ತಿಳಿಯುವುದೇನೆಂದರೆ ಅವರ ತತ್ವಾನ್ವೇಷಕ ಗುಣ. ಈ ಗುಣವನ್ನು ಅವರ ಕಾವ್ಯಗಳಲ್ಲಿ ಪ್ರಧಾನವಾಗಿ ಗುರುತಿಸಬಹುದು.

**ಖ) ಸಮಕಾಲೀನತೆ–ಸಾರ್ವಕಾಲಿಕತೆ:–** ಸಾಹಿತ್ಯವು ಯಾವುದೇ ಪ್ರಭಾವ–ಪ್ರಚೋದನೆಗಳಿಗೆ ಒಳಪಡದೆ ಅದು ಸಾರ್ವತ್ರಿಕವಾಗಿರಬೇಕು. ಒಂದು ವೇಳೆ ಅದು ಪ್ರಚೋದನಾತ್ಮಕ ಸಾಹಿತ್ಯವಾದಲ್ಲಿ ನೀರಸವೆನಿಸುತ್ತದೆ. ಏಕೆಂದರೆ ಅದು ಕಾಲಾಧಾರಿತವಾಗಿರುತ್ತದೆ. ನಿರ್ದಿಷ್ಟ ಕಾಲಕ್ಕೆ ಬಂದು ಮೆರೆದು ನಂತರ ತನ್ನ ಸತ್ವವನ್ನು ಕಳೆದುಕೊಳ್ಳುತ್ತದೆ. ಈ ರೀತಿ ನಿರ್ದಿಷ್ಟತೆ ಪಡೆದಿದ್ದಲ್ಲಿ ಅಥವಾ ಪ್ರಚೋದನೆಗೆ ಒಳಪಟ್ಟು ಸಾಹಿತ್ಯ ಸೃಷ್ಟಿಯಾದಲ್ಲಿ ಲೇಖಕನು ಪಕ್ಷಪಾತಿಯಾಗುತ್ತಾನೆ, ಅಸ್ವತಂತ್ರನಾಗುತ್ತಾನೆ, ಎಂದು ಪು.ತಿ.ನ ತಾವೇ ಈ ಮಾತನ್ನು ಬಳಸಿದ್ದಾರೆ. ಆದುದರಿಂದ ಪು.ತಿ.ನ.ರವರು ಬಯಸುವುದೇನೆಂದರೆ ಸಾಹಿತ್ಯವು ಸಮಕಾಲೀನತೆಯನ್ನು ಪಡೆದಿರಬೇಕು. ಜೊತೆಗೆ ಸಾರ್ವಕಾಲಿಕವೂ ಆಗಿರಬೇಕೆಂದು ಈ ಸಾಹಿತ್ಯಿಕ ಗುಣವನ್ನು ಅವರ ಅಭಿವ್ಯಕ್ತಿಗಳಲ್ಲಿ ನಾವು ಕಾಣಬಹುದು.

**ಗ) ಹಬ್ಬಗಳು:–** ನಮ್ಮ ಸಂಪ್ರದಾಯ, ಸಂಸ್ಕೃತಿ ಮತ್ತು ಪರಸ್ಪರ ಸಾಮರಸ್ಯದ ಪ್ರತೀಕವಾದ ಹಬ್ಬಗಳು ಮತ್ತು ಅವುಗಳ ಸಂಭ್ರಮ ಇವುಗಳನ್ನು ತಮ್ಮ ಸಾಹಿತ್ಯದಲ್ಲಿ ಪು.ತಿ.ನ.ರವರು ಅನಾವರಣಗೊಳಿಸಿದ್ದಾರೆ. ಇದನ್ನು ಅವರ 'ಗಣೇಶದರ್ಶನ', 'ದೀಪಾವಳಿ' ಎಂಬ ಪದ್ಯಗಳಲ್ಲಿ ನಾವು ಕಾಣಬಹುದು. ಮನುಷ್ಯ ಆಧುನಿಕನಾಗುತ್ತ ವಿಜ್ಞಾನ, ತಂತ್ರಜ್ಞಾನದ ಬದುಕಿಗೆ ಮೋಹಗೊಂಡಿದ್ದಾನೆ. ಇದರ ನಡುವೆಯೂ ಸಾಂಸ್ಕೃತಿಕ ಮೌಲ್ಯಗಳನ್ನು ಎತ್ತಿಹಿಡಿಯುವ ಪ್ರಯತ್ನ ಅವರದು. ಹಬ್ಬ ಮತ್ತು ಆಧುನಿಕತೆ ಎಂದರೆ

ಪರಂಪರೆ ಹಾಗೂ ಆಧುನಿಕತೆಯ ನಡುವೆ ಒಂದು ಸಂಘರ್ಷ. ಅದರೊಂದಿಗೆ ಮಾನವ 'ನೈತಿಕಪ್ರಜ್ಞೆ'ಗೆ ಒತ್ತುಕೊಟ್ಟಿರುವುದನ್ನು ಕಾಣಬಹುದು. ಇಂತಹ ಧಾರ್ಮಿಕ ಅಂಶಗಳಿಗೆ ಪು.ತಿ.ನ.ಹೊಸ ಪರಿಕಲ್ಪನೆಗಳನ್ನು ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಪು.ತಿ.ನ. ಸಾಹಿತ್ಯದ ಒಟ್ಟು ಆಶಯಗಳನ್ನು, ಅವರ ನಿಲುವುಗಳನ್ನು ಹೇಳುವ ಒಂದು ಸಣ್ಣ ಪ್ರಯತ್ನವನ್ನು ಇಲ್ಲಿ ನಡೆಸಿದ್ದೇನೆ.

## ಅಡಿಟಿಪ್ಪಣಿ

೧.ಪು.ತಿ.ನ.ಸಮಗ್ರಗದ್ಯಸಂಪುಟ:(ಸಂ)ಡಾ.ಜಿ.ಎಸ್.ಶಿವರುದ್ರಪ್ಪ,ಡಾ.ಎಚ್.ಎಸ್.ವೆಂಕಟೇಶ್‌ಮೂರ್ತಿ, ಪುಟ-೫೪೨

೨. ಕನ್ನಡ ಸಾಹಿತ್ಯ ಕೋಶ : (ಸಂ) ರಾಜಪ್ಪ ದಳವಾಯಿ, ಪುಟ-೧೧೮

೩. ಪು.ತಿ.ನ ನಮನ : (ಸಂ) ಉಷಾವಸ್ತಾರೆ, ಭಗವತೀ ರಾಮಮೂರ್ತಿ, ಪುಟ-X

೪. ಅದೇ ಪುಟ

೫. ಸಮಗ್ರಗದ್ಯ ಸಂಪುಟ : :(ಸಂ)ಡಾ.ಜಿ.ಎಸ್.ಶಿವರುದ್ರಪ್ಪ,ಡಾ.ಎಚ್.ಎಸ್.ವೆಂಕಟೇಶ್‌ಮೂರ್ತಿ, ಪುಟ-೫೪೬

೬. ಪು.ತಿ.ನ. ನಮನ : (ಸಂ) ಉಷಾವಸ್ತಾರೆ, ಭಗವತೀ ರಾಮಮೂರ್ತಿ, ಪುಟ-41

೭. ಕನ್ನಡ ಸಾಹಿತ್ಯ ಇತಿಹಾಸ : ರಂ.ಶ್ರೀ.ಮುಗುಳಿ, ಪುಟ-೨೪೧

೮. ಪು.ತಿ.ನ ಸಮಗ್ರಕಾವ್ಯ : ಡಾ.ಪು.ತಿ.ನ. ಟ್ರಸ್ಟ್, ಬೆಂಗಳೂರು, ಪುಟ-೧೯

೯. ಕನ್ನಡ ಸಾಹಿತ್ಯ ಇತಿಹಾಸ : ರಂ.ಶ್ರೀ.ಮುಗುಳಿ, ಪುಟ-೨೪೧

೧೦.ಪು.ತಿ.ನ ನಮನ : ಲೇಖನ: ಪ್ರಕೃತಿಯಲ್ಲಿ ಪ್ರಪತ್ತಿ, ಪು.ತಿ.ನ ದೃಷ್ಟಿ ಶ್ರೀಮಣಿ ರಾಜಗೋಪಾಲನ್, ಪುಟ-೨೧

೧೧. ಅದೇ ಪುಟ-೨೧

೧೨. ಪು.ತಿ.ನ. ಸಮಗ್ರಕಾವ್ಯ ಒಂದು ಸಮೀಕ್ಷೆ : ಡಾ.ತಾಳ್ತಜೆ ವಸಂತಕುಮಾರ್, ಪುಟ-೧೭

೧೩. ಭೃಂಗಮಾರ್ಗ : ಪುಟ-೧೯

೧೪. ಆಯ್ದ ಲೇಖನಗಳು : ಡಾ.ತಾಳ್ತಜೆ ವಸಂತಕುಮಾರ್, ಪುಟ-೨೫

೧೫. ಪು.ತಿ.ನ. ಸಮಗ್ರಕಾವ್ಯ : ಡಾ.ಪು.ತಿ.ನ. ಟ್ರಸ್ಟ್, ಬೆಂಗಳೂರು, ಪುಟ-೫೬

೧೬. ಅದೇ ಪುಟ : ೨೩೦

೧೭. ಯದುಗಿರಿಯ ಅಂಗಳದಿಂದ : ಲೇಖಕ : ರಂಜಾನ್‌ದರ್ಗಾ, ಪುಟ-೫೦

# ಅಧ್ಯಾಯ–೩

## ಕಾವ್ಯಮೀಮಾಂಸೆಯನ್ನು ಕುರಿತ ಪು.ತಿ.ನ.ಅವರ ಚಿಂತನೆ

**ಅ) ಕವಿ–ಸಹೃದಯ:–**

ಕವಿ –ಸಹೃದಯರು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಕವಿ ತಾನು ರಚಿಸಿದ ಕಾವ್ಯವನ್ನು ಓದಿ ಆನಂದ ಪಡುವವನೇ ಸಹೃದಹಯ. ಇಂತಹ ಸಹೃದಯ ನಿಲ್ಲದೇ ಹೋದರೆ ಕಾವ್ಯ ವ್ಯರ್ಥವೆನಿಸಿಕೊಳ್ಳುತ್ತದೆ. ಇದಕ್ಕೆ ಉತ್ತಮ ಉದಾ:– ಈ ಸಾಲುಗಳು "ಕಟ್ಟಿಯುಮೇನೊ? ಮಾಲೆಗಾರನ ಪೊಸಬಾಸಿಗಂ ಮುಡಿವ ಭೋಗಿಗಳಿಲ್ಲದೆ ಬಾಡಿ ಪೋಗದೇ"[1]

ಕವಿ ತನ್ನ ಅಂತರಂಗದ ಭಾವನೆಗಳನ್ನು ಕಾವ್ಯದ ಮೂಲಕ ಹೊರಗಳೆಯುತ್ತಾನೆ. ಆದರೆ ಭಾವನೆಗಳಿಗೆ ಸ್ಪಂದಿಸುವ ಮನಸ್ಸಿನ ಅಗತ್ಯವೂ ಅಷ್ಟೇ ಮುಖ್ಯ. ಕವಿ–ಸಹೃದಯರಿಬ್ಬರಿಂದಲೇ ಕಾವ್ಯದ ಉದಯ ಇದನ್ನು ಅಭಿನವಗುಪ್ತನು ಹೀಗೆ ಹೇಳಿದ್ದಾನೆ. "ಸರಸ್ವತ್ಯಾಸತ್ವಂ ಕವಿಸಹೃದಯ ಮಾಖ್ಯಂ ವಿಜಯತೇ"[2]

ಪು.ತಿ.ನ.ರವರ ಅಭಿಪ್ರಾಯದಂತೆ ಒಂದು ಉತ್ತಮ ಕಾವ್ಯ ಕೊಡಬೇಕಾದ ಫಲಗಳೆಂದರೆ ಸಾಮನಸ್ಸ್ಯ, ಚಿತ್ತೋತ್ಕರ್ಷ ಹಾಗೂ ಸತ್ತ್ವ ಸಮೃದ್ಧಿಯನ್ನು ಅಂತಹ ಕಾವ್ಯ ರಚಿಸುವ ಕವಿ ದೊರೆಯಬೇಕಾದುದು ನಮ್ಮ ಭಾಗ್ಯದಿಂದಷ್ಟೇ ಎನ್ನುತ್ತಾರೆ. "ಯೋಗಿ, ಸಂತ, ಭಕ್ತರು ದೊರೆಯುವುದು ಎಷ್ಟು ದುರ್ಲಭವೋ ಅಷ್ಟೇ ದುರ್ಲಭ ಒಬ್ಬ ಸತ್ಕವಿ ದೊರೆಯುವುದು"[3] ಎಂದು ಹೇಳುವುದರಲ್ಲಿ ಅರ್ಥವಿದೆ. ಕಾವ್ಯದ ಜೀವ, ಅದರ ಉಸಿರು, ಅದರ ಆತ್ಮವೇ ರಸ. ರಸವಿಲ್ಲದಿದ್ದರೆ ಕಾವ್ಯ ಕೃಷಿ ವ್ಯರ್ಥ. ಇದನ್ನು ಪು.ತಿ.ನ. ಹೀಗೆನ್ನುತ್ತಾರೆ. "ಅರ್ಥ, ಪದಶುದ್ಧಿ, ರೀತಿ, ಸಾಂಗತ್ಯ ನವವಕ್ರಗತಿ ಮುಂತಾದವುಗಳೆಲ್ಲ ಕಾವ್ಯತಂತ್ರಕ್ಕೆ ಸಂಬಂಧಿಸಿದ ವಿಷಯಗಳು. ರಸಮಾತ್ರ ಅದು ತಾನೊಲಿದವರಿಗುಂಟು ಮಿಕ್ಕವರಿಗಿಲ್ಲ"[4] ರಸ ಕಾವ್ಯದಲ್ಲಿ ಹೊಂದಿರುವ ಪ್ರಧಾನ ಸ್ಥಾನವನ್ನು ಕುರಿತು ಪು.ತಿ.ನ. ಇಲ್ಲಿ ಕೂಲಂಕುಶವಾಗಿ ತಿಳಿಸಿದ್ದಾರೆ. ಕವಿ ಕಾವ್ಯದಲ್ಲಿ ರಸಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡಬೇಕು. ಏಕೆಂದರೆ ಆ ರಸದ ಅಸ್ವಾದದಿಂದಲೇ ಉಳಿದ ಅನುಭವಗಳ ಅಸ್ವಾದಕ್ಕೆ ಸ್ಫೂರ್ತಿ. ರಸದ ಅನುಭವವನ್ನು ಪು.ತಿ.ನ.ರವರು 'ಆತ್ಮಕ್ಕೆ' ಹೋಲಿಸುತ್ತಾರೆ. ಈ ಅನುಭವದ ಅಭಿವ್ಯಕ್ತಿ ಆತ್ಮದಿಂದಲೇ ಹೊರತು ಮತ್ತಾವ ಅಂಶಗಳಿಂದಲೂ ಸಾಧ್ಯವಿಲ್ಲ ಎಂಬ ನಿಲುವು ಇವರದು.

"ಕಾವ್ಯ ಮೂಲತಃ ಕಾವ್ಯವೆಂದು ಕರೆಯಿಸಿಕೊಳ್ಳಲು ಅರ್ಹವಾಗಬೇಕಾದರೆ ಅದು ಮೊದಲು 'ಕಾವ್ಯ'ವಾಗಿರಬೇಕು ಅಥವಾ ರಸಾನುಭವವನ್ನು ಕೊಡುವಂಥದ್ದಾಗಿರಬೇಕು"[5] ಇಡೀ ಕಾವ್ಯದಲ್ಲಿ ನಮಗೊದಗುವ ರಸದಿಂದಲೇ ಕಾವ್ಯದಿಂದ ಹೊರಡುವಂತಹ ಸಂವೇದನೆಯು ನಮ್ಮ

ತಿಳುವಳಿಕೆಗೆ ಬರುತ್ತದೆ. ಇದರಿಂದ ನಾವು ಪಡೆದ ಈ ರಸಾನುಭವದ ಈ ತಿಳುವಳಿಕೆಯಿಂದ ನಮಗೆ ಕಾವ್ಯದ ಒಳನೋಟಗಳ ಅರಿವು ಉಂಟಾಗುತ್ತದೆ. ಇಲ್ಲದಿದ್ದರೆ ರಸಕ್ಕೆ ಕುಂದುಂಟಾಗುತ್ತದೆ.

ರಸದ ವಿಚಾರವನ್ನು ಹೇಳುತ್ತಾ ಪು.ತಿ.ನ. ಈ ಮಾತನ್ನು ಬಳಸುತ್ತಾರೆ. "ಈ ದೇಹದಲ್ಲಿ ಪ್ರಾಣವೆಲ್ಲಿದೆ ಎಂದು ಹೇಳುವ ಹಾಗೆ, ಅಭಿನವಗುಪ್ತನ ಮಾತಿನಲ್ಲಿ, ಸರ್ವಾಂ ಸುಂದರಳಾದ ತರುಣಿಯಲ್ಲಿ ಲಾವಣ್ಯವೆಲ್ಲಿದೆ ಎಂದು ಹುಡುಕುವ ಹಾಗೆ, ಕಾವ್ಯದಲ್ಲಿ ರಸವೆಲ್ಲಿದೆ ಎಂದು ಹೇಳುವ ಮಾತು ಹಾಗೆಯೇ ಅದು ಮುಕ್ತನಿಂದ ಮುಮುಕ್ಷುವಿಗೆ ಹರಿಯುವ ಸಮ್ಮೋದ ಲಹರಿ"[೬] ಯಾವುದೇ ಅಡ್ಡಿ ಆತಂಕಗಳಿಲ್ಲದ ತೊಡಕಿಲ್ಲದ ರಸದ ಅನುಭವವಾಗುವುದೋ ಅದೇ ರಸಭರಿತವಾದ 'ಕಾವ್ಯ' ಇದರಿಂದ ನಮ್ಮ ಆತ್ಮಕ್ಕೆ ಒದಗಿದ ರಸದ ಅನುಭವವೇ ನಿಜವಾದ ರಸಾನುಭವ. ಇಂತಹ ಕವಿತೆಯೇ ಉತ್ಕೃಷ್ಟವಾದ ಕವಿತೆ. ಇಂತಹ ನೆಲೆಯನ್ನು ಮುಟ್ಟಿದ ಕವಿಯಿಂದಲೇ ಈ ರಸಭರಿತವಾದ ಕಾವ್ಯ ಸಹೃದಯರಿಗೆ ಲಭ್ಯವಾಗಲು ಸಾಧ್ಯ.

ರಸವೇ ಅರಿವಿನ ಏಕಮಾತ್ರ ಅಂಶ. ಕಾವ್ಯದಿಂದ ಪಡೆದ ರಸ ಅದರಿಂದಾಗುವ ತೃಪ್ತಿ ಮತ್ತು ಸಹೃದಯರಿಗಾಗುವ ತೃಪ್ತಿ ಮತ್ತು ಅದರ ಅರಿವೇ ಕಾವ್ಯದ ಮುಂದುವರಿಕೆಗೆ ಮತ್ತು ಉತ್ತಮತೆಗೆ ಸಾಕ್ಷಿ ಎನ್ನಬಹುದು. ಪು.ತಿ.ನ.ಹೇಳುವ ಹಾಗೆ "ರಸದ ಪ್ರಶ್ನೆ ಅನುಪಾಧಿತ ಸಂವೇದನಾರೂಪದಲ್ಲಿರುವ ಅರಿವನ್ನು ಪಡೆಯುವ ಪ್ರಶ್ನೆ"[೭]ಎಂದು.

ಮನುಷ್ಯ ತನ್ನ ಪ್ರಾಪಂಚಿಕ ಜೀವನದಲ್ಲಿ ಪಡೆಯುವ ಅನುಭವ, ಅಭಿರುಚಿ ಮತ್ತು ಆನಂದ ರಸಸ್ತರದಲ್ಲಿ ಪಡೆಯುವ ತೃಪ್ತಿ, ಆಹ್ಲಾದ ಮತ್ತು ಸಂತೋಷ ಅನುಭವ ಇವು ಎರಡೂ ಭಿನ್ನ ರೀತಿಯದು. ವಾಸ್ತವತೆಗೆ ಹಿಡಿದ ಕನ್ನಡಿಯಂತೆ ಈ ನಮ್ಮ ರಸಾನುಭವ. ಇಲ್ಲಿ ಮನಸ್ಸು, ಬುದ್ಧಿ ಇವುಗಳು ಸಮ್ಮಿಲನಗೊಂಡು ಗೋಚರಿಸುವ ಪ್ರತಿಯೊಂದು ತರ್ಕವೂ ಸಹ ರಸದ ಉದ್ಭವಕ್ಕೆ ಕಾರಣವಾಗುತ್ತದೆ. ಇವು ರಸದ ಕುರಿತು ಕವಿ ಪು.ತಿ.ನ.ರವರಿಗಿರುವ ಅಭಿಪ್ರಾಯ.

ಮುಂದೆ ಕವಿಯ ಕುರಿತು ಹೇಳುವಾಗ ಅವರ ನಿಲುವು ಸ್ವಲ್ಪ ಭಿನ್ನವೂ ಉತ್ಕೃಷ್ಟವೂ ಕೂಡ ಆಗಿದೆ. ಕವಿಯು ತನ್ನ ರಚನೆಯಲ್ಲಿ ನೈಜ ಸಂವೇದನೆಯನ್ನು ತರಬೇಕು. ಕುಶಲನೂ, ಗುಣಾತೀತನೂ ಆಗಿರುವಾಗಲೇ ಕಾವ್ಯದ ಒಳ ರಚನೆಯಿಂದಾಗಿ ಏನನ್ನಾದರೂ ಹೊಸದನ್ನು ಹೇಳುವ ಪ್ರಯತ್ನ ಆತ ಮಾಡಬಲ್ಲ. ಕವಿಗೆ ಸಂವೇದನೆಯ ಅರಿವು ಇರಬೇಕು. ಆ ಅರಿವನ್ನು ತನ್ನ ಪದ ಸಂಪತ್ತಿನ ಮೂಲಕ ತೀವ್ರ ಸಂವೇದನಾ ರೂಪವಾಗಿ ಹೊರ ತರುವ ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ "ಆತ ತಾಮಸನಾದರೂ, ರಾಜಸನಾದರೂ ಕೊನೆಗೆ ಸಾತ್ವಿಕನಾದರೂ ಆತನಿಂದ ಉತ್ತಮ ಕಾವ್ಯ ಹೊರ ಬರಲು ಸಾಧ್ಯವಿಲ್ಲ"[೮] ಎಂದು ಪು.ತಿ.ನ. ಹೇಳುತ್ತಾರೆ. ಅಂದರೆ ಕವಿಗೆ ಒಂದು ಅರಿವಿನ ಪ್ರಜ್ಞೆ ಇರಬೇಕು.

"ಕವಿ ಗುಣಾತೀತನ ಸ್ತರಕ್ಕೆ ಏರಿದಾಗ ಮಾತ್ರ ಆತನ ಕೃತಿ ನಲ್ ಕಳೆಯಿಂದ ಮೆರೆಯುತ್ತದೆ"[9] ಪ್ರಪಂಚದ ನಿಯಮಗಳಿಂದ ಬಿಡುಗಡೆ ಹೊಂದಿ ಕಾಮ, ಕ್ರೋಧ, ಲೋಭ, ಭಯಗಳಿಂದ ಸ್ವಲ್ಪ ದೂರ ಹೊರಟು ಕಾವ್ಯ ರಚಿಸಿದಾಗ ಆತನಿಂದ ಉತ್ಕೃಷ್ಟವಾದ ಕಾವ್ಯ ನಿರೀಕ್ಷಿಸಲು ಸಾಧ್ಯ. ತನ್ನ ಆಂತರಿಕ ಜಗತ್ತಿನಲ್ಲಿ ಕಂಡಂತಹ ವಸ್ತುಸ್ಥಿತಿಯನ್ನು ನೋಡುವ, ಅದನ್ನು ಪದಗಳ ಮೂಲಕ ಹೊರಚೆಲ್ಲುವ ಸಾಹಸವನ್ನು ಮಾಡಬಲ್ಲ. ಕವಿಯು ಕಾಣುವ ಪ್ರತಿಯೊಂದು ವಸ್ತುವೂ ಒಂದು ಚೈತನ್ಯ ಪೂರ್ಣವಾದ ನೈಜತೆಯನ್ನು ಪಡೆದಿರುತ್ತದೆ. ಅದು ವರ್ಣನೆಯ ರೂಪದಲ್ಲಿ ಬಂದಾಗ ಸುಖವನ್ನು ನೆಮ್ಮದಿಯನ್ನು ನೀಡುತ್ತದೆ. ಇದಕ್ಕೆ ಕವಿಯ ದಿವ್ಯ ಚಿತ್ತಸಂಸರ್ಗವೇ ಮೂಲ ಕಾರಣ.

ಕವಿ ತನ್ನ ಕಾವ್ಯದಲ್ಲಿ ಬಳಸುವ ಪ್ರತಿಯೊಂದು ಮಾತಿಗೂ ಕೊನೆ ಮೊದಲಿಲ್ಲ. ಅಲ್ಲಿ ಕವಿ ನೈಜತೆಯನ್ನೇ ಶೃಂಗಾರ ಭರಿತವಾದ ತನ್ನ ಮಾತುಗಳಿಂದ ಅಲಂಕರಿಸಿ ಸಹೃದಯನ ಮನಸ್ಸಿನ ಭಾವನೆಗಳ ಮೇಲೆ ಪ್ರಭಾವ ಬೀರುತ್ತಾನೆ. ಆಗಲೇ ಎಂತಹ ಜಡತ್ವಕ್ಕೂ ಕಾಂತಿ ಒದಗಲು ಸಾಧ್ಯ.

ರಸವನ್ನು ಪು.ತಿ.ನ ನಿದ್ರೆಗೆ ಹೋಲಿಸುತ್ತಾರೆ. ಈ ವ್ಯವಸ್ಥೆಯು ಶಾಂತ ಚಿತ್ತತೆಯನ್ನು ನೀಡುತ್ತದೆ. ಆದರೆ ರಸಸ್ತರದಲ್ಲಿ ಇಂದ್ರಿಯಾನುಭೂತಿಗಳು ಜಡವಾಗಿರದೇ ಅದು ಪಡೆಯಬೇಕಾಗಿರುವ ಎಲ್ಲಾ ರೀತಿಯ ಸುಖಾನುಭವಗಳನ್ನು ಪಡೆಯುತ್ತಾ ಸಂತೋಷದಲ್ಲಿ ತೇಲಾಡುತ್ತಿರುತ್ತವೆ. ಪು.ತಿ.ನ ಹೇಳುವಂತೆ "ಒಳ್ಳೆ ರಸವತ್ ಕವಿತೆ ನಾವು ಭವಸ್ತರದಲ್ಲಿ ಪಡೆದ ಅಥವಾ ಪಡೆಯಬಹುದಾದ ವರ್ಣನೆಯ ಮಾತಲ್ಲ; ಅಲ್ಲಿ ಪಡೆಯಲಾಗದ, ಇಲ್ಲಲ್ಲದೆ ಮತ್ತೆಲ್ಲೂ ದೊರೆಯದ, ಅನುಭೂತಿಯ ಮಾತು"[10] ಹೀಗೆ ಕವಿ ಮತ್ತು ಕಾವ್ಯದ ಮನೋಧರ್ಮಗಳಿಂದ ನಮಗೆ ಹೊಸ ಹೊಸ ಸಂವೇದನೆಗಳು, ಅಭಿರುಚಿಗಳು ದೊರೆಯುತ್ತವೆ, ಇದರಿಂದಲೇ ರಸಾನುಭವವೂ ಕೂಡ.

'ರಸ'ದ ಕುರಿತು ಹೇಳುತ್ತಾ ಮುಂದೆ ಪು.ತಿ.ನ ರವರು 'ಕಾವ್ಯ'ದ ಗುಣಗಳನ್ನು ಕುರಿತು ಹೇಳುತ್ತಾರೆ. ಒಂದು ಕಾವ್ಯ ತನ್ನಲ್ಲಿ ಹೊಂದಿರಬೇಕಾದ ಗುಣಗಳೆಂದರೆ ಅದು ಸಹೃದಯನ ಮನಸ್ಸನ್ನು ಸೂರೆಗೊಂಡು ದಿಗ್ಬಂಧನಗಳಿಂದ ಮುಕ್ತಗೊಳಿಸಿ ಹರ್ಷೋಲ್ಲಾಸಗಳನ್ನು ನೀಡುವಂತಿರಬೇಕು. ಮನಸ್ಸು ಪರಿಶುದ್ಧಗೊಳ್ಳಬೇಕು. ಆತ್ಮವು ವೃದ್ಧಿಗೊಳ್ಳಬೇಕು. ಸಂವೇದನೆಗಳಿಗೆ ಸಾಂಸ್ಕೃತಿ ಮೌಲ್ಯ ದೊರೆಯುವಂತಿರಬೇಕು. ಈ ಎಲ್ಲಾ ಮೌಲ್ಯಗಳಿಂದ ಸಮಾಜ ಸ್ವಸ್ಥವೂ, ಸಮೃದ್ಧವೂ, ತೃಪ್ತವೂ ಆಗಿ ವ್ಯವಹಾರಿಕ ನೀತಿ ನಿಯಮಗಳನ್ನು ಅರಿತು ಸಮನ್ವಯತೆಯ ಬಾಳ್ವೆಯನ್ನು ನಡೆಸಬೇಕು. ಆಗ ಮಾತ್ರ ಕಾವ್ಯಕ್ಕೆ ಒಂದು ಅರ್ಥ ಹಾಗೂ ಸಾಮಾಜಿಕವಾದ ಗೌರವ ಲಭಿಸಲು ಸಾಧ್ಯ.

ಹಾಗೆಯೇ ಕಾವ್ಯದ ದೋಷವೆಂದರೆ ಅದು ನೀತಿಗಾಗಿ ಬರೆಯಲ್ಪಡುವುದು. ಇದರಿಂದ ದೊರೆಯುವುದು ಅಲ್ಪ ಜ್ಞಾನವಷ್ಟೇ. ಅದರಿಂದ ಸಮಾಜಕ್ಕಾದರೂ ಏನು ಪ್ರಯೋಜನ? "ನೈಜ

ಕವಿಗಳು, ಸಾಧುಸಿದ್ಧ ಯೋಗಿಗಳಂತೆ, ನಿರಂಕುಶರು"[೧೧] ಎಂದು ಪು.ತಿ.ನ. ಹೇಳುತ್ತಾರೆ. ಏಕೆಂದರೆ ಇಂತಹ ನೈಜ ಕವಿ ಮತ್ತು ಕಾವ್ಯಗಳು ಸಹೃದಯರಿಗೆ ವಾಸ್ತವತೆಯ ಭವಾವೇಗಗಳ ದಿವ್ಯ ತೇಜಸ್ಸನ್ನು ನೀಡುತ್ತವೆ.

ಕಾವ್ಯ ಕಲೆಗಾರಿಕೆಯಲ್ಲಿ ಕವಿಗಿರಬೇಕಾದ ಕಲೆಯ ಕುರಿತಾದ ಗುಣಗಳನ್ನು ಪು.ತಿ.ನ. ಹೀಗೆ ಹೇಳುತ್ತಾರೆ. "ಕವಿಗಿರುವ ಮೊದಲ ಪ್ರಶ್ನೆ ನಿರ್ಮಲ ಅನಿರ್ಬದ್ಧ ಪ್ರೇಮರೂಪೀಚಿತ್ತ ಸಂಪಾದನೆ' ತದನಂತರ ತ್ರೈಗುಣೋದ್ಭವ ಲೋಕಚರಿತದಲ್ಲಿ ಅದನ್ನು ಕೂರಿಸುವಿಕೆ. ಈ ತಂತ್ರದಲ್ಲಿ ಆತ ಕುಶಲನಾದಷ್ಟು ಒಳ್ಳೆಯದು. ಮೊದಲು ಅರ್ಥ, ಬಾಹ್ಯ ಪ್ರಪಂಚಕ್ಕೆ ಸೇರಿದ್ದು; ಕೊನೆಗೆ ರಸ, ತನ್ನ ಭಾವನೆಗೆ ಸೇರಿದ್ದು. ಅರ್ಥದಲ್ಲಿ ವಸ್ತು ಸ್ವಭಾವಕ್ಕೆ ಕುಂದುತಾರದೆ ತನ್ನ ಭಾವನೆಯಿಂದುಂಟಾದ ಸಂವೇದನೆ ಮೈತಳೆದಂತೆ ಮಾಡುವುದು. ಇಲ್ಲಿದೆ ಕಾವ್ಯ ರಚನೆಯ ರಹಸ್ಯ. ಇಲ್ಲಿದೆ ಕವಿಯ ಪ್ರತಿಭೆ"[೧೨] ಪದಗಳ ಕ್ರಮಬದ್ಧ ಜೋಡಣೆ ಅರ್ಥಕ್ಕೆ ಅನುಸಾರವಾಗಿರಬೇಕು. ಅದರಿಂದ ಭವಸ್ತರಕ್ಕಿಂತ ಸ್ವಲ್ಪ ದೂರವಾಗಿ ರಸಾನುಭವವನ್ನು ನೀಡುವಲ್ಲಿಯೇ ಕವಿಯ ಕೌಶಲವಿದೆ.

"ಪ್ರತಿಭೆ ಎಂಬುದೊಂದು ಸಂಘಟನಾ ಸಾಮರ್ಥ್ಯವುಳ್ಳ ಮಾಂತ್ರಿಕ ಶಕ್ತಿ"[೧೩] ಎನ್ನುತ್ತಾನೆ. ಕೋಲ್‌ರಿಜ್ ಅಂತಹ ಸಂಘಟನಾ ಸಾಮರ್ಥ್ಯ ಕವಿಗಿರಬೇಕು. ಆಗ ಮಾತ್ರ ಸಹೃದಯನಾದವನು ಕವಿಗೆ ಕೃತಜ್ಞನಾಗುತ್ತಾನೆ, ಉನ್ನತ ಪದವಿಗೇರಿಸುತ್ತಾನೆ.

ರಮಣೀಯತೆ ಮತ್ತು ನವ್ಯತೆಯನ್ನು ತರುವುದು ಕವಿಯ ಪ್ರತಿಭೆಗಳಲ್ಲಿ ಮತ್ತೊಂದು ಬಗೆ ಇದರಿಂದ ಸಹೃದಯನು ತುಷ್ಟನಾಗುತ್ತಾನೆ. ರಸಾನುಭವವನ್ನು ಪಡೆಯುತ್ತಾನೆ. ಏಕೆಂದರೆ "ಕಾವ್ಯ ಮೂಲತಃ ಕಾವ್ಯವೆಂದು ಕರೆಯಿಸಿಕೊಳ್ಳಲು ಅರ್ಹವಾಗಬೇಕಾದರೆ, ಅದು ಮೊದಲು ಕಾವ್ಯವಾಗಿರಬೇಕು ಅಥವಾ ರಸಾನುಭವವನ್ನು ಕೊಡುವಂಥದಾಗಿರಬೇಕು ಎನ್ನುವ ವಿಚಾರದಲ್ಲಿ ಯಾವ ತಕರಾರೂ ಇಲ್ಲ"[೧೪]ಎನ್ನುವ ಹಾಗೆ, ಇಂತಹ ಕಾವ್ಯ ಸಂಪತ್ತುನ್ನು ಉತ್ತಮ ಕವಿಯಾದವನು ಬೆಳೆಸಿ ಅದಕ್ಕೊಂದು ನೆಲೆಯನ್ನು ದೊರಕಿಸಿ ಕೊಡುವವನಾಗಿರಬೇಕು. ಅಲ್ಲದೆ ಇಂತಹ ಕವಿ ಕಾವ್ಯ ಸಂಪತ್ತು ಅಗಾಧವಾಗಿ ನಮ್ಮ ಕನ್ನಡ ಸಾಹಿತ್ಯ ಪರಂಪರೆಯಲ್ಲಿದೆ ಎಂದು ಹೇಳುತ್ತಾ ಪು.ತಿ.ನ. ಸಹೃದಯನಾದವನು ಇದನ್ನು ಅರಿತು ಇದರ ಲಾಭ ಪಡೆಯಬೇಕೆಂದು ಸೂಕ್ಷ್ಮವಾಗಿ ಹೇಳಿದ್ದಾರೆ. ಅಲ್ಲದೆ ಅಂತಹ ಸಹೃದಯ ಮನಸ್ಸುಳ್ಳವರೂ ಇರುವುದನ್ನು ಅವರು ಪ್ರಶಂಸಿಸುತ್ತಾರೆ.

ಇನ್ನು ಸಹೃದಯನನ್ನು ಕುರಿತು ಹೇಳುವ ವಿಚಾರವನ್ನು ಇಲ್ಲಿ ಗಮನಿಸಬೇಕು. "ಕವಿಯು ತನ್ನ ಭಾವವನ್ನು ವ್ಯಕ್ತಪಡಿಸುತ್ತಾನೆ. ಆದರೆ ಅದನ್ನು ಕೇವಲ ಸೂಚಿಸಿ ಬಿಟ್ಟಿರುತ್ತಾನೆ. ಅದನ್ನು ಅರಿಯಲು ಸಹೃದಯನೇ ಮುಂದುವರಿಯಬೇಕಾಗುತ್ತದೆ"[೧೫] ಕಾವ್ಯದ ಸವಿಯನ್ನು ಸವಿಯುವ ಅದೃಷ್ಟವಿರುವುದು ಸಹೃದಯನಿಗೆ ಮಾತ್ರ. ಸಹೃದಯನಾದವನು ಕವಿ ಭಾವವನ್ನು

ಅರ್ಥಮಾಡಿಕೊಳ್ಳುವುದಕ್ಕೆ ಯಾವುದೇ ಇತರೆ ದಾರಿಗಳನ್ನು ಕಂಡುಕೊಳ್ಳದೇ ಸ್ವತಃ ತಾನೇ ಆ ಕಾವ್ಯದ ಸಂವೇದನೆಯನ್ನು ಅರಿಯಲು ಸಿದ್ಧನಾಗಬೇಕಾಗುತ್ತದೆ. ಇದಕ್ಕೆ ಉದಾಹರಣೆಯಾಗಿ ಈ ಮಾತುಗಳನ್ನು ಗಮನಿಸಬಹುದು. "ಪ್ರೇಕ್ಷಕನಾದವನು, ಸಹೃದಯನಾದವನು ಮೊಟ್ಟ ಮೊದಲು ಕಲಾಕೃತಿಯ ಪರಿಚಯವನ್ನು ತಾನೇ ನೇರವಾಗಿ ಮಾಡಿಕೊಳ್ಳುವುದು ಉತ್ತಮ"[೧೬] ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ.

ಕವಿ ತನ್ನ ಅನುಭವಕ್ಕೆ ಬರುವ ಎಲ್ಲಾ ಅಂಶಗಳನ್ನು, ತನ್ನ ಭಾವನೆಗಳನ್ನು ಕಾವ್ಯ ರೂಪದಲ್ಲಿ ವ್ಯಕ್ತಪಡಿಸುತ್ತಾನೆ. ಆತ ಹೀಗೆ ವ್ಯಕ್ತಪಡಿಸಿದ ಭಾವನೆಗಳಿಗೆ ಅರ್ಥ, ಪ್ರಶಂಸೆ ದೊರೆಯುವುದು ಸಹೃದಯನಿಂದಲೇ. ಪು.ತಿ.ನ.ರವರ ಪ್ರಕಾರ "ಕಾವ್ಯಕ್ಕೆ ಕಳೆ ಬರುವುದು ಸಹೃದಯರಿಂದ" ಎಂಬ ಮಾತು ಅಕ್ಷರಶಃ ನಿಜ.

ಕವಿ-ಸಹೃದಯರನ್ನು ಪರಸ್ಪರ ಒಂದುಗೂಡಿಸುವ ಕಾರ್ಯ ಕಾವ್ಯ ಮಾಡುತ್ತದೆ. ಹಾಗೆಯೇ ಕವಿ ತನ್ನಲ್ಲಿ ಹೊಂದಿರುವ ಪ್ರತಿಭೆ ಹಾಗೂ ಕೌಶಲ ಅರಿತು ಆತನನ್ನು ಉನ್ನತ ಸ್ಥಾನಕ್ಕೇರಿಸ ಬೇಕಾದರೆ ಸಹೃದಯನೂ ಬಹುಮುಖ್ಯ. ಏಕೆಂದರೆ ರಸಿಕತೆಯಿಂದಲೇ ಕಾವ್ಯ ಕೌಶಲ ಬೆಳೆಯಲು ಸಾಧ್ಯ. ಕವಿ ಸಮಾಜದಲ್ಲಿ ಕಂಡುಬರುವ ಅನೇಕ ವಿಷಯಗಳ ಮೇಲೆ ತನ್ನ ಚಿಂತನೆಯನ್ನು ಹರಿಸಿ, ತನ್ನ ಭಾವನೆಗಳಿಗೆ ಒಂದು ಚಲನೆಯನ್ನು ದೊರಕಿಸಿಕೊಡುತ್ತಾನೆ. ಅಂತೆಯೇ ಆ ಸಂವೇದನೆಗಳಿಗೆ, ಆ ಭಾವನೆಗಳಿಗೆ ಸ್ಪಂದಿಸುವ ಮನಸ್ಸಿರುವ ಸಹೃದಯನೂ ಇಲ್ಲಿ ಅಗತ್ಯ. ಎಂದು ಪು.ತಿ.ನ. ಅಭಿಪ್ರಾಯ ಪಡುತ್ತಾರೆ.

ಹೀಗೆ ಈ ಕವಿ-ಸಹೃದಯ ಎಂಬ ಭಾಗದಲ್ಲಿ ಕವಿ ಹಾಗೂ ಲೇಖಕ ಪು.ತಿ.ನ.ರವರು ಕವಿಗಿರಬೇಕಾದ ಸೂಕ್ಷ್ಮತೆಗಳು, ರಸಪ್ರಜ್ಞೆ, ಆತನ ಪ್ರತಿಭೆ ಹಾಗು ಕಾವ್ಯಕೌಶಲವನ್ನು ಕುರಿತು ಹೇಳಿದ್ದಾರೆ. ಹಾಗೆಯೇ ಕವಿಯ ಕಾವ್ಯ ರಚನಾ ಶೈಲಿಗೆ ಪೂರಕವಾದ ಕಾವ್ಯ ತಂತ್ರಗಳ ಅವಶ್ಯಕತೆ ಮತ್ತು ಮಹತ್ವವನ್ನು ತಿಳಿಸಿದ್ದಾರೆ. ಕವಿ ಪ್ರತಿಭೆಗೆ ಕಳೆಬರಬೇಕಾದರೆ ಸಹೃದಯನು ಎಷ್ಟು ಮುಖ್ಯ ಮತ್ತು ಅತನ ಪಾತ್ರವನ್ನು ಕುರಿತು ಎಳೆ ಎಳೆಯಾಗಿ ತಿಳಿಸುವ ಪ್ರಯತ್ನ ಮಾಡಿದ್ದಾರೆ.

### ಆ) ಕಾವ್ಯ ಸ್ವರೂಪ :-

ಕವಿ ಪು.ತಿ.ನ.ರವರ ಕಾವ್ಯ ಸ್ವರೂಪ ಇತರೆ ಕವಿಗಳಿಗಿಂತ ತೀರ ಭಿನ್ನವಾದುದು. ಏಕೆಂದರೆ ಅವರ ಕಾವ್ಯವು ಜೀವನದ ವಾಸ್ತವತೆಯನ್ನು ಬಿಂಬಿಸುವಂತಹದ್ದು. ಹಲವು ಚಿಂತನ-ಮಂಥನಗಳ ಮೂಲಕ ಭಾವನೆಗಳನ್ನು ಹೊರಹಮ್ಮಿಸುವ ಶೈಲಿ ಅವರದು.

"ಸೃಷ್ಟಿ ರಹಸ್ಯದಷ್ಟೇ ಅದ್ಭುತವೂ ರಮ್ಯವೂ ಆದುದು ಕಾವ್ಯರಹಸ್ಯ. ಏಕೆಂದರೆ ಕಾವ್ಯವೂ ಒಂದು ಸೃಷ್ಟಿ. ಬೀಜದಿಂದ ಭೂಜವೇಳುವ ಕ್ರಿಯೆಯೂ ಭ್ರೂಣದಿಂದ ಪ್ರಾಣ ಮೈದಾಳಿ ನಿಲ್ಲುವ

ಪರಿಯೂ ಕವಿಯಲ್ಲಿ ಕವಿತೆ ಹುಟ್ಟುವ ಬಗೆಯೂ ಬಹುಶಃ ಒಂದೇ"[೧೭] ಎಂದು ಹೇಳುವ ಮಾತಿನಲ್ಲಿ ಸತ್ಯವಿದೆ. ಏಕೆಂದರೆ ಕವಿಯಲ್ಲಿ ಕಾವ್ಯ ಮೂಡುವಾಗ ಅದು ಇಂಥದ್ದೇ ಸ್ವರೂಪದ್ದೆಂದು ತತಕ್ಷಣಕ್ಕೆ ಹೇಳಲು ಸಾಧ್ಯವಿಲ್ಲ. ಆ ಕಾವ್ಯ ಹುಟ್ಟಿ ಅದು ಬರಹಕ್ಕೆ ಬಂದು ಶಬ್ದ ಸಂಸ್ಕಾರದಲ್ಲಿ ತೊಡಗಿ, ಅದಕ್ಕೆ ತಕ್ಕುದಾದ ಅರ್ಥವನ್ನು ದೊರಕಿಸಿ ಆ ಕಾವ್ಯಕ್ಕೆ ಒಂದು ರೂಪವನ್ನು ನೀಡಬೇಕಾಗುತ್ತದೆ. "ಬಸುರಲ್ಲಿ ಬೆಳೆಯುವ ಮಗುವಿನ ವಿಚಾರ ತಾಯಿಯಾದವಳಿಗೆ ಎಷ್ಟು ಗೊತ್ತೊ ಅಷ್ಟೇ. ಅಥವಾ ಅದಕ್ಕೂ ಮಿಗಿಲಾಗಿ ಕವಿಗೆ ಕಾವ್ಯರಹಸ್ಯ"[೧೮] ಎನ್ನುವ ಹಾಗೆ ಪು.ತಿ.ನ.ರವರ ಕಾವ್ಯ ಸ್ವರೂಪವೂ ಕೂಡ ಇದೇ ಬಗೆಯದ್ದು, ಅಂದರೆ ಕಾವ್ಯ ಕವಿ ಮನಸ್ಸಿನಿಂದ ಭಾವತುಂಬಿ ಹೊರಹೊಮ್ಮಿದಾಗ ಅದರ ಸ್ವರೂಪ ತಿಳಿಯುತ್ತದೆ.

ಬೇಂದ್ರೆಯವರು ಹೇಳುತ್ತಾರೆ "ಹಕ್ಕಿಗೆ ಗರಿ ಇದ್ದಂತೆ ಕವಿಗೆ ಕವನ"[೧೯] ಎಂದು. ಇದು ಕವಿ ಮತ್ತು ಕವನಕ್ಕೂ ಇರುವ ಸಂಬಂಧವನ್ನು ತಿಳಿಸುತ್ತದೆ. ಇದಕ್ಕೆ ಪು.ತಿ.ನ.ರವರ 'ಕವಿ' ಎಂಬ ಪದ್ಯವನ್ನು ಇಲ್ಲಿ ಗಮನಿಸಬಹುದು. ಕವಿ ಎಂದರೇನು? ಕವಿಯಲ್ಲಿರುವ ಕಾವ್ಯಶಕ್ತಿ ಮತ್ತು ಗುಣಗಳನ್ನು ಈ ಕವಿತೆಯಲ್ಲಿ ಅವರು ಹೇಳಿದ್ದಾರೆ.

**ಯೋಜನಗಳಾಚೆಯೊಳು ಎಲ್ಲಿಯೋ ಜನಿಯಾಂತು**
**ಮಿಂಚಿನಣುಗಳನೇರಿ ಸಕಲ ದಿಙ್ಮಾಂಡಲವ**
**ಸಂಚರಿಸುತಂತರದಿ ಮೌನದಿಂ ಮಿಡಿಯುತಿಹ**
**ಸೋಜಿಗದ ಗೀತವನು ಹಿಡಿದು, ಉಜ್ವಲಗೊಳಿಸಿ.**

ನಿನ್ನ ವಿಸ್ಮಕರವಾದ ಗೀತೆಯಿಂದ ಇಡೀ ವಿಶ್ವವನ್ನೇ ಉಜ್ವಲಗೊಳಿಸುವ, ನಿನ್ನಲ್ಲಿ ಹುದುಗಿರುವ ರಸಪ್ರಜ್ಞೆಯನ್ನು ಸರ್ವರಲ್ಲೂ ಮಿಡಿಯುವಂತ ಮಾಡುವ ಸಕಲ ಕಲಾಪಾಂಡಿತ್ಯವುಳ್ಳವನೇ ನೀನು ಎಂದು ಪು.ತಿ.ನ. ಕವಿ ಮನಸ್ಸಿನ ತುಮುಲಗಳನ್ನು ಎತ್ತಿ ತೋರಿಸಿದ್ದಾರೆ.

**ಶೋತೃಪಥವೈದಿಸುವ ಯಂತ್ರದೊಲು–ಹೇಕವಿಯೆ**
**ಬಾಳುಬಾಳುಗಳಾಚೆ ಬ್ರಹ್ಮಾಂಡ ಹೃದಯಾಂತ**
**ರಾಗಗೊಳು ಸಂತತಂ ಸುಜನಿಸುವಾನಂದ**
**ಮಾತೃಕೆಯ ತಾನಾದ, ವಿಶ್ವಕ್ಕೆಲ್ಲಕು ಹರಡಿ.**

ಶೋತೃಗಳ ದಾರಿಯನ್ನು ಯಂತ್ರದಂತೆ ಸಾಗಿಸುವವನು ನೀನು ಮನುಷ್ಯ ಬಾಳಿನ, ಆತನ ಹೃದಯಾಂತರಾಳದಲ್ಲಿ ಶಾಶ್ವತವಾಗಿ ಉಂಟಾಗುವ ಆನಂದವನ್ನು ವಿಶ್ವದೆಲ್ಲೆಡೆಯೂ ಪಸರಿಸುವ ಮೂಲ ಆಕರವೇ ನೀನು ಎಂದು ಇಲ್ಲಿ ಕವಿಯ ಗುಣಗಳನ್ನು ಪು.ತಿ.ನ.ಸುಪ್ತವಾಗಿ ಹೇಳುತ್ತಾರೆ.

**ವಿಕೃತಿ ಪದರಗಳಲ್ಲಿ ಮೌನವಾಗಿಹ ಶಿವದ**

**ಗೀತವನು ಕರಣಗೋಚರಮಾಗೆ ಸ್ಪಂದಿಸುತ**

**ಚೇತನರೊಳಾ ಚಿದಾನಂದಮನೆ ಮರುಗೊಳಿಪ**

**ಪ್ರಕೃತಿ ಶಿಲ್ಪಿಯು ಸಮದ ಚಿದ್ಯಂದ್ರ ನೀನಲಾ!**

ವಿಕೃತಿಯ ಪದರಗಳಲ್ಲಿ ಮೌನವಾಗಿಹ ಸೊಬಗನ್ನು ಮಂಗಳಕರವಾದ ಗೀತೆಯಿಂದ ಇಂದ್ರಿಯಾನುಗೋಚರಗೊಳಿಸಿ ಹಿತಕರ ಆನಂದವನ್ನು ಸವಿಯುವಂತೆ ಮಾಡುವವನೇ ಕವಿ. ನಮ್ಮ ಚೇತದಲ್ಲಿ 'ಚಿತ್'ಆನಂದವನ್ನು ಮರುಗೊಳಿಸಿ ಪುಳಕಗೊಳಿಸುವ ಆ ಸೃಷ್ಟಿಕರ್ತನಿಗೂ ಮೀರಿದ ಶಿಲ್ಪಿ ನೀನು ಎಂದು ಹಾಡಿಹೊಗಳುತ್ತಾರೆ. 'ಚಿದ್ಯಂತ್ರ' ಈ ಪದ ಪ್ರಯೋಗವು ಒಂದು ವಿಶೇಷವಾದ ಪದ ಏಕೆಂದರೆ ಪು.ತಿ.ನ.ರವರು ಇಂತಹ ಪದ ವಿಶೇಷಣಗಳಿಗೆ ಪ್ರಸಿದ್ಧರಾದ ಕವಿ. "ಚಿದ್ಯಂತ್ರ ಎಂದರೆ ಆತ್ಮಕ್ಕೆ ಚೇತನವನ್ನು ತುಂಬುವ, ಆನಂದ ಒದಗಿಸುವ ಯಂತ್ರ ಕವಿ" ಎಂಬ ಅರ್ಥದಲ್ಲಿ ಈ ಪದ ಪ್ರಯೋಗವನ್ನು ಮಾಡಿದ್ದಾರೆ.

**ಮನದ ಮೊನೆಯನು ಮಾಡು ಶಿವಸೂಚಿಯಾಗುವಂತೆ**

**ಮರ್ಮವನು ನುಡಿ, ಲೋಕ ತನ್ನ ತಾನರಿಯುವಂತೆ**

ನಿನ್ನ ಮನದೊಂದಿಗೆ ಚರ್ಚೆಯನ್ನು, ಮಾತಿನ ಯುದ್ಧವನ್ನು ಮಾಡಿ ಒಂದು ಶುಭವಾದ, ಮಂಗಳಕರವಾದ ಸೂಚನೆಯನ್ನು ನೀಡು ಅಂದರೆ ಕಾವ್ಯದಿಂದ ಶುಭವನ್ನು ಉತ್ಪನ್ನ ಮಾಡು. ಲೋಕ ತನ್ನನ್ನು ತಾನು ಅರಿಯುವಂತೆ ನಿನ್ನ ಅಂತರಂಗವನ್ನು ತೆರೆದಿಡು ಸತ್ಯವನ್ನು ನುಡಿ.

ಒಟ್ಟಾರೆಯಾಗಿ ಈ ಕಾವ್ಯವು ಸಾನೆಟ್ ಮಾದರಿಯದ್ದಾಗಿದೆ. ಮೊದಲ ಮೂರು ಪದ್ಯ ಭಾಗಗಳಲ್ಲಿ ದ್ವಿತೀಯಾಕ್ಷರ ಪ್ರಾಸ ಮತ್ತು ಕೊನೆಯ ಎರಡು ಸಾಲುಗಳು ಅಂತ್ಯ ಪ್ರಾಸವಾಗಿದೆ. ಒಟ್ಟು ೧೪ ಸಾಲುಗಳು. ಇದು ಈ ಕಾವ್ಯದ ಒಟ್ಟು ಸ್ವರೂಪ.

**ಎನ್ನ ಪಾಡೆನಗಿರಲಿ ಅದರ ಹಾಡನ್ನಷ್ಟೆ**

**ನೀಡುವೆನು ರಸಿಕ ನಿನಗೆ!**

**ಕಲ್ಲು ಸಕ್ಕರೆಯಂಥ ನಿನ್ನೆದೆಯು ಕರಗಿದರೆ**

**ಆ ಸವಿಯ ಹಣಿಸು ನನಗೆ!**

ಬೇಂದ್ರೆಯವರು ಈ ಮೇಲಿನ ಪದ್ಯ ಭಾಗದಲ್ಲಿ ಹೇಳುವ ಮಾತುಗಳನ್ನು ಬಹು ಸೂಕ್ಷ್ಮವಾಗಿ ಗಮನಿಸಬೇಕಾದುದು. ಏಕೆಂದರೆ ಕವಿಯೂ ಕೂಡ ಒಬ್ಬ ಸಾಮಾನ್ಯ ಮನುಷ್ಯನಂತೆ. ಅವನಿಗೂ ಕೂಡ ಪ್ರಾಪಂಚಿಕವಾದ ನೋವು-ನಲಿವುಗಳ ಅರಿವು ಇದೆ. ಆದರೂ ತನ್ನ ಪಾಡನ್ನೆಲ್ಲಾ ಹಾಡಾಗಿ ಪರಿವರ್ತಿಸಿ ಅದರ ರಸವನ್ನಷ್ಟೇ ರಸಿಕರಿಗೆ ನೀಡುವನು. ಏಕೆಂದರೆ ಕವಿ ಕಾವ್ಯವನ್ನು ಓದಿ ಸಹೃದಯನ ಮನಸ್ಸು

ಕರಗಿದರೆ ಅದರಿಂದಲೇ ಕವಿಗೆ ತೃಪ್ತಿ. ಹೀಗೆ ಕವಿಯು ತನ್ನ ಪಾಡನ್ನು ಹಾಡಾಗಿಸುವುದು ಕೇವಲ ಸಹೃದಯ ಮನಃ ಕರಗಿಸಲು ಮಾತ್ರವಲ್ಲ ತನ್ನ ನೋವನ್ನು ಮರೆತು ರಸವನ್ನು ಪಡೆಯಲು, ಇಂತಹ ಕಾವ್ಯ ಗುಣವನ್ನು ನಾವು ಪು.ತಿ.ನ.ರವಲ್ಲೂ ಕಾಣುತ್ತೇವೆ.

"ಕವಿ ಈ ಲೋಕದ ವ್ಯವಹಾರಿಕ ಜಂಜಡಗಳಿಂದ ತೇಲಾಡುವುದನ್ನು ಕಲಿತವನು; ಆದುದರಿಂದಲೇ ನಾವು ಕಾಣದ ಕನಸುಗಳು ಅವನ ಮೇಲೆ ಆಡುತ್ತವೆ. ಭವದಿಂದ ಎದ್ದು ಭಾವದಲ್ಲಿ ತೇಲಾಡುತ್ತದೆ. ವಸ್ತುವಿನ ಲೌಕಿಕ ಬಯಕೆಯ ಸೆರೆಯಿಂದ ಮೇಲೆದ್ದು ನಿಲ್ಲುವ ಈ ಕೌಶಲವೇ ಕವಿಯ ಸಾಮರ್ಥ್ಯ"[೨೦] ಹೀಗೆ ಇಂತಹ ಲೌಕಿಕ ಜಡತ್ವದಿಂದ, ಬಯಕೆಗಳಿಂದ ಮೇಲೆದ್ದು ತಮ್ಮದೇ ಆದ ಶೈಲಿಯಲ್ಲಿ ಕಾವ್ಯ ರಚಿಸಿದವರಲ್ಲಿ ಪು.ತಿ.ನ. ಪ್ರಮುಖರು.

ಬದುಕಿನ ವಾಸ್ತವತೆಯನ್ನು ಮನುಷ್ಯನ ಅಂತರಂಗದ ತುಮುಲವನ್ನು ಎತ್ತಿ ತೋರಿಸುವ ತಮ್ಮ ಶಬ್ದಸಾಗರದ ಮೂಲಕ ಅದಕ್ಕೊಂದು ಚೇತನವನ್ನು ಕೊಡುವಂತಹ ಕವಿ ಪು.ತಿ.ನ. ತಮ್ಮ ನನ್ನ ಹಾಡು ಎಂಬ ಪದ್ಯದಲ್ಲಿ ಕವಿಗಿರುವ ಸಾಮಾನ್ಯ ಪ್ರವೃತ್ತಿಯನ್ನು ಪರಿಚಯಿಸುತ್ತಾರೆ. ಕಾವ್ಯ ಎಂದರೇನು?, ಕಾವ್ಯದ ಸ್ವರೂಪವನ್ನು ಕುರಿತು ಈ ಕವನ ಮಾತಾಡುತ್ತದೆ.

**ಬಳ್ಳಿಯೊಡಲ ಕುಸುಮದಂತೆ**
**ಹುದುಗಿದೆನ್ನ ಗೀತವು**
**ಮೆಲ್ಲನೊಡೆದು ಬರುವುದಂತು?**
**ಎಂದು ನಲಿವೆ-ಬೆದರುವೆ**

ಬಳ್ಳಿಯ ಒಡಲಿನಲ್ಲಿ ಹೂವು ಹೇಗೆ ಸುಪ್ತವಾಗಿರುತ್ತದೆಯೋ ಹಾಗೆಯೇ ನನ್ನ ಗೀತೆಯೂ ಕೂಡ ನನ್ನ ಆಂತರ್ಯದಲ್ಲಿ ಹುದುಗಿದೆ. ಆ ಗೀತೆಯು ಮೆಲ್ಲನೆ ಹೊರ ಹೊಮ್ಮುವಾಗ ಅದರ ಆನಂದ ಒಂದು ಕಡೆ ಇದ್ದರೆ ಮತ್ತೊಂದೆಡೆಗೆ ಭಯವೂ ಇದೆ. ಏಕೆಂದರೆ ಈ ಕಾವ್ಯದ ಸ್ವರೂಪ ಹೇಗಿದೆಯೋ ಎಂಬ ಭಯ ಹಾಗೂ ರಸಿಕರಿಗೆ ಇದು ರಸಾನುಭವ ನೀಡುತ್ತದೆಯೋ ಇಲ್ಲವೋ ಎಂಬ ತಳಮಳ ಇಲ್ಲಿದೆ. ಅಂದರೆ ಕವಿ ತನ್ನ ಕಾವ್ಯವನ್ನು ರಚಿಸುವಾಗ ಅದು ಒದಗಿಸುವ ಆನಂದ ಮತ್ತು ರಸಾನುಭವದ ಬಗೆಗಿನ ಪ್ರಜ್ಞೆ ಆತನಿಗಿರಬೇಕು ಎಂಬುದೇ ಪು.ತಿ.ನ.ರವರ ನಿಲುವು.

**ಎದೆಯ ದುಗುಡವೆಲ್ಲವಳೆದು**
**ಕಣ್ಣ ನೀರು ಬತ್ತಿ ಹೋಗಿ**
**ಕರೆ ಅದೊಂದು ಮಾತ್ರ ನಿಲ್ಲೆ**
**ನನ್ನ ಹಾಡು ಬಿರಿವುದು**

ಇಲ್ಲಿ ಕವಿ ಮನುಷ್ಯ ತನ್ನ ಪ್ರಾಪಂಚಿಕ ನೋವನ್ನು ನುಂಗಿ, ಅದರಿಂದಾಗುವ ಕಷ್ಟವನ್ನು ಸಹಿಸಿ ಕೊನೆಗೆ ಅದರ ಕರೆಯೊಂದು ಉಳಿಸಿಕೊಂಡು ಚೇತನ ಹೀನನಾದಾಗ ಅವನ, ಬಾಳಿಗೆ ಒಂದು ಚೇತನವನ್ನು ನೀಡಲು ಈ ನನ್ನ ಹಾಡು ಅರಳುತ್ತದೆ ಎಂದು ಕಾವ್ಯವು ಆ ಮಟ್ಟಿನ ಜೀವನ ಚೇತನವನ್ನು ನೀಡುವಂತಹದ್ದಾಗಿರಬೇಕು.

**ಬಾಳನೊಂದು ಹುಚ್ಚಮಾಡಿ**

**ದೊಲುಮೆರಾಗ ಉರಿದು ಹೋಗಿ,**

**ಅದರ ಬೂದಿ–ನೆನಪು–ನಿಲ್ಲೆ**

**ನನ್ನ ಹಾಡು ಬಿರಿವುದು.**

ಬಾಳಿನಲ್ಲಿ ನೊಂದು ಹುಚ್ಚಾಗಿರುವಾಗ, ಒಲುಮೆ, ರಾಗಗಳು–ಜೀವನದ ಎಲ್ಲಾ ಪ್ರೀತಿಭಾವಗಳು ಉರಿದು ಅದರ ನೆನಪು ಮಾತ್ರ ಉಳಿದಿರುವ ಸಂದರ್ಭದಲ್ಲಿ ಅಂದರೆ ಜೀವನದ ನಶ್ವರತೆಯ ಕುರಿತು ನೊಂದಾಗ ನನ್ನ ಹಾಡು ಹುಟ್ಟುತ್ತದೆ. ಏಕೆಂದರೆ ಆ ಹಾಡಿನಿಂದಲೇ ಸಹೃದಯ ಜನಕ್ಕೆ ತೃಪ್ತಿ ಒದಗಲು ಸಾಧ್ಯ.

**ಇರೆವು ಚಿರವು ಬಯಸಿದೊಂದು**

**ನೆಲವು ಬಂದು ನಮೆಮೆದುಹೋಗಿ**

**ಬಯಕೆಯೊಂದು ಮಾತ್ರ ನಿಲ್ಲೆ.**

**ನನ್ನ ಹಾಡು ಬಿರಿವುದು**

ಮನುಷ್ಯ ಬಯಸಿದೊಂದು ಜೀವನದಲ್ಲಿ ಉಳಿಯದೇ, ಬಾಳಿನಲ್ಲಿ ಸಂತೋಷ ಬಂದು ಹೋಗಿ ಕೇವಲ ಬಯಕೆಯೊಂದೇ ಉಳಿದುಕೊಂಡಾಗ ಆ ಬಯಕೆಗೆ ಒಂದು ದಾರಿಯನ್ನು ಸೂಚಿಸಲಿಕ್ಕೆಂದೇ ಈ ನನ್ನ ಹಾಡು ಹುಟ್ಟುವುದು. ನೊಂದ ಬದುಕಿಗೆ, ಜೀವನದಲ್ಲಿ ಚೇತನ ತರುವುದೇ ಈ ಕಾವ್ಯ. ಎನ್ನುವುದು ಈ ಪದ ಭಾಗದಲ್ಲಡಗಿರುವ ಒಂದು ಭಾವ.

**ಮುಗುದೆಯೊಲ ಪ್ರೇಮದಂತೆ**

**ಹುದಗಿದೆನ್ನ ಗೀತವು**

**ಬಗೆಯ ಗೂಡನೊಡೆಯುತೆಂದು**

**ಬರುವುದೆಂದು ಬೆದರುವೆ**

ಮುಗ್ಧೆಯೊಳಗೆ ಪ್ರೇಮ ಹೇಗೆ ಅಡಗಿರುತ್ತೆದೆಯೋ ಹಾಗೆ ನನ್ನ ಕಾವ್ಯ ಹುದುಗಿದೆ. ನನ್ನ ಮನಸ್ಸಿನ ಭಾವನೆಗಳನ್ನು ಹೊರಚೆಲ್ಲುವ ಆ ಕಾವ್ಯ ನನ್ನ ಮನಸ್ಸೆಂಬ ಗೂಡನ್ನು ಒಡೆದು ಯಾವಾಗ ಹೊರಬರುತ್ತದೆ ಎಂಬ ಬೆದರಿಕೆಯೂ ಇದೆ. ಅಂದರೆ ಇಲ್ಲಿ ಕವಿಗೆ ತನ್ನ ಕಾವ್ಯದ ಕುರಿತು ಜಂಭವಿಲ್ಲ,

ಮೋಹವಿಲ್ಲ, ಆದರೆ ಅದು ಸಹೃದಯದರಿಗೆ ರುಚಿಸುವುದೋ ಇಲ್ಲವೋ ಎಂಬ ಚಿಂತನಾತ್ಮಕ ನಿಲುವು ಕವಿಗಿದೆ. ಪು.ತಿ.ನ. ಕಾವ್ಯದಲ್ಲಿ ಬಯಸುವುದು ಕೂಡ ಇದನ್ನೇ.

ಒಟ್ಟಾರೆಯಾಗಿ ಕಾವ್ಯ ಹೇಗಿರಬೇಕು, ಅದರ ಸ್ವರೂಪವನ್ನು ಕುರಿತು ತಮ್ಮ ನಿಲುವುಗಳನ್ನು ಇಲ್ಲಿ ಹೇಳಿದ್ದಾರೆ. ಹಾಗೆಯೇ ಕಾವ್ಯವು ಒಳಅರ್ಥದಲ್ಲಿ ಅದು ಹೊಂದಿರಬೇಕಾದ ಎಲ್ಲ ಗುಣವಿಶೇಷಗಳನ್ನು ಪು.ತಿ.ನ. ಈ ಕಾವ್ಯದಲ್ಲಿ ಹೇಳಿದ್ದಾರೆ.

"ಕಾವ್ಯ ಎಂಬ ಮಾತನ್ನು ಉಚ್ಛರಿಸಿದ ಕ್ಷಣವೇ ಮತ್ತೆರಡು ಮಾತುಗಳು ಮೂಡುತ್ತವೆ. ಪ್ರತಿಭೆ ಮತ್ತು ಧ್ವನಿ ಕವಿಯ ಪರವಾಗಿ ಪ್ರತಿಭೆ, ಸಹೃದಯನ ಪರವಾಗಿ ಧ್ವನಿ. ಇಲ್ಲಿ 'ಪ್ರತಿಭೆಯಂತೆ ಆಗಮನ ಅಲ್ಲಿ 'ಧ್ವನಿ'ಯಂತೆ ನಿರ್ಗಮನ"[೨೧] ಎಂದು ಪು.ತಿ.ನ ಹೇಳುವ ವಿಚಾರದಲ್ಲಿ ಅವರ 'ಹೊಸಹಾಡು' ಎಂಬ ಕವನವು ಉತ್ತಮ ಉದಾಹರಣೆ ಎಂದರೆ ತಪ್ಪಾಗಲಾರದು.

**ಗಳಿಗೆ ಗಳಿಗೆಗೂ ಹೊಸ ಹೊಸ ರೀತಿಗೆ**
**ಈ ಜಗವೋಡುತಿದೆ–**
**ಹಳತ ನೋಡಿ ತಾ ಕಿಲಕಿಲ ನಗುತಲಿ**
**ಓ ಜಗ ವೋಡುತಿದೆ.**

"ಕಾವ್ಯ ಮೂಲತಃ ಒಂದು ಅನುಭವ ವಿಶೇಷ. ಈ ಒಂದು ಅನುಭವ ವಿಶೇಷವೇ ಕಾವ್ಯದ ಮೊದಲೂ ಹೌದು. ತುದಿಯೂ ಹೌದು, ಪ್ರೇರಣೆಯೂ ಹೌದು, ಪ್ರಯೋಜನವೂ ಹೌದು"[೨೨] ಹೀಗೆ ಈ ಅನುಭವವು ಕವಿ ಕಂಡು ಅದನ್ನು ಶಬ್ದಸಮೂಹಗಳಲ್ಲಿ ಜೋಡಿಸಿ ಅದಕ್ಕೊಂದು ಆಕಾರ ನೀಡುತ್ತಾನೆ. ಅದರ ಧ್ವನಿಯನ್ನು ಸಹೃದಯನಾದವನು ಆಸ್ವಾದಿಸಬೇಕಾಗುತ್ತದೆ. ಈ ಮೇಲಿನ ಪದ್ಯ ಭಾಗವು ಆಧುನಿಕತೆಯನ್ನು ಕಂಡು ಅದರ ಮೋಹದ ಬಲೆಗೆ ಒಳಗಾಗಿ ಅದರ ಹಿಂದೆ ಓಡುವ ಸಮಾಜದ ಸ್ಥಿತಿಯನ್ನು ಇದು ವ್ಯಕ್ತಪಡಿಸುತ್ತದೆ. ಇದು ಈ ಕವನ ಭಾಗದ ಧ್ವನಿ.

"ಕಾವ್ಯ ಅಭಿವ್ಯಕ್ತಿಸುವುದು ಅನುಭವವನ್ನು ಎನ್ನದೆ, ಅನುಭವ ವಿಶೇಷವೆಂದು ಹೇಳಿದ್ದರಲ್ಲಿ ಅರ್ಥವಿದೆ. 'ವಿಶೇಷ ಎಂದರೆ, ಅನುಭವದಲ್ಲೇ ವಿಶೇಷ ಮೊದಲೇ ಇರುತ್ತದೆ. ಎಂದೆಲ್ಲ; ಅದು ಇರಬಹುದು, ಇಲ್ಲದಿರಬಹುದು. ಆದರೆ ಅದನ್ನು ಗ್ರಹಿಸುವ, ಪರಿಭಾವಿಸುವ ಹಾಗೂ ಅಭಿವ್ಯಕ್ತಿಸುವ ವಿಶೇಷತೆಯಿಂದ, ಅದು 'ಅನುಭವ ವಿಶೇಷವಾಗುತ್ತದೆ"[೨೩] ಹಾಗೆಯೇ 'ಹೊಸಹಾಡು' ಎಂಬ ಈ ಕವನದ ಸ್ವರೂಪವೂ ಕೂಡ

**ದಿನದಿನ ಯುಗಯುಗ ಮನುಮನ್ವಂತರ**
**ಮಾಡಿದೆಂದನೆ ತಾ ಮಾಡುತ್ತ**
**ಒಂದೆ ಹಾಡು ಓ ಒಂದೆ ಸೋಬಾನೆ**

**ಹಾಡಿದುದನೆ ತಾ ಹಾಡುತ್ತ,**

**ಕಣ್ಣ ಕಪಾಟಿನ ರಥಾಶ್ವದಂದದಲಿ**

**ಒಂದೇ ಹಾದಿಯ ಹಂಬಲವಾಗಿ**

ಮನುಷ್ಯ ಸಂಕುಲವು ಯುಗ ಯುಗಗಳೇ ಕಳೆದರೂ ಕೂಡ ಅವು ಮಾಡಿದುದನ್ನೇ ಮಾಡುತ್ತ ಕಾಲ ಕಳೆಯುತ್ತಿವೆ. ಒಂದೇ ರೀತಿಯ ಹಾದಿಯನ್ನು ಕಣ್ಣು ಮುಚ್ಚಿ ಹಿಂಬಾಲಿಸುತ್ತಿವೆ.

ಕವಿ ಪು.ತಿ.ನ.ರವರು ಈ ಕವನದ ಭಾಗದಲ್ಲಿ ಹೇಳಹೊರಟಿರುವ ವಿಷಯವೇನೆಂದರೆ ಮನುಷ್ಯ ಸಂಕುಲವು ಒಳ್ಳೆಯದು–ಕೆಟ್ಟದ್ದು ತನ್ನ ಬೇಕು–ಬೇಡಗಳು, ಸರಿ–ತಪ್ಪು ಇವುಗಳನ್ನಾವುದೂ ಲೆಕ್ಕಿಸದೇ ಕೇವಲ ಬಾಹ್ಯ ಸೌಂದರ್ಯಕ್ಕೆ ಮರುಳಾಗಿ ತಮ್ಮ ಪ್ರಜ್ಞೆಯನ್ನು ಮರೆತು ಸಾಗುತ್ತಿದ್ದಾರೆ ಎಂಬ ಆಧುನಿಕತೆಯ ವಾಸ್ತವವನ್ನು ಕುರಿತು ವಿಭಿನ್ನ ನೆಲೆಗಳನ್ನು ಚಿತ್ರಿಸಿದ್ದಾರೆ.

**ನಡದೀ ಲೋಕವು ಆವ ಶಕ್ತಿಗೋ**

**ಇಂದು ತಾನು ಬಲು ಬಲು ಮರುಳಾಗಿ**

**ಓಡುತಿದೆ ಅಹ ಓಡುತಿದೆ!**

**ಹಳತ ನೋಡಿ ತಾ ಕಿಲಕಿಲ ನಗುತಲಿ**

**ಈ ಜಗವೋಡುತಿದೆ.**

ಇಂಥ ಸಾಹಸಕ್ಕೆ ಈ ಲೋಕ ಮರುಳಾಗಿ ಕೈ ಹಾಕುತ್ತಿರುವುದು ಯಾವ ಶಕ್ತಿ ಸಾಧನೆಗಾಗಿ ಎಂಬ ಚಿಂತೆ ಕವಿ ಮನಸ್ಸಿಗೆ ಕಾಡುತತಿದೆ. "ಹಳತ ನೋಡಿ ತಾ ಕಿಲಕಿಲ ನಗುತಲಿ" ಎಂಬ ಈ ವಾಕ್ಯವು ಆಧುನಿಕತೆ ಮತ್ತು ಪರಂಪರೆಯ ಪರಸ್ಪರ ಮುಖಾಮುಖಿಯನ್ನು ನಡೆಸುತ್ತಿದೆ. ಪರಂಪರೆಯನ್ನು ಬಿಟ್ಟು ಆಧುನಿಕತೆಯ ಹಿಂದೆ ಜಗತ್ತು ಓಡುತ್ತಿರುವ ಕುರಿತು ನೋವು, ಆತಂಕ, ಆಶ್ಚರ್ಯ ಎಲ್ಲವೂ ಈ ಕವನ ಭಾಗದಲ್ಲಿದೆ.

**ಅಜ್ಞಾನಕೆ ವಿಜ್ಞಾನದ ಹೊಸಬೆಳಕು**

**ನಿಂತು ಮನಕೆ ಹೊಸ ಮತಗಳ ಚುರುಕು**

**ಊಹೆಯನೇ ಮುಂಚುವ ಹೊಸ ಸೃಷ್ಟಿ.**

**ಹೊಸ ಬಾಳಿಗೆ ಹೊಂಚುವ ಹೊಸ ದೃಷ್ಟಿ.**

ವಿಜ್ಞಾನ ಬೆಳೆದಂತೆ ಬದುಕಿನಲ್ಲಿ ಬೆಳಕು, ಜ್ಞಾನ ಎಲ್ಲವೂ ಬಂತು, ಬದಲಾದ ಸ್ವರೂಪಗಳಿಂದ ಯಂತ್ರ–ತಂತ್ರಜ್ಞಾನ ಎಲ್ಲವೂ ನಮ್ಮ ಊಹೆಗೂ ಮೀರಿ ಬಾಳಿಗೆ ಹೊಸ ದೃಷ್ಟಿಯನ್ನು ನೀಡಿದೆ. ವಿಜ್ಞಾನ ಬಂದ ನಂತರ ಮಾನವನ ಬದುಕಿನಲ್ಲಾದ ಬದಲಾವಣೆಗಳ ಕುರಿತು ಕವಿಯು ವಿಸ್ಮಯಗೊಳ್ಳುವ ಬಗೆ ಇಲ್ಲಿದೆ.

**ಕವಿಗಾಯಿತು ನವ ಹರ್ಷಕ್ರಾಂತಿ**

**ಕಲೆಗಾಯಿತು ಹೊಸ ಚೆಲುವಿನ ಕಾಂತಿ**

ಸಾಹಿತ್ಯ ಸಂದರ್ಭದಲ್ಲಾದ ಹೊಸ ಕ್ರಾಂತಿಯನ್ನು ಕವಿ ಇಲ್ಲಿ ಹೇಳ ಹೊರಟಿದ್ದಾರೆ. ಒಟ್ಟಾರೆಯಾಗಿ ಕವಿ ಆಧುನಿಕ ಸಮಾಜದ ಉಗಮದಿಂದಾಗಿ ಲೋಕ ವ್ಯವಹಾರಗಳಲ್ಲಿ ಮನುಷ್ಯನ ಬಾಳಿನಲ್ಲಿ ಸಾಹಿತ್ಯ, ಕಲೆ, ಸಂಗೀತ, ಆಹಾರ, ಉಡುಗೆ, ತೊಡುಗೆ ಇವುಗಳಲ್ಲಾದ ಕ್ರಾಂತಿಯನ್ನು ಸೂಚಿತವಾಗಿ ಹೇಳಿದ್ದಾರೆ. ಪಾಶ್ಚಾತ್ಯ ಸಂಸ್ಕೃತಿಯ ತೀಕ್ಷ್ಣ ಪ್ರಭಾವವನ್ನು ತಿರಸ್ಕರಿಸುವ ಮತ್ತು ಅದರ ಪ್ರಭಾವದಿಂದಾಗುವ ಪರಿಣಾಮವನ್ನು ಇಲ್ಲಿ ಹೇಳಿದ್ದಾರೆ. ಅದನ್ನು ಈ ಕೊನೆಯ ಎರಡು ಸಾಲುಗಳಲ್ಲಿ ಕಾಣಬಹುದು.

**ಪ್ರಗತಿಯ ಹಂತಕೊ**

**ಪ್ರಲಯ ದುರಂತಕೊ**

ಎಂಬ ಈ ಸಾಲುಗಳಲ್ಲಿ ಪ್ರಗತಿಯ ಪರಿಣಾಮದ ಕುರಿತು ಚಿಂತನೆಯನ್ನು ಮಾಡಿದ್ದಾರೆ. ಹೀಗೆ ಈ 'ಹೊಸಹಾಡು' ಎಂಬ ಕವನ ಭಾಗದಲ್ಲಿ ಕವಿ ಮನುಷ್ಯನ ಯಥಾವತ್ತಾದ ಈ ಚಲನವಲನಗಳನ್ನು, ಆಧುನಿಕ ದೃಷ್ಟಿಕೋನಗಳು, ಸಾಮಾಜಿಕ ಒಲವುಗಳು, ಆಧುನಿಕ ಪ್ರೇರಣೆ, ಪ್ರಭಾವಗಳಿಂದ ಜೀವನದ ಮೇಲೆ ಉಂಟಾಗುವ ಪರಿಣಾಮದ ಕುರಿತಾದ ಚಿಂತನ-ಮಂಥನಗಳನ್ನು ಮಾಡಿದ್ದಾರೆ. ಆಧುನಿಕತೆ ಕುರಿತ ಜಿಜ್ಞಾಸೆ ಮತ್ತು ಅದರಿಂದ ಆಗುವ ದುರಂತದ ಕುರಿತ ತೀವ್ರವಿಷಾದ ಇಲ್ಲಿದೆ. ಕವನ ಭಾಗದಲ್ಲಿ ಬಳಸುವ ಅಂತ್ಯಪ್ರಾಸಗಳು ಇವರ ಕಾವ್ಯ ಸ್ವರೂಪದ ಬಗೆಯನ್ನು ವ್ಯಕ್ತಪಡಿಸುತ್ತದೆ.

"ಕಾವ್ಯದೊಳಗಿನ ಈ ಶಬ್ದಹಿಡಿದು ಕೊಡುವ ಅರ್ಥ ಎಂತಹದ್ದು? ಅದನ್ನು ಜಗನ್ನಾಥನು ರಮಣೀಯಾರ್ಥ ಎಂದು ಕರೆಯುತ್ತಾನೆ. ರಮಣಿಯ ಎಂದರೆ ಲೋಕೋತ್ತರವಾದ ಅಹ್ಲಾದವನ್ನುಂಟು ಮಾಡತಕ್ಕದ್ದು. ಎಂದರೆ ಲೋಕ ವ್ಯವಹಾರ-ಭೂಮಿಕೆಯಲ್ಲಿ ನಾವು ಪಡೆಯಲಾರದ ಒಂದು ಅಹ್ಲಾದ ವಿಶೇಷವನ್ನು ಕೊಡುವಂತಹದ್ದು ಅದನ್ನು ಆತ ಚಮತ್ಕಾರ ಎಂದು ಕರೆದಿದ್ದಾನೆ.[೨೪] ಹೀಗೆ ಪು.ತಿ.ನ. ಅವರ ಕಾವ್ಯಗಳಲ್ಲಿ ಇಂತಹ ರಮಣೀಯ ಅರ್ಥ, ಅಹ್ಲಾದ ವಿಶೇಷ ಮತ್ತು ಚಮತ್ಕಾರ ಇವೆಲ್ಲವೂ ಒಟ್ಟೊಟ್ಟಾಗಿ ಸಮ್ಮಿಲಿತವಾಗಿ ಬಂದಿವೆ.

"ರಸಕ್ಕೆ ಅನುಗುಣವಾದ ಶಬ್ದಾರ್ಥಗಳನ್ನು ಕುರಿತ ಚಿಂತನೆಯಲ್ಲಿ ಕವಿಯ ಚೇತಸ್ಸು ನಿಶ್ಚಲವಾಗಿರುವಾಗ, ವಸ್ತುವಿನ ನಿಜ ಸ್ವರೂಪವನ್ನು ಮುಟ್ಟಿದ ಪ್ರಜ್ಞೆ ಅವನಲ್ಲಿ ತಟ್ಟನೆ ಹೊಮ್ಮುತ್ತದೆ"[೨೫] ಎಂದು ಮಹೀಮಭಟ್ಟನು ಹೇಳುವ ಮಾತುಗಳನ್ನು ಗಮನಿಸಬೇಕು.

ಇದಕ್ಕೆ ಪು.ತಿ.ನ. ಹೀಗೆ ಅಭಿಪ್ರಾಯ ಪಡುತ್ತಾರೆ. "ಒಳಮುದ್ದು ಕವಿಗೆ ಸತ್ಯವಾಗಿರಬಹುದು. ಅದು ತನ್ನ ಕಾವ್ಯ ಮುಖೇನ, ಎಂದರೆ ತನಗೆ ವಿಶಿಷ್ಟವಲ್ಲದೇ ಸಾಮಾಜಿಕವಾದ ಶಬ್ದಾರ್ಥಗಳ ಮೂಲಕ 'ಹೊರಮುದ್ದು' ಆಗ ಬೇಕಾಗಿರುವುದನ್ನು ಆತ ಮರೆಯುವಂತಿಲ್ಲ."[೨೬]

ಕಾವ್ಯ ಎನ್ನುವುದು ಇಂತಿಷ್ಟೇ ನಿರ್ದಿಷ್ಟವಾದ ಬಂಧಗಳಿಗೆ, ಮತಗಳಿಗೆ ಹಾಗೂ ಒಂದು ನಿರ್ದಿಷ್ಟವಾದ ಚೌಕಟ್ಟಿಗೆ ಒಳಗಾಗದೆ ಅದು ಬಂಧಮುಕ್ತವಾಗಿರಬೇಕು. ಅಂದರೆ ಕಾವ್ಯ ಇಂತಹದ್ದೇ ವಿಷಯವನ್ನು ಹೇಳಬೇಕಾಗಿಲ್ಲ. ಕಾವ್ಯಕ್ಕೆ ವಿಶಾಲವಾದ ಸ್ವರೂಪವಿದೆ. ಎಂದು ಪು.ತಿ.ನ ಅಭಿಪ್ರಾಯ ಪಡುತ್ತಾರೆ.

"ನಿಜವಾದ 'ಒಳಮುದ್ದು' ಸ್ಪಷ್ಟವಾದುದಲ್ಲ. ದತ್ತವಾದುದ್ದು ತಾನು ಬೇಕೆಂದಾಗ ಅದು ಲಭಿಸದು. ಅದರ ಪ್ರಾದುರ್ಭಾವ ಆಕಸ್ಮಿಕ ಅನಿಯತಃ ಅದನ್ನು ದೈವ ಯತ್ತವೆಂದರೂ ತಪ್ಪಿಲ್ಲ"[೨೭] ಈ ಒಳಮುದ್ದನ್ನು ಕವಿ ಅರಿಯಬೇಕಾದರೆ ಆತನಲ್ಲಿ ಚಿಚ್ಛಕ್ತಿ ಪ್ರತಿಭೆಯಿರಬೇಕು. 'ಪ್ರಜ್ಞೆ'ಯ, ಸಂವೇದನೆಯ ಸ್ವರೂಪವು ಕವಿ ಮತ್ತು ರಸಿಕರಿಬ್ಬರಲ್ಲಿಯೂ ಅದು ಸಮವಾಗಿ ಮೂಡಿರಬೇಕು ಎಂದು ಪು.ತಿ.ನ. ಅಭಿಪ್ರಾಯ ಪಡುತ್ತಾರೆ.

"ಕಾವ್ಯವೊಂದನ್ನು ಓದುತ್ತ ಅದರ ಶಬ್ದಗಳು ಪ್ರತೀತಗೊಳಿಸುವ ವಿವಿಧ ಅರ್ಥಸಾಧ್ಯತೆಯ ಮೂಲಕ ಓದುಗನು ರಸಾನುಭವ ಪಡೆಯುತ್ತಾನೆನ್ನುವ ವಿಚಾರ ಎಲ್ಲ ರೀತಿಯ ಹಾಗೂ ಎಲ್ಲ ಕಾಲದ ಕಾವ್ಯಗಳ ಅರ್ಥವಂತಿಕೆಗೆ ಸಲ್ಲುವಂಥದ್ದಾಗಿದೆ"[೨೮] ಇದೇ ರೀತಿಯ ಕಾವ್ಯ ಸ್ವರೂಪವು ಪು.ತಿ.ನ.ರವರದ್ದಾಗಿದೆ. "ರಸಪ್ರಜ್ಞೆ ತಾನೊಲಿದವನಿಗೆ ದೊರೆಯುತ್ತದೆ" ಎಂಬ ಅವರ ಮಾತು ಅಕ್ಷರಶಃ ನಿಜ ಕಾವ್ಯದಿಂದ ಸಂವೇದನೆಯ ಅರಿವು ಮೂಡಬೇಕು. ಅದು ಇಂಥ ಶಬ್ದಾರ್ಥಗಳ ಬಂಧದಲ್ಲಿಡಗಿರುತ್ತದೆ.

ಇದಕ್ಕೆ ಬೇಂದ್ರೆಯವರ 'ಗಾರುಡಿಗ' ಪದ್ಯವನ್ನು ಗಮನಿಸಬಹುದು.

**ಇದು ಮಂತ್ರ:ಅರ್ಥಕೊಗ್ಗದ ಶಬ್ದಗಳ ಪವಣಿಸುವ ತಂತ್ರ**
**ತಾನೆ ತಾನೆ ಸಮರ್ಥಛಂದ; ದೃಗ್ಬಂಧ–ದಿ**
**ಗ್ಬಂಧ: ಪ್ರಾಣದ ಕೆಚ್ಚು ಕೆತ್ತಿ ರಚಿಸಿದ :ಉಸಿರ**
**ಹೆದೆಗೆ ಹೂಡಿದ ಗರಿಯು ಗುರಿಯು ಸಿರಿಯುಟ್ಟುಬರು**
**ತಿದೆ ತೂರಿ ಲೀಲೆಯಲನಾಯಾಸ, ಗರುಡನು**
**ತೆರಗಿ ಬಂದಿತು–ಭ್ರಮೆಯೋ? ಹುಮ್ಮದವೊ? ನಂಜೊ!**
**ಮರಣವೊ! ನಿದ್ದೆಯೋ! ಮೋಹನವೋ! ಎಚ್ಚರಿಕೆ ಕವಿದ**
**ಮರಣವೊ! ಕನಸೋ! ಕನಸು–ಎಲ್ಲ ಹಾಲೋ ಹಾಲು!**

ಕಾವ್ಯ ಎನ್ನುವುದು ಮಂತ್ರದ ಹಾಗೆ, ಅರ್ಥಕ್ಕೆ ಅನುಗುಣವಲ್ಲದ ಶಬ್ದಗಳ ಜೋಡನೆಯ ತಂತ್ರ ಇದು. ಹಲವು ಬಂಧಗಳಿಂದ, ಛಂದೋಬಂಧಗಳಿಂದ ನಿರ್ಮಿತವಾದ ಕಾವ್ಯ ಇದು. ಕವಿ ತನ್ನ ಪ್ರಾಣವನ್ನೇ ತೆತ್ತು ರಚಿಸಿದ, ಮನಸ್ಸಿನ ಎಲ್ಲಾ ಭಾವನೆಗಳನ್ನು ಒಟ್ಟಾಗಿ ಮೂಡುವಂತೆ ಮಾಡುವ ಗುಣ ಕವಿಗಿದೆ. **'ಗರುಡನಂತೆರಗಿ'** ಎಂಬ ಮಾತು ಬಹು ಸ್ವಾರಸ್ಯಕರವಾದುದು. ಹೇಗೆ ಗರುಡ ಆಕಾಶದಿಂದ ಭೂಮಿಗೆ ರಭಸದಿಂದ ಬರುವುದೋ ಹಾಗೆ ಕಾವ್ಯವೂ ಕೂಡ. ಮನಸ್ಸೆಂಬ ಗೂಡನ್ನು ಒಡೆದು ರಭಸವಾಗಿ ಬರುತ್ತದೆ. ಅದು ಭ್ರಮೆಯೊ! ಅಥವಾ ಮೈಮರೆಯುವಿಕೆಯೊ!, ವಿಷವೋ, ನಿದ್ದೆಯೋ; ಆಕರ್ಷಣೆಯೋ ಮರೆತವೋ, ಕನಸೋ, ಕಾಣೆ ಆದರೂ ಅದು ಹಾಲೋ ಹಾಲು. ಅದು ಶುದ್ಧ, ಪವಿತ್ರ ಮತ್ತು ಮನಸ್ಸಿಗೆ ಆನಂದವನ್ನು, ರಸಸ್ವಾದ ನೀಡುವಂತಹದ್ದೇ. ಕಾವ್ಯ ಎಂದು ಅದರ ಸ್ವರೂಪವನ್ನು ಈ ಕವನದಲ್ಲಿ ಬೇಂದ್ರೆ ವರ್ಣಿಸಿದ್ದಾರೆ.

ಇದೇ ಕವನದ ಉಳಿದ ಭಾಗದಲ್ಲಿ ಕವಿ ಮತ್ತು ವಿಮರ್ಶಕನನ್ನು ಕುರಿತು ಬೇಂದ್ರೆ ಹೇಳುತ್ತಾರೆ.

**ಎಲೆ ಹಾವೆ! ಹೊಟ್ಟೆ ಹೊಸೆಯುವ ಜಂತು! ನಿನಗೆ ಕಿವಿ**
**ಯಿಲ್ಲ, ನಾಲಿಗೆಯರಡು; ಹಲ್ಲೊಳಿದೆ ವಿಷವು; ನಿ**
**ನ್ನನ್ನ ಗಾಳಿಯು ನೀನು ಪಾತಾಳಕಿಳಿದರೂ**
**ಮತ್ತೆ ಕಾಡುವೆ; ರಸಿಕನೆನೆ ಚಂದ ತಲೆದೂಗಿ**
**ನಾಳೆ ಕಾರುವೆ ಗರಳ! ಬಯಸುತಿರು, ಬಯಸುತಿರು**
**ಕಂಡಿಲ್ಲವೇನೊ ಅಂಗೈಯ ಗರುಡನ ಗೆರೆಯ!**

ಇಲ್ಲಿ ಕವಿ ವಿಮರ್ಶಕನನ್ನು ಹಾವೆಂದು ಕರೆದಿದ್ದಾರೆ. ವಿಮರ್ಶಕನಾದವನು ತನ್ನ ಕಿವಿಗಳಿಂದೇನು ಕೇಳುವುದಿಲ್ಲ. ಎರಡು ಮಾತುಗಳನ್ನು ಒಂದೇ ಕಾಲಕ್ಕೆ ನುಡಿಯುತ್ತಾನೆ. ನಿನ್ನ ಹಲ್ಲೊಳಗೆ ವಿಷವಿದೆ. ನೀನು ನೇರ ಮಾತನ್ನು ನುಡಿಯುವುದಿಲ್ಲ. ಗಾಳಿ ಮಾತನ್ನು ಕೇಳುತ್ತೀಯಾ, ಪಾತಾಳಕ್ಕಿಳಿದರೂ ನೀನು ಕಾಡುತ್ತೀಯ. ಒಮ್ಮೆ ಕವಿಯ ಮುಂದೆ ಕಾವ್ಯ ಚೆನ್ನಾಗಿದೆ ಎಂದು ಮತ್ತೊಮ್ಮೆ ಕವಿಯ ಕಾವ್ಯ ಚೆನ್ನಾಗಿಲ್ಲವೆಂದು ನುಡಿವೆ. ಆದರೂ ವಿಮರ್ಶಕ ನೀ ಏನೇ ಪ್ರಯತ್ನ ಮಾಡಿದರೂ ನನ್ನ ಕಾವ್ಯವನ್ನು ಹುದುಗಿಡಲು ಸಾಧ್ಯವಿಲ್ಲ. ನನ್ನ ಅಂಗೈಯಲ್ಲಿ ಗರುಡನ ರೇಖೆಯನ್ನು ನೀನು ಕಂಡಿಲ್ಲವೇನು? ಎಂದು ವಿಮರ್ಶಕರಿಗೆ ಮರು ಪ್ರಶ್ನಿಸುವಂತೆ ಈ ಕವನ ಭಾಗದಲ್ಲಿ ಬೇಂದ್ರೆಯವರು ಹೇಳಿದ್ದಾರೆ. ಹೀಗೆ ಬೇಂದ್ರೆಯವರ ಕಾವ್ಯ ಸ್ವರೂಪ.

"ಜೀವನದಲ್ಲಿ ಸಂತೋಷದ್ದು ತುಂಬ ತೊಡಕಿನ ಪ್ರಶ್ನೆ; ಅದಿಲ್ಲದೆ ಪ್ರಾಣಸ್ಪಂದನವೇ ಅಡಗಿ ಹೋಗುತ್ತದೆ. ಸಂತೋಷವೇ ಬದುಕಿನ ಬೆಲೆ. ಇದರ ಗಳಿಕೆಗೆ ಅನೇಕ ಮೂಲಗಳಿವೆ. ಕಾವ್ಯ ಅವುಗಳಲ್ಲಿ ಒಂದು"[೨೯] ಪು.ತಿ.ನ.ರವರು ಬದುಕನ್ನು ಬಹಳ ಹತ್ತಿರವಾಗಿ ತಮ್ಮ ಕಾವ್ಯದ ಮೂಲಕ ನೋಡುವ ಪ್ರಯತ್ನವನ್ನು ಪಟ್ಟಿದ್ದಾರೆ.

"ರೀತಿಯಿಂದ ಕಿವಿಯನ್ನೊಲಿಸಿಕೊಳ್ಳಬೇಕು; ಅರ್ಥದಿಂದ ಮನಸ್ಸನ್ನು, ವಿಪುಲವ್ಯುತ್ಪತ್ತಿ ಜನ್ಯ ಸುವಿಚಾರತೆಯಿಂದ ಬುದ್ಧಿಯನ್ನು, ಭಾವಸಂಪತ್ತಿ ಮತ್ತು ಸಾಂಗತ್ಯಗಳಿಂದ ಅಹಂಕಾರವನ್ನು, ಹೀಗೆ ತನ್ನೈಶ್ವರ್ಯವನ್ನೆಲ್ಲ ಎರೆದು ತನತೆಯನ್ನು ಮಾತ್ರ ಉಳಿಸಿಕೊಂಡು ಪ್ರತಿಯೊಬ್ಬ ವ್ಯಕ್ತಿಯಲ್ಲೂ ಆತನ ಗೂಢತಮ ಹೃದಯಾವಕಾಶದಲ್ಲಿ ಮಲಗಿರುವ ಅನಂತ ಪುರುಷೋತ್ತಮನನ್ನು ಜಾಗರಿಸಲು ಸಮರ್ಥವಾದ ಶ್ರೀಮಂತ ಪದ ಬಂಧವೇ ಕವಿತೆ: ಮಿಕ್ಕವೆಲ್ಲ ಕವಿತಾ ಬಂಧುಗಳು"[೩೦] ಎಂದು ಹೇಳುವ ವಿಚಾರದಲ್ಲಿ ಕವಿತೆ ನೀಡಬೇಕಾದಂತಹ ಚಿತ್ತ ಸ್ಪರ್ಶವನ್ನು ಕುರಿತು ಪು.ತಿ.ನ. ಇಲ್ಲಿ ಹೇಳಿದ್ದಾರೆ.

ಪು.ತಿ.ನ.ರವರ ಅಹಲ್ಯೆ (ಗೀತನಾಟಕ) ಯಲ್ಲಿ ಬರುವ ಕವನದಲ್ಲಿ ಕವಿ, ಕಾವ್ಯ ಸ್ವರೂಪದ ಕುರಿತು ಹೇಳುತ್ತಾರೆ.

**ಈ ನೀಳ್ಗಬ್ಬದ ರಸ ತಾನೆಂಥದೊ**
**ರಸಿಕಜನಕೆ ತಪಸ್ವಿಯ ತರುವಂಥದೊ,**
**ಕೃತಿಕಾರನು ನಾನಿದನೆಂತರಿವೆಂ**
**ಆದೊಡೆ ನಿನ್ನಾಮೋದದಿ ಮರೆವೆಂ**
**ಈ ಚಿರ ಸಂದೇಹವ ತುಸಕಾಲ,**

ಈ ದೊಡ್ಡ ಕಾವ್ಯದ ರಸಸ್ವರೂಪ ಎಂತಹುದೋ ರಸಿಕರಿಗೆ ಇದು ತೃಪ್ತಿಯನ್ನು, ಸಂತೋಷವನ್ನು ತರುವುದೋ ಇಲ್ಲವೋ ಎಂಬ ಅಂಜಿಕೆಯೂ ಇದೆ. ಕೃತಿಕಾರನಾಗಿ ನಾನಿದನ್ನು ಅರಿಯುವುದು ಎಂತು ಎಂದು ಕವಿ ತನ್ನ ಮನಸ್ಸಿನೊಂದಿಗೆ ಪ್ರಶ್ನಿಸಿಕೊಳ್ಳುವ ಬಗೆ ಇಲ್ಲಿದೆ. ಆದರೂ ನನ್ನ ಈ ಸಂದೇಹವನ್ನು ತುಸುಕಾಲ ಮರೆತು ಸಂತೋಷಗೊಳ್ಳುವೆ. ಎಂದು ಕವಿ ಮತ್ತೆ ಪುಳಕಿತಗೊಳ್ಳುವುದು ಪು.ತಿ.ನ.ಕಾವ್ಯ ಸ್ವರೂಪದ ಒಂದು ಬಗೆ.

**ಕೃತಕೃತಿಯಾಯಿತು ಎನುವೆನು ಬಾಳ**
**ಈ ಕಬ್ಬದ ಕೆಲಹಾಡನು ಹಾಡಿ**
**ಮುದವಾಂತೆನು ರಸದರ್ಶನ ಮಾಡಿ**

**ನುಡಿಗಳ ನಲ್ನಡೆ ಭಾವೋನ್ಮೇಷ**

**ಇವಕಾಯಿತು ಕವಿಜನ ಸಂತೋಷ**

ರಸಿಕರಿಗೆ ಈ ನಾದಮಯ ಹಾಡಿನಿಂದ ರಸದರ್ಶನ ಮಾಡಿಸಿದ್ದರಿಂದ ನನ್ನ ಬಾಳು ಸಾರ್ಥಕವಾಯಿತೆಂದು ಕವಿ ಹೇಳುತ್ತಾರೆ. ಭಾವನೆಗಳ ಅರಳುವಿಕೆಗೆ ಅನುಗುಣವಾಗಿ ಬಳಸುವ ಪದಗಳ ಬಳಕೆಯಿಂದಾಗಿ ಕವಿಜನಕ್ಕೆ ಆಗುವ ಸಂತೋಷದ ಕುರಿತು ಈ ಪದ್ಯದಲ್ಲಿ ಹೇಳುತ್ತಾರೆ. ಅಂದರೆ ಈ ಕಾವ್ಯದ ಒಳ ಅರ್ಥವೆಂದರೆ ಒಂದು ಕಾವ್ಯವು ಕವಿ ಮತ್ತು ಸಹೃದಯರಿಗೆ ನೀಡಬೇಕಾದ ರಸದರ್ಶನದ ಕುರಿತು ಕಾವ್ಯ ಹೊಂದಿರಬೇಕಾದ ಗುಣವನ್ನು ಹೇಳುತ್ತಾರೆ.

ಪು.ತಿ.ನ.ಹೇಳುವ ಪ್ರಕಾರ ಒಂದು ಕಾವ್ಯವು ರೂಪುಗೊಳ್ಳುವಾಗ ವ್ಯಕ್ತಿ ಮನಸ್ಸಿಗೂ ಕವಿ ಮನಸ್ಸಿಗೂ ನಡುವೆ ಕೆಲವು ವಾದ–ವಿವಾದಗಳು, ಚರ್ಚೆಗಳು, ಚಿಂತನೆಗಳು, ನಡೆಯುತ್ತದೆ. ಇದಕ್ಕೆ ಇದೇ ಕವನದ ಈ ಪದ್ಯದ ಭಾಗವನ್ನು ಗಮನಿಸಬಹುದು.

**ಬುದ್ಧಿಯ ಪೊರೆಯೊಳು ಮರೆಸುವೆ ಏಕೆ**

**ನನ್ನ ವಿಕಾಸವ ಭಾವಪ್ರಕಾಶವ?**

**ಸರಿ ತಪ್ಪೆನ್ನುತ ಮಾಸವ ಮಾಸವ**

ಇದು ಕವಿ ತನ್ನ ಮನಸ್ಸಿನೊಂದಿಗೆ ಚರ್ಚೆ ಮಾಡುವ ಬಗೆ. ಬುದ್ಧಿಯ ಹೊರೆಯಲ್ಲಿ ಕಾವ್ಯದ ವಿಕಾಸವನ್ನು ಮತ್ತು ಭಾವನೆಗಳನ್ನು ಏಕೆ ಚಿಂತನೆಗೆ ಒಳಪಡಿಸುವೆ. ಅದಕ್ಕಾಗಿಯೇ ಏಕೆ ಮಾಸವನ್ನೇ ಕಳೆಯುವೆ. ತರ್ಕಿಸದೆ, ಚಿಂತಿಸದೆ, ಆ ಕಾವ್ಯದ ವಿಕಾಸವನ್ನು ತಡೆಯದೆ ಬರೆ' ಎಂದು ಕಾವ್ಯ ಪ್ರಚೋಚನೆಗೆ ಈ ಕವಿ ಮನಸ್ಸು ಮುಂದಾದರೆ ಅದಕ್ಕೆ ಉತ್ತರವಾಗಿ ಕವಿ ಹೀಗೆ ಹೇಳುತ್ತಾರೆ. ಯಾವುದೇ ಕಾವ್ಯವನ್ನು ಬರೆಯುವಾಗ ಅದನ್ನು ತರ್ಕಿಸಿ, ಚಿಂತನೆಗೆ ಒಳಪಡಿಸಿ ರಚಿಸಬೇಕೆಂದು. ಅದನ್ನು ಈ ಪದ್ಯದ ಸಾಲುಗಳಲ್ಲಿ ಗಮನಿಸಬಹುದು.

**ನಾನೆಂದನು "ಕವಿ, ಇದು ಅನಿವಾರ್ಯ**

**ಎನ್ನದು ತತ್ತ್ವಾನ್ವೇಷಣ ಕಾರ್ಯ;**

**ಏನೇತಕೆ ಎಂಬುದೆ ಹವ್ಯಾಸ;**

**ಇದನುಳಿದಾಗದು ಪದವಿನ್ಯಾಸ;**

ಕವಿ ಮನಸ್ಸಿನ ಪ್ರಕಾರ ಕಾವ್ಯ ಹುಟ್ಟುವುದು ಪ್ರೇರಣೆಯಿಂದ ಎಂದು. ಆದರೆ ಕವಿ ಹೇಳುವುದೇನೆಂದರೆ ಆ ಕಾವ್ಯ ಹುಟ್ಟಲು ತತ್ವ, ಕಾರಣ, ಅನಿವಾರ್ಯ ಎಂದು. ಕಾವ್ಯ ರಚಿಸಲು ಕವಿಗೆ ಒಬ್ಬ ವಿಮರ್ಶಕನ ಮನಸ್ಸಿರಬೇಕು. ತತ್ವಾನ್ವೇಷಣೆ ಮಾಡುವ ಬಗೆ ಆತನಿಗೆ ತಿಳಿದಿರಬೇಕು. ಏನು, ಏತಕೆ ಎಂಬ

ಚಿಂತನೆಗಳು, ತರ್ಕಗಳಿಗೆ ಆತ ತೊಡಗಬೇಕು. ಆಗ ಮಾತ್ರ ಕಾವ್ಯ ರೂಪ ತಳೆಯುತ್ತದೆ. ಹೀಗೆ ಪು.ತಿ.ನ.ರವರು ಅಭಿಪ್ರಾಯ ಪಡುತ್ತಾರೆ.

ಪು.ತಿ.ನ.ರವರು ಕವಿ ಮತ್ತು ಕವಿ ಮನಸ್ಸಿಗೂ ಇರುವ ಅವಿನಾಭಾವ ಸಂಬಂಧವನ್ನು ಕುರಿತು ಹೇಳುತ್ತಾರೆ. ಉದಾಹರಣೆಗೆ ಈ ಪದ್ಯ ಭಾಗದಲ್ಲಿ ನೋಡಬಹುದು.

**ಎಂತು ಕಂಪು ಬಿಡದಿಹುದೋ ದಳವ**

**ಪಂಕ ದೊಳೆಂತುಟಿತೊ ಪಂಕೇಜ**

**ಅಂತೆಯೆ ನಿನಗೆನ್ನಯ ಮನ ಸಹಜ**

ಹೂವಿನ ದಳ ಕಂಪನ್ನು ಬಿಡಲು ಹೇಗೆ ಸಾಧ್ಯವಿಲ್ಲವೋ, ಕೆಸರನ್ನು ಬಿಟ್ಟು ಕಮಲ ಹುಟ್ಟಲು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ನಿನ್ನ ಮತ್ತು ನನ್ನ ಸಹಜ ಸ್ಥಿತಿ. ಅಂದರೆ ಇಲ್ಲಿ ಪಂಕ ಎಂದರೆ ಕವಿ ಮನಸ್ಸು, ಪಂಕೇಜ ಎಂದರೆ ಕಾವ್ಯ. ಇವುಗಳಿಗಿರುವ ಸಂಬಂಧವನ್ನು ಕುರಿತು ಹೇಳಿದ್ದಾರೆ. ನಮ್ಮ ದೇಹದೊಳಗೆ ದೇವಸ್ವರೂಪ ಹೇಗೋ ಹಾಗೆ ಕಾವ್ಯದಲ್ಲಿ ರಸಸೂರ್ಯನ ಸಂಬಂಧ ಎಂದು ಹೇಳುತ್ತಾರೆ. ಹೀಗೆ ಕಾವ್ಯದಲ್ಲಿ ಪರಸ್ಪರ ರಸ ಮತ್ತು ಅದರಿಂದಾಗುವ ಆನಂದದ ಕುರಿತ ಸಂಬಂಧವನ್ನೂ ಸಹ ಕವಿ ಸೊಗಸಾಗಿ ಹೇಳಿದ್ದಾರೆ.

**ನಮಗೊಪ್ಪಿತು ಪಂಗ್ವಂಧರ ನೀತಿ**

**ಒಯ್ಯೆನ್ನೆನು ನಿನಗೊಪ್ಪುವ ರೀತಿ.**

ಕಾವ್ಯ ಹೊರಹೊಮ್ಮಬೇಕಾದರೆ ಕವಿಗೆ ಆತನ ಕವಿ ಮನಸ್ಸು ಕೂಡ ಬಹುಮುಖ್ಯ. ಕವಿ ಮತ್ತು ಕವಿ ಮನಸ್ಸಿನ ಸಂಬಂಧ ಎಂತಹುದೆಂದರೆ ಪಂಗ್ವ-ಅಂಧರಂತೆ. ಅಂದರೆ ಕುಂಟ ಮತ್ತು ಕುರುಡನ ಹಾಗೆ. ಕುಂಟ ದಾರಿ ತೋರಿಸುವವನಾದರೆ ಅದೇ ದಾರಿ ಹಿಡಿದು ಸಾಗುವವನು ಕುರುಡ. ಒಬ್ಬನಿಗೆ ಮತ್ತೊಬ್ಬನು ಆಧಾರವಾಗಿ, ಜೊತೆ-ಜೊತೆಯಾಗಿ ಸಾಗಿದರೆ ಹೇಗೆ ಜೀವನ ಸಾಗುವುದೋ ಹಾಗೆ ಕವಿ-ಕವಿಮನಸ್ಸು ಕೂಡ.

ಈ ಸಂದರ್ಭದಲ್ಲಿ ಇನ್ನೊಂದು ಮಾತು ನೆನಪಿಗೆ ಬರುತ್ತದೆ. ಅಡಿಗರು ಇದೇ ಭಾವವನ್ನು ತದ್ವಿರುದ್ಧ ದಿಕ್ಕಿನಲ್ಲಿ ಬಳಸಿದ್ದಾರೆ.

**"ಕುಂಟನ ಮೇಲೆ ಕುರುಡ ಕೂತಿದ್ದಾನೆ,**

**ದಾರಿ ಸಾಗುವುದೆಂತೂ ನೋಡಬೇಕು".**

ಅಂದರೆ ಇದು ದೇಶದ ಅಸ್ವಸ್ಥ ಸ್ಥಿತಿಯನ್ನು ಕುರಿತು ಕವಿ ವ್ಯಂಗ್ಯವಾಗಿ ನುಡಿದಿರುವುದನ್ನು ಇಲ್ಲಿ ಗಮನಿಸಬಹುದು.

ಭಾಷೆಯ ಬಳಕೆ ಹೇಗೆ ಮಾಡಬೇಕು ಮತ್ತು ಅದರಿಂದಾಗುವ ಕಾವ್ಯ ಪ್ರಯೋಜನದ ಕುರಿತು ಪು.ತಿ.ನ. ಹೇಳುತ್ತಾರೆ. ಏಕೆಂದರೆ ಅವರ ಭಾಷೆಯು ಕ್ಲಿಷ್ಟವೇ ಆದರೂ ವಾಸ್ತವಿಕತೆಯ, ಪ್ರಾಪಂಚಿಕ ಮರ್ಮವನ್ನು ಬಿಂಬಿಸುವ, ರಸಭರಿತವಾದ ಪದಬಂಧವೇ ಅವರ ಕಾವ್ಯದ ಗುಣ, ಸ್ವರೂಪಗಳಲ್ಲಿ ಒಂದು. ಸುಪ್ತ ಮನಸ್ಥಿತಿಯ ತಳಮಳವನ್ನು ಜಾಗರಗೊಳಿಸಲಿಕ್ಕೆಂದೇ ಕವಿ ಶ್ರೀಮಂತ ಪದಬಂಧವೇ ಇದೆ. ಎನ್ನುತ್ತಾರೆ ಪು.ತಿ.ನ. ಇದೇ ಅವರ ಕಾವ್ಯ ವಿಶೇಷವೂ ಕೂಡ. ಇದನ್ನು ಪದ್ಯದ ಸಾಲುಗಳಲ್ಲಿ ಗಮನಿಸಬಹುದು.

**ಮಾಧವನ ಬೆಂಬತ್ತಿದೀ ಲೋಕ ಸಂಚಾರಿ**
**ಜೀವನದ ಪರಿಹಾರಕಾಸರೆಯ ನರಸುತ್ತ**
**ಈ ಮನದೊಳೀ ಮರನ ಕಂಡೆರಗಿ, ತುಸು ತಂಗಿ**
**ಆದ ಸಂತಸಕಾಗಿ ಹಾಡಿ ರೆಕ್ಕೆಯ ಬಿಚ್ಚಿ.**

ಕವಿ ಈ ಪದ್ಯದಲ್ಲಿ ಒಂದು ಹಕ್ಕಿಯನ್ನು ಪ್ರತಿಮೆಯಾಗಿ ಬಳಸಿಕೊಂಡಿದ್ದಾರೆ. ಮುಖ್ಯವಾಗಿ ಕವಿ ಇಲ್ಲಿ ಹೇಳ ಹೊರಟಿರುವ ಭಾವವೆಂದರೆ ಮನುಷ್ಯನ ಬದುಕಿನಲ್ಲಿ ಹಲವಾರು ದುಃಖ ದುಮ್ಮಾನಗಳಿಗೆ ಪರಿಹಾರಗಳನ್ನು, ಆಸರೆಗಳನ್ನು ಹುಡುಕುತ್ತಾ ಹಕ್ಕಿಯಂತೆ ಸಂಚರಿಸುತ್ತಿರುತ್ತಾನೆ. ಒಂದು ಕಡೆಯಿಂದ ಮತ್ತೊಂದು ಕಡೆಗೆ ತಾನು ಅರಸುತ್ತಿರುವ ಆಸರೆಯು ಆತನಿಗೆ ದೊರೆತರೆ ಆ ತುಸು ಆಶ್ರಯದಲ್ಲಿಯೇ ಸಂತೋಷವನ್ನು ಕಾಣುತ್ತಾನೆ. ಬದುಕಿನ ನೈಜತೆಯನ್ನು ಶಬ್ದಗಳಲ್ಲಿ ಬಂಧಿಸಿತೋರಿಸಿದ್ದಾರೆ.

ಪು.ತಿ.ನ.ರವರು ತಮ್ಮ ಅನುಭವಕ್ಕೆ ಬಂದಿರುವ ವಸ್ತುವಿಗೆ ಒಂದು ಪ್ರಾಪಂಚಿಕ ನೆಲೆಯನ್ನು ದೊರಕಿಸಿ ಕೊಡುತ್ತಾರೆ. ಆದರೆ ಆ ನೆಲೆಯನ್ನಷ್ಟೇ ನೀಡಿ ಅದರ ರಸಸ್ವಾದವನ್ನು ಸಹೃದಯನಿಗೇ ಬಿಟ್ಟುಕೊಡುತ್ತಾರೆ. ಏಕೆಂದರೆ ಅವರೇ ಹೇಳುವಂತೆ "ತನ್ನನುಭವ ಸಾಮಗ್ರಿಯನ್ನು ತನ್ನ ಭಾವನ ಸ್ಫುರಣೆಗೆ ತಕ್ಕಂತೆ ತಕ್ಕ ತಕ್ಕ ಸಹಾಯ ಸಲಕರಣೆಗಳಿಂದ ತಿರುಗಿ ಬಹಿರಂಗ ಪಡಿಸುವ ಸೃಷ್ಟಿಕರ್ಮವೇ ಕಲೆ"[೩೧] ಇದರಿಂದ ದೊರಕುವ ಪ್ರಾಪಂಚಿಕ ಜ್ಞಾನ, ನೀತಿಭೋದೆ, ಜ್ಞಾನ, ತಾತ್ವಿಕ ಚಿಂತನೆ ಇವುಗಳು ಸುಪ್ತವಾಗಿದ್ದು ಕೇವಲ ಅದರ ಕಲಾ ಪ್ರತಿಭೆ ಮತ್ತು ಔಚಿತ್ಯವಾಗಿ ಬಳಸುವ ಧ್ವನಿ ಅಲ್ಲಡಗಿರುತ್ತದೆ. ಇದು ಪು.ತಿ.ನ.ರವರ ಕಾವ್ಯಸ್ವರೂಪದ ಇನ್ನೊಂದು ಮುಖ.

ಕವಿಯನ್ನು, ಆತನ ಕಾವ್ಯ ಪ್ರೌಢಮೆಯನ್ನು ಕುರಿತು ಪು.ತಿ.ನ ತಮ್ಮ 'ಕತೆಗಾರ' ಎಂಬ ಕವನದಲ್ಲಿ ಹೀಗೆ ಹೇಳುತ್ತಾರೆ.

**ವ್ಯಥೆಗಳ ಕಳೆಯುವ ಕತೆಗಾರ**
**ನಿನ್ನ ಕಲೆಗೆ ಯಾವುದು ಭಾರ?**

**ಆವುದು ವಿಸ್ತರ ಯಾವುದು ದುಸ್ತರ**

**ನಿನಗೆಲೆ ಹರ್ಷದ ಹರಿಕಾರ?**

ಕವಿಯಾದವನು ತನ್ನ ಕಾವ್ಯ ಕಲೆಯ ಮೂಲಕ ಒಂದು ಜಡವಸ್ತುವಿನಲ್ಲೂ ಜೀವ ಚೈತನ್ಯವನ್ನು ತುಂಬುವ ಕೌಶಲ ಕವಿಯಲ್ಲಿದೆ. ಆತನ ಕಲೆಗೆ ಯಾವುದೂ ಭಾರವಲ್ಲ. ಆತನೇ ಹರ್ಷದ ಹರಿಕಾರ ಎಂದು ಕಲೆಗಾರನ ಕಲೆಯನ್ನು ಕುರಿತು ಪ್ರಶಂಸಿದ್ದಾರೆ.

**ಕಪಿ ಹಾರಿತು ಹೆಗ್ಗಡಲನು ಎಂಬೆ**

**ಕಡಲನೆ ಕಡೆವರು ಬೆಟ್ಟದೊಳೆಂಬೆ**

**ನಿನ್ನೂಹೆಯ ಹೇರಾಳವ ತುಂಬೆ**

**ಸೃಷ್ಟಿಕರ್ತನಿಗೂ ಅರಿದೆಂಬೆ.**

ಕಲೆಗಾರನಾದವನು ತನ್ನ ಕಾವ್ಯ ಕಲೆಯಲ್ಲಿ ಅಸಂಭಾವ್ಯತೆಯನ್ನು ತಂದು ಕಾವ್ಯಕ್ಕೆ ಒಂದು ರಮ್ಯತೆಯನ್ನು ತಂದುಕೊಡುತ್ತಾನೆ. ಸೃಷ್ಟಿಕರ್ತನಿಗೂ ಮೀರಿದ ಊಹೆ ನಿನ್ನಲಿದೆ ಎನ್ನುತ್ತಾರೆ ಪು.ತಿ.ನ.

**ಅರಿವರಾರು ನಿನ್ನೈಂದ್ರಜಾಲ!**

ಕವಿ ಬಳಸುವ ಈ ಎಲ್ಲಾ ತಂತ್ರಗಳು ಸಹೃದಯರಿಗೂ ಒಂದು ರಸಸ್ವಾದವನ್ನು, ಮುದವನ್ನು ನೀಡುತ್ತವೆ. ಆದ್ದರಿಂದ ನಿನ್ನಂತಹ ಕಲೆಗಾರನ ಇಂದ್ರಜಾಲವನ್ನು ಬಲ್ಲವರಾರು ಎಂದು ಹೊಗಳಿದ್ದಾರೆ. ಇದು ಒಟ್ಟಾರೆಯಾಗಿ 'ಕಲೆಗಾರ'ನಾದವನ ಚಾಣಾಕ್ಷತನವನ್ನು ಕೊಂಡಾಡುವ ಬಗೆ.

ಪು.ತಿ.ನ. ರವರ ಪ್ರಕಾರ ಕಾವ್ಯದಲ್ಲಿ ಒಟ್ಟಾಗಿ ಎಲ್ಲಾ ಬಂಧವನ್ನು ಅಂದರೆ ರಸವನ್ನು, ಭಾವವನ್ನು, ಪದಸಂಪತ್ತನ್ನು, ರೀತಿಯನ್ನು, ಚಿಂತನೆಯ ಪ್ರಾಗಲ್ಭ್ಯವನ್ನು ಸೇರಿಸುವುದು ಬಹು ಕಷ್ಟದ ಕೆಲಸ ಅಂತಹ ಕಾರ್ಯ ನಡೆಯುವುದು ಸಹ ಬಹು ಕಠಿಣ. ಅಂತಹ ಸಂದರ್ಭದಲ್ಲಿ ಗಯಟೆ, ಶೇಕ್ಸ್‌ಪಿಯರ್, ಕುಮಾರವ್ಯಾಸರಂತಹ ದಿಗ್ಗಜರನ್ನು ಅವರು ಇಲ್ಲಿ ನೆನೆಯುತ್ತಾರೆ.

ಕುಮಾರವ್ಯಾಸನ ಮಾತು ಅವರು ಇಲ್ಲಿ ಔಚಿತ್ಯವಾಗಿ ಬಳಸಿದ್ದಾರೆ. "ವೀರ ನಾರಾಯಣನೆ ಕವಿ ಲಿಪಿಕಾರ ಕುಮಾರವ್ಯಾಸ; ಪ್ರಜ್ಞೆಯ ಅರಿವಿನ ಕುರಿತು ಪು.ತಿ.ನ. ವಿವರವಾಗಿ ಚರ್ಚಿಸುತ್ತಾರೆ. ಹಾಗೆಯೇ ತಮ್ಮ ಕಾವ್ಯ ಸ್ವರೂಪದಲ್ಲಿ ಅವರು 'ಪ್ರಜ್ಞೆ'ಯನ್ನು ಕುರಿತು ಮಾತನಾಡುತ್ತಾರೆ.

ಒಟ್ಟಾರೆಯಾಗಿ ಹೇಳುವುದಾದರೆ ಕಾವ್ಯ ಹೊಂದಿರಬೇಕಾದ ರಸಸೋಪಾನ ಮತ್ತು ಅದರ ಒಳಮುದ್ದು ಮತ್ತು ಹೊರಮುದ್ದನ್ನು ಕಾವ್ಯ ಜಿಜ್ಞಾಸೆಯನ್ನು ಕುರಿತ ಎಲ್ಲಾ ಅಂಶಗಳನ್ನು ಪು.ತಿ.ನ.ರವರ ಕಾವ್ಯ ಸ್ವರೂಪದಲ್ಲಿ ಕಾಣಬಹುದು.

**ಇ) ಕಾವ್ಯದ ವಸ್ತು:-**

ಕಾವ್ಯವು ಸಹೃದಯನ ಮನಸ್ಸನ್ನು ಸೂರೆಗೊಳ್ಳಬೇಕಾದರೆ ಅದರಲ್ಲಿಯ ವಸ್ತುವು ಬಹುಮುಖ್ಯ ಎನಿಸುತ್ತದೆ. ಕಾವ್ಯದ ವಸ್ತುವು ಹೇಗಿರಬೇಕು. ವಸ್ತುವಿನ ಮಹತ್ವವನ್ನು ಕುರಿತಾದ ಚರ್ಚೆಯನ್ನು ಪು.ತಿ.ನ.ತಮ್ಮ ಕಾವ್ಯಮೀಮಾಂಸೆಯ ಚರ್ಚೆಯಲ್ಲಿ ತರುತ್ತಾರೆ. "ಕಾವ್ಯದ ಜೀವಾಳ ವಸ್ತುವಿನಲ್ಲಿದೆಯೇ, ಸಂವಿಧಾನದಲ್ಲಿದೆಯೇ, ರೂಪದಲ್ಲಿದೆಯೇ, ಶೈಲಿಯಲ್ಲಿದೆಯೇ, ಪದಪ್ರಯೋಗದಲ್ಲಿದೆಯೇ ಅಥವಾ ಇವೆಲ್ಲವುಗಳ ಉಚಿತ ಸಮವಾಯದಲ್ಲಿದೆಯೇ ಈ ರೀತಿ ಜಿಜ್ಞಾಸೆಯೇಳುವುದು ಸಹಜ"[೩೨] ಎಂದು ಪು.ತಿ.ನ ಕಾವ್ಯ ಹೊಂದಿರಬೇಕಾದ ವಸ್ತುವಿನ ಕುರಿತಾದ ಜಿಜ್ಞಾಸೆಯನ್ನು ಇಲ್ಲಿ ನಡೆಸುತ್ತಾರೆ.

ಕವಿಯು ತಾನು ಕಾಣುವ ಪ್ರಪಂಚ, ಪರಿಸರ ಹಾಗೂ ಜೀವಕಾಯದ ತುಡಿತಗಳನ್ನೇ ವಸ್ತುವನ್ನಾಗಿ ಬೆಳೆಸಿಕೊಳ್ಳಬಲ್ಲ. ಏಕೆಂದರೆ ಭವದ ಸೆಳೆತವಿಲ್ಲದೆ ಕಾವ್ಯ ಹುಟ್ಟಲಾರದು ಎನ್ನುತ್ತಾರೆ ಪು.ತಿ.ನ. ಆ ಸೆಳೆತಗಳಿಂದ ಬಿಡುಗಡೆಯನ್ನು ಹೊಂದಿ ತಾನು ಪಡೆಯುವ ಪ್ರಜ್ಞೆಯಿಂದಲೇ ವಸ್ತುವನ್ನು ಸೃಷ್ಟಿಸಿ ಕವಿಯಾದವನು ಕಾವ್ಯ ರಚಿಸುತ್ತಾನೆ. ಪು.ತಿ.ನ. ಹೇಳುವಂತೆ "ಕಾವ್ಯದ ಉತ್ಪತ್ತಿಗೆ ಕವಿಗೆ ಹುಟ್ಟಿನಿಂದಲೇ ಪ್ರಾಪ್ತವಾದ ಎರಡು ಗುಣಗಳಿರಬೇಕೆಂದು ತೋರುತ್ತದೆ. ಭವದ ತೀವ್ರ ಸಂವೇದನಾ ರೂಪವಾದ ಪ್ರಜ್ಞೆ, ಇದನ್ನು ಬೇಕಾದರೆ ಭವನಿಮಜ್ಜನ ಚಾತುರ್ಯ ಎಂದು ಕರೆಯಬಹುದು"[೩೩] ಆ ಸಂವೇದನೆಗಳಿಂದಲೇ ದೊರಕಬಹುದಾದ ಕಾವ್ಯವಸ್ತುವನ್ನು ಆತ ಸೃಷ್ಟಿಸಬಲ್ಲ.

ಕಾವ್ಯೋದಯಗೊಳ್ಳಲು ಧರ್ಮ, ಅರ್ಥ, ಕಾಮ ಸಮೃದ್ಧವಾದ ನೆಲೆಗಳಿಂದ ಒಂದು ಪ್ರಚೋದನಾತ್ಮಕವಾದ ಮತ್ತು ಪ್ರಚಾರಾತ್ಮಕವಾದ ಸಾಹಿತ್ಯ ದೊರಕಬಲ್ಲದೇ ಹೊರತು ಅದರಿಂದ 'ಭವ' ಸೆಳೆತಗಳಿಂದ ಮುಕ್ತಿ ದೊರೆಯಲಾರದು.

ಧರ್ಮ, ಅರ್ಥ, ಕಾಮಗಳಿಂದ ಭವದ ಸೆಳೆತದಿಂದ, ಸ್ವಾರ್ಥದಿಂದ, ವಿಮುಕ್ತರಾಗಿ ಸತ್ವವೃದ್ಧಿಯಾಗಿ ಜೀವನ ಸಮೃದ್ಧವಾದ ಮೇಲೆ ಕವಿ ಕಾವ್ಯೋದಯಕ್ಕೆ ಒಂದು ಚೇತನ ಲಭಿಸಿದಂತೆ. ಆದ್ದರಿಂದ ಇಂಥ ಸತ್ವಭರಿತವಾದ ಬದುಕು ಹಾಗೂ ಭವದ ಸೆಳೆತದಿಂದ ಮುಕ್ತಿಯನ್ನು ಪಡೆಯಲು ಕಾವ್ಯ ಯಾವ 'ವಸ್ತು'ವನ್ನಾದರೂ ಬಳಸಬಹುದು. ಇದನ್ನು ಪು.ತಿ.ನ ಹೀಗೆ ವಿವರಿಸುತ್ತಾರೆ. "ಕಾವ್ಯದ ಪ್ರಮುಖ ಗುಣ ಭವೋದ್ವೇಗ ಪ್ರಶಮನವಾದುದರಿಂದ ಅದರ ವಸ್ತುವೆಂಥದಾದರೂ ಅದಕ್ಕೆ ಅಶ್ಲೀಲತೆಯ ಸೋಂಕಿಲ್ಲ; ಸಹೃದಯರ ಮನಸ್ಸನ್ನು ಎಲ್ಲ ತೊಡಕಿನಿಂದಲೂ ಬಿಡಿಸಿ ಬಿಡುಗಡೆಯಲ್ಲಿ ನೆಲೆಗೊಳಿಸುವುದರಲ್ಲಿ ಸತ್ಕಾವ್ಯವು ತನ್ನ ಸಾರ್ಥಕ್ಯವನ್ನು ಪಡೆಯುತ್ತದೆಯಾದ್ದರಿಂದ."[೩೪] ಆದ್ದರಿಂದ ಮನುಷ್ಯನ ಬದುಕನ್ನು ಸಾರ್ಥಕಗೊಳಿಸುವಂತಹ ಕಾವ್ಯ ಯಾವುದೇ ವಸ್ತುವನ್ನು ಪಡೆಯಬಹುದು. ಅದಕ್ಕೆ ಇಂಥಹದ್ದೇ ವಸ್ತುವಿನ ಅವಶ್ಯಕತೆಯನ್ನು ಕಾವ್ಯದ ಬಂಧಕ್ಕೆ ಒಗ್ಗಿಸಲು ಪು.ತಿ.ನ ಒಪ್ಪುವುದಿಲ್ಲ.

ಆತ್ಮಶುದ್ಧಿಯನ್ನು, ದರ್ಶನಶುದ್ಧಿಯನ್ನು ಹಾಗೂ ಭವದ ಜ್ಞಾನವನ್ನು ನೀಡಬಲ್ಲಂತಹ ಕಾವ್ಯ ಪಡೆಯುವ ಗುಣಗಳ ಮೇಲೆ ಅದರ ವಸ್ತುವು ನಿರ್ಧಾರವಾಗುತ್ತದೆ” ಅದರಿಂದ ವಸ್ತುವಿನಿಂದ ಕವಿತ್ವಕ್ಕೆ ಉನ್ನತಿಯಾಗಲಿ, ಅವನತಿಯಾಗಲಿ ಲಭಿಸದು. ಆ ವಸ್ತುವಿನ ವಿಷಯದಲ್ಲಿ ಕವಿಯ ಮನಸ್ಸು ನಿಲ್ಲುವ ನೆಲೆಯ ಬೆಲೆಯಿಂದ ಆ ಕಾವ್ಯಕ್ಕೆ ಬೆಲೆ”[೩೫] ಎಂಬ ಮಾತುಗಳು ಕಾವ್ಯದ ವಸ್ತುಗಳ ಚರ್ಚೆಗೆ ತೀರಾ ಹತ್ತಿರವೆನಿಸುತ್ತದೆ. ಕವಿಯು ಭವಜಾಗರಸ್ಥಿತಿಯಲ್ಲಿ ತಾನು ಕಂಡು ಅನುಭವಿಸಿದ ಅನುಭವಗಳಿಂದ ತನ್ನನ್ನು ಬೇರ್ಪಡಿಸಿ ಸಹೃದಯರಿಗಾಗಿ ಆತನಲ್ಲಿ ಆದ ಭಾಷೆಯ ಮೂಲಕ ವರ್ಣಿಸುವ ಶೈಲಿಯಲ್ಲಿ ಅದರ ಬೆಲೆ (ತಿಳಿಯುತ್ತದೆ)ವ್ಯಕ್ತಗೊಳ್ಳುತ್ತದೆ.

ವಸ್ತುವಿನಿಂದ ಕಾವ್ಯಕ್ಕೆ ಒಂದು ಸ್ಫೂರ್ತಿ ದೊರೆಯುತ್ತದೆ. ಅದರಿಂದಲೇ ಕಾವ್ಯಕ್ಕೆ ಪ್ರಚೋದನೆ ಮತ್ತು ಪ್ರೇರಣೆ. ಆ ವಸ್ತುವಿನಿಂದಲೇ ಕಾವ್ಯಕ್ಕೆ ಬೆಲೆ ಎಂಬ ತಪ್ಪು ಕಲ್ಪನೆಗಳನ್ನು ಪು.ತಿ.ನ. ಸರಿಪಡಿಸುವ ಉದ್ದೇಶವನ್ನು, ಮನೋಭಾವವನ್ನು ತಾಳಿದ್ದಾರೆ. ಏಕೆಂದರೆ ಅವರ ಪ್ರಕಾರ ಕಾವ್ಯವನ್ನು ಉನ್ನತಮಟ್ಟಕ್ಕೇರಿಸುವುದು ಆ ಕಾವ್ಯದ ವಸ್ತುವಲ್ಲ, ಬದಲಿಗೆ, ಆ ಕಾವ್ಯ ಕೌಶಲ ಮತ್ತು ಜಾಣ್ಮೆಯೇ ಇದಕ್ಕೆ ಕಾರಣ ಎಂಬುದೇ ಅವರ ನಿಲುವು.

ಕಾವ್ಯದ ಅಭಿವ್ಯಕ್ತಿಯ ಸ್ವರೂಪದಿಂದಲೇ ಅದರ ವಸ್ತುವು ಪ್ರಮುಖವೆನಿಸುತ್ತದೆ. ಕಾವ್ಯದಿಂದ ಪಡೆಯುವ ಆನಂದ ಮತ್ತು ರಸಜಾಗರಸ್ಥಿತಿಯನ್ನು ನೆಲೆಗೊಳಿಸುವ ಪ್ರಕ್ರಿಯೆಯಿಂದಲೇ ವಸ್ತುವಿಗೆ ಬೆಲೆ ಎನ್ನುತ್ತಾರೆ ಪು.ತಿ.ನ. ಕವಿಗೆ ತನ್ನ ಕಾವ್ಯ ರಚನಾ ವಿಧಾನಗಳಲ್ಲಿ ಬಹುಮುಖ್ಯವಾದ ಗುಣಗಳಿರಬೇಕು. ಅವುಗಳೆಂದರೆ ವಿಪುಲಾನುಭವ, ಅನೇಕ ಶಾಸ್ತ್ರಗಳ ಪರಿಚಯ ಲೋಕಜ್ಞಾನ ಮತ್ತು ಸಂವೇದನಾತೀವ್ರತೆ. ಇವುಗಳಿಂದ ಪಡೆದ ಜ್ಞಾನದಿಂದಲೇ ಕವಿ ತನ್ನ ಕಾವ್ಯಕ್ಕೆ ವಸ್ತುವನ್ನು ದೊರಕಿಸಿಕೊಡಬಲ್ಲ. ಈ ವಾದವನ್ನು ಪು.ತಿ.ನ.ಇನ್ನಷ್ಟು ಪುಷ್ಟಿಗೊಳಿಸುತ್ತಾರೆ. ಈ ಮಾತುಗಳಲ್ಲಿ ಅವೆಂದರೆ “ಕವಿ ತಾನು ಸಂಪಾದಿಸಿರುವ ಜ್ಞಾನವೇ ತನ್ನ ಕಾವ್ಯದ ಸಂವೇದನಾ ಸಾಮಗ್ರಿ–ಇವುಗಳನ್ನು ಪಡೆದಿರದೆ ತನಗೆ ಪ್ರಾಪ್ತವಾಗಬಹುದಾದ ಪ್ರತಿಭೆಗೆ ತಕ್ಕ ಆಕರನಾಗಲಾರ”[೩೬] ಹೀಗೆ ಸಂವೇದನೆಯಿಲ್ಲದೆ ನಿಜವಾದ ಅರಿವು ಮೂಡಲು ಸಾಧ್ಯವಿಲ್ಲ. ನಮ್ಮ ಸಂವೇದನೆಗಳಿಗೆ ತಕ್ಕಂತೆ ನಮ್ಮ ಅರಿವು ಪಕ್ವಗೊಂಡು ಒಂದು ‘ಪ್ರಜ್ಞೆ’ ಮೂಡುತ್ತದೆ. ಆ ಪ್ರಜ್ಞೆಯ ಮೂಲಕವೇ ಪ್ರತಿಭೆ ಹುಟ್ಟುತ್ತದೆ. ಪ್ರತಿಭೆಗೆ ತಕ್ಕ ವಸ್ತುವೂ ಕೂಡ ನಮಗೆ ಲಭಿಸುತ್ತದೆ.

“ಆನಂದೋದಯದ ಉಷೇಃಕಾಲ ಆತ್ಮಸಂವೇದನೆ. ಆತ್ಮ ಸಂವೇದನೆಯನ್ನುಂಟು ಮಾಡದ ಕಲೆಯಾಗಲಿ ಕವಿತೆಯಾಗಲಿ ಕೊನೆಮುಟ್ಟಿದವೆಂಬ ಪ್ರಶಂಸೆಗೆ ಪಾತ್ರವಾಗಲಾರವು”[೩೭] ಕವಿತೆಯ ವಸ್ತುವು ಸಹೃದಯನಲ್ಲಿ ಆತ್ಮಸಂವೇದನೆಯನ್ನು ಮೂಡಿಸಬೇಕು, ಒಂದು ರಸಾನುಭವವನ್ನು ನೀಡಬೇಕು. ಅದಕ್ಕೆ ಪೂರಕವಾಗಿ ಭಾಷೆಯೂ ಸೊಗಸಾಗಿ ಮೂಡಬೇಕು. ತನ್ನ ಅನುಭವಗಳನ್ನು

ಅಲೌಕಿಕವಾದ ಭಾವನೆಗಳನ್ನು ವ್ಯಕ್ತಪಡಿಸಲು ಭಾಷೆಯ ಮಾಧುರ್ಯವೂ ಕೂಡ ಅಗತ್ಯ ಏಕೆಂದರೆ 'ಕವಿಗಿರುವ ಮಾಸ್ಟರ್ ಕೀ ಮಾತೊಂದೇ"ಎನ್ನುತ್ತಾರೆ ಪು.ತಿ.ನ.

ಹೀಗೆ ಸಹೃದಯನ ಮನಸ್ಸನ್ನು ಹಲವು ತೊಡಕುಗಳಿಂದ ಮುಕ್ತವಾಗಿಸಿ ಒಂದು ಅಲೌಕಿಕವಾದ ರಸಾನುಭವವನ್ನು, ಸುವಿಚಾರಕೆಯನ್ನು, ಬುದ್ಧಿಯನ್ನು, ಭಾವ ಸಂಪತ್ತಿಯನ್ನು, ಅಹಂಕಾರ ಉಪಶಮನವನ್ನು ನೀಡುವ ಕೆಲಸ ಕವಿತೆಯೂ ಒಳಗೊಂಡಿರುವ ವಸ್ತುವನ್ನು ಅವಲಂಭಿಸಿರುತ್ತದೆ. ಹೇಗೆ ಚಾತಕಪಕ್ಷಿಯು ಕಾರ್ಮೋಡದ ಹಂಬಲದಲ್ಲಿರುತ್ತದೆಯೋ ಹಾಗೆ ರಸಾನುಭವವನ್ನೀಡುವ ವಸ್ತುವನ್ನುಳ್ಳ ಸತ್ಕವಿತೆಯ ನಿರೀಕ್ಷೆಯಲ್ಲಿ ಸಹೃದಯರಿರುತ್ತಾರೆ ಎಂದು ಪು.ತಿ.ನ ಅಭಿಪ್ರಾಯ ಪಡುತ್ತಾರೆ.

ಕವಿ ಭವದ ತೊಡಕುಗಳಲ್ಲಿ ಬಲವಾಗಿ ಸಿಲುಕಿಕೊಂಡಿರುತ್ತಾನೆ. ಆ ತೊಡಕುಗಳಿಂದಲೇ ಬಿಡುಗಡೆಯನ್ನು ಪಡೆದು, ಆ ಭವದ ವಸ್ತುಗಳನ್ನೇ ತನ್ನ ನಿಲುವಿಗೆ ದ್ಯೋತಕವಾಗಿ ಬಳಸಿಕೊಂಡು ಕಾವ್ಯಕ್ಕೆ ಒಂದು ರಮ್ಯತೆಯನ್ನು, ಸೊಗಸನ್ನು ತರುತ್ತಾನೆ. ಈ ಪ್ರಕಾರದ ರಮ್ಯತೆಯನ್ನು ತರುವಾಗ ಆತ ಅಂಸಭಾವ್ಯತೆಯ ಮೊರೆ ಹೋಗುವುದು ಒಂದು ಸ್ವಾರಸ್ಯಕರ ಸಂಗತಿ. "ಕವಿಯ ಅಗ್ಗಳಿಕೆ ಇರುವುದು ತಾನು ಲೌಕಿಕಾರ್ಷಣದಿಂದ ತಪ್ಪಿಸಿಕೊಂಡು ಬೇರೊಂದು ಮೇಲಾದ ನಿಲುಗಡೆಯಲ್ಲಿ ನಿಂತು ಈ ಭವದ ಮರ್ಮಗಳನ್ನು ನಮಗೆ ತೋರಿಸುವುದರಲ್ಲೀ"[೩೮] ಎಂದು ಪು.ತಿ.ನ ಹೇಳುತ್ತಾರೆ. ಇಂತಹ ಅಸಂಭಾವ್ಯ ಸಂದರ್ಭಗಳನ್ನು ಕಾವ್ಯದ ವಸ್ತುವಾಗಿ ಬಳಸಿಕೊಂಡಾಗ ಸಹೃದಯರಿಗೆ ರಸಾನುಭವದ ಜೊತೆಗೆ ಲೌಕಿಕ ತೊಡಕುಗಳಿಂದ ಬಿಡುಗಡೆಯ ದಾರಿಯತ್ತ ಕೊಂಡೊಯ್ಯುತ್ತದೆ.

ಅಸಂಭಾವ್ಯತೆಯನ್ನು ವಸ್ತುವಾಗುಳ್ಳ ಕಾವ್ಯದಿಂದ ರಮ್ಯತೆಯೂ ಸಹಜವಾಗಿ ದೊರೆಯುತ್ತದೆ. ಕವಿ ಇದನ್ನು ಕಲ್ಪನಾಶಕ್ತಿಯ ಸಾಮರ್ಥ್ಯದಿಂದ ತರಲು ಪ್ರಯತ್ನಿಸುತ್ತಾನೆ. ಅಸಾಧ್ಯವೆಂಬಂತಹ ಚಿತ್ರಣಗಳನ್ನು ಆತ ತನ್ನ ಕಾವ್ಯ ಕೌಶಲದಿಂದ ಹಾಗೂ ನಿರೂಪಣಾ ಜಾಣ್ಮೆಯಿಂದ ಸಾಧ್ಯವೆಂಬಂತೆ ಹೆಕ್ಕಿ ತೆಗೆಯುತ್ತಾನೆ. ಇದನ್ನು ಪು.ತಿ.ನ ರವರ 'ಕತೆಗಾರ' ಎಂಬ ಪದ್ಯದಲ್ಲಿ ಸೂಕ್ಷ್ಮವಾಗಿ ಗ್ರಹಿಸಬಹುದು.

**"ವ್ಯಥೆಗಳ ಕಳೆಯುವ ಕತೆಗಾರ**
**ನಿನ್ನ ಕಲೆಗೆ ಯಾವುದು ಭಾರ?**
**ಆವುದು ವಿಸ್ತರ ಯಾವುದು ದುಸ್ತರ**
**ನಿನಗೆಲೆ ಹರ್ಷದ ಹರಿಕಾರ?"[೩೯]**

ಕವಿಗೆ ಯಾವುದೂ ಅಸಾಧ್ಯವಲ್ಲ. ಕವಿ ತನ್ನ ಕಲೆಯಿಂದ ವ್ಯಕ್ತಿಯ ವ್ಯಕ್ತಿತ್ವಗಳ ಜೋಡಣೆಯನ್ನು ಆತ ಮಾಡಬಲ್ಲ. ಜಡವಸ್ತುವಿಗೂ ಜೀವ ತುಂಬುವ ಸಂಜೀವಿನಿಯಂತೆ ಕವಿಯ ಕಲೆಗಾರಿಕೆ. ಆದುದರಿಂದ

ಆತ ಬಳಸುವ ಕಾವ್ಯದ ವಸ್ತುವು ಲೌಕಿಕ ಜಡತ್ವದಿಂದ ಮುಕ್ತಿಯನ್ನೊದಗಿಸಿ ಭವದ ಉಪಶಮನಮಾಡುವಂತಹದ್ದು.

ವಾಸ್ತವ ಸಂಗತಿಗಳಲ್ಲಿ ನಾವು ಕಾಣುವ ನೋವು–ನಲಿವು, ಸುಖ–ದುಃಖ ಹಾಗೂ ಸಂವೇದನೆಗಳನ್ನು ಕವಿ ಅಲೌಕಿಕವಾದ ಅಲೋಕದಿಂದ ತುಂಬುವ ಪ್ರಯತ್ನವನ್ನು ಮಾಡುತ್ತಾನೆ. ಈ ಪ್ರಯತ್ನವು ವಾಸ್ತವಕ್ಕೆ ಹತ್ತಿರವೆಂಬಂತೆ ಕಾವ್ಯಕ್ಕೆ ಸೌಂದರ್ಯವನ್ನೊದಗಿಸುತ್ತವೆ. ರಾಮಾಯಣ, ಮಹಾಭಾರತದಲ್ಲಿ ಬರುವ ಎಷ್ಟೋ ಸಂಗತಿಗಳನ್ನು ಇಲ್ಲಿ ಉದಾಹರಣೆಯಾಗಿ ನೋಡಬಹುದು. ಉದಾ:– ಕುಮಾರವ್ಯಾಸನು ವರ್ಣಿಸುವ ಕರ್ಣಜನನದ ಪ್ರಸಂಗವನ್ನು ಪು.ತಿ.ನ. ರವರು ಇದಕ್ಕೆ ನಿದರ್ಶನವಾಗಿ ಬಳಸಿದ್ದಾರೆ.

**"ಕೆದರಿ ಕಾಲಲಿ ಮಳಲ ರಾಶಿಯ**
**ನೊದೆದು ಕೈಗಳ ಕೊಡಹಿ ಭೋಯಂ**
**ದೊದರುತಿರ್ದನು ಶಿಶುಗಳರಸನು ರವಿಯ ನೀಕ್ಷಿಸುತ॥**
**ಇದನು ಕಂಡನು ಸೂತನೊಬ್ಬನು"**[೪೦]

ಇಲ್ಲಿ ಬರುವ ತಾಯಿ–ಮಗನ, ತಂದೆ–ಮಗನ ಸಂವೇದನೆ ಹಾಗೂ ಸೂರ್ಯನು ತನ್ನ ಮಗುವಿನ ಅಳಲನ್ನು ನಿಲ್ಲಿಸಲು ಅಸಮರ್ಥನಾದ ಸ್ಥಿತಿ, ಸೂರ್ಯನೂ ಕೂಡ ಮರುಕಕ್ಕೆ ಪಾತ್ರವಾಗುವ ಅಂಶ ವಾಸ್ತವಕ್ಕೆ ಹತ್ತಿರವೆಂಬಂತೆ ಕವಿ ಇಂಥ ಅಸಂಭಾವ್ಯತೆಯ ವರ್ಣನೆಯನ್ನು ಒಂದಕ್ಕೊಂದು ಪೂರಕವಾಗಿ ಬಳಸುತ್ತಾನೆ. ಹೀಗೆ ಕವಿಯು ಭವದಲ್ಲಿ ಕಾಣುವ ಸಂವೇದನೆಯಿಂದ ದೂರ ಸರಿದು ಅದೇ ಸಂವೇದನೆಯನ್ನು ಉನ್ನತಕರಿಸಿ ಕಾವ್ಯದಲ್ಲಿ ವಸ್ತುವಾಗಿ ಬಳಸುತ್ತಾನೆ.

ಹೀಗೆ ಪು.ತಿ.ನ ಹೇಳುವುದೇನೆಂದರೆ ಕಾವ್ಯದಲ್ಲಿ ವಸ್ತು ಏನೇ ಇರಲಿ. ಅದು ರಸಾನುಭೂತಿಯನ್ನೊದಗಿಸುವಂತಿರಬೇಕು. ಕವಿಯ ಕಲ್ಪನೆಗೆ ಯಾವುದೂ ದೂರವಲ್ಲ. ಯಾವುದು ಅಸಾಧ್ಯವೂ ಅಲ್ಲ. ಆತ ಯಾವುದನ್ನಾದರೂ ವಸ್ತುವಾಗಿಸುವ ಶಕ್ತಿಯನ್ನು ಪಡೆದವನಾಗಿರುತ್ತಾನೆ. ಹಾಗೆಯೇ ಕವಿಯ ವಸ್ತುವಿನ ಆಯ್ಕೆಯಲ್ಲಿ ಮಿತಿಯೇ ಇಲ್ಲ. ಎಲ್ಲವೂ ಸಂಭವ ಎನ್ನುವುದನ್ನು ಅವರ ಕವನದ ಸಾಲುಗಳು ಸ್ಪಷ್ಟ ಪಡಿಸುತ್ತವೆ.

**"ಕಪಿ ಹಾರಿತು ಹೆಗ್ಗಡಲನು ಎಂಬೆ**
**ಕಡಲವೆ ಕಡೆದರು ಬೆಟ್ಟದೊಳೆಂಬೆ**
**ನಿನ್ನೂಹೆಯ ಹೇರಾಳವ ತುಂಬೆ**
**ಸೃಷ್ಟಿಕರ್ತನಿಗೂ ಅರಿದೆಂದೆ"**[೪೧]

ಸಾಹಿತ್ಯವೆನ್ನುವುದು ಯಾವುದೇ ಸಾಮಾಜಿಕ ಪ್ರತಿಷ್ಠೆಗಾಗಿ ರಚನೆಯಾಗುವುದಿಲ್ಲ. ಸಾಹಿತ್ಯವಿರುವುದು ಸಕಲ ಮಾನವರಲ್ಲಿ ಸ್ನೇಹಪೂರ್ವಕವಾದ ಶಾಂತಚಿತ್ತ ಮನೋಧರ್ಮವನ್ನು ಉನ್ನತೀಕರಿಸಲು. ಆದರೆ ಇಂದು ಕಾವ್ಯ ಪ್ರತಿಭಟನೆಯ ಸ್ವರೂಪ ತಾಳಿರುವುದು ಬಹುಶೋಚನೀಯ ಎನ್ನುತ್ತಾರೆ ಪು.ತಿ.ನ.

ಕಾವ್ಯದ ವಸ್ತುವಿನಿಂದ ಭಾವಶುದ್ಧಿಯು ಪ್ರಾಪ್ತವಾಗಬೇಕು. ಜೀವಕಾಮನೆಗಳ ಬಿಗಿತಗಳಿಂದ, ಅದರ ಸೆಳೆತದಿಂದ ಮುಕ್ತವಾಗಿಸುವ ಗುಣ ಕಾವ್ಯದ ವಸ್ತುವಿನಲ್ಲಿರವಂತೆ "ಕವಿಗೆ ಬೇಕಾದುದು ಈ ಶಮಸಂಪನ್ನ ನಿರ್ವೈರಭಾವ"[೪೨]

ಇಂದಿನ ಸಾಹಿತ್ಯದಲ್ಲಿ ಧಾರ್ಮಿಕತೆ, ಜಾತೀಯತೆ, ಸಂಘರ್ಷ ಪ್ರತಿಭಟನೆ ಇವೆಲ್ಲವೂ ತಲೆಹಾಕುತ್ತಿದೆ. ಇಂದು ಇದೇ ಕಾವ್ಯದ ವಸ್ತುವೂ ಆಗಿದೆ. ಕಾವ್ಯ ಮೂಲತಃ ಭಾವಸಂವೇದನಾತ್ಮಕ ಪ್ರವೃತಿಯೇ ವಿನಃ ಅದು ಧಾರ್ಮಿಕವಾದಂತಹ ಯಾವುದೇ ಸಿದ್ಧಾಂತಗಳಿಗೆ ಅಂಟಿಕೊಂಟಿರುವಂತಹದ್ದಲ್ಲ. "ತನಗೆ ಪ್ರಾಪ್ತವಾದ ಅಥವಾ ತಾನೇ ಸಂಪಾದಿಸಿಕೊಂಡಿರುವ ಉಪಾಧಿಗಳ ಸ್ತರದಲ್ಲಿ ನಿಂತು ತನ್ನ ಹಾಗೆ ಅನೇಕ ಸ್ವಾಭಾವಿಕ, ಸಾವರಾಜಿತ, ಸಾಂಸ್ಕಾರಿಕ ಪಾಶಗಳಿಂದ ಬದ್ಧನಾದ ಜೀವನವನ್ನು ಕುರಿತು ಆಯಾ ಉಪಾಧಿಗಳನ್ನೇ ಕೆಣಕಿಯೋ, ರೇಗಿಸಿಯೋ ಹೇಳುವ ಮಾತುಗಳು ಮಾನವನ ಅಂತಃಕರಣದ ಶುದ್ಧಸ್ತರವನ್ನು ಮುಟ್ಟಿ ಅವನ ಜೀವನವನ್ನು ಆನಂದಗೊಳಿಸಲಾರೆವು, ವಿಕಾಸಗೊಳಿಸಲಾರವು" ಎಂದು.

ಉದ್ವೇಗಭರಿತ, ಆವೇಶಗಳಿಂದ ಕೂಡಿದ ಕಾವ್ಯ ನಿರುಪಾಧಿಕ ಸ್ತರವನ್ನು ಮುಟ್ಟದು. ಯಾವುದೇ ಸತ್ವವನ್ನು ಗಳಿಸಿಕೊಡುವುದರಲ್ಲಿ ಅದು ಸೋಲುತ್ತದೆ. ಭವದ ಸಂಕೋಲೆಗಳಿಂದ ಬಿಡಿಸಿಕೊಂಡು ಸ್ವಂತಿಕೆಯನ್ನು, ಸ್ವಾತಂತ್ರ್ಯವನ್ನು ಸಾಧಿಸುವುದು ಕಾವ್ಯದ ಶುದ್ಧ ವಸ್ತು ನಿರೂಪಣೆಗೆ ಉತ್ತಮವಾದುದು. ಅಂತಹ ಪಥದಲ್ಲಿ ಒಬ್ಬ ಕವಿ ಸಾಗುವುದು ಶ್ರೇಯಸ್ಕರ.

"ನೈಜಕವಿ, ಹುಟ್ಟಾಪ್ರತಿಭಟಕ, ಅನಾಥ, ಅನಿಕೇತನ, ಸ್ವೇಚ್ಛವಿಹಾರಿ ಯಾವ ದಾಕ್ಷಿಣ್ಯಕ್ಕೂ ಒಳಗಾಗದ ಹೋರಾಟಗಾರ. ಯಾವುದೂ ತನಗೆ ಹೊರಗೆನಿಸದ ಸ್ನೇಹಮಯ, ಹೋರಾಟದಲ್ಲಿ ತೊಡಗಿರುವ ಧೀಮಂತನು ಸಮಾಜದಲ್ಲಿ ತುಂಬ ಪಾಡುಪಡಬೇಕಾಗುತ್ತದೆ"[೪೩] ಎಂಬ ಮಾತುಗಳಲ್ಲಿ ಒಂದು ದೃಢತೆ ಇದೆ. ಈ ಮೇಲಿನ ಗುಣಕ್ಕೆ ಹೊಂದುವ ಕವಿಯಾದವನು ತನ್ನ ಕಾವ್ಯಕ್ಕೆ ಇಂಥಹದ್ದು ವಸ್ತುವಿನ ಅಗತ್ಯವಿದೆ ಎಂದು ಒಂದು ಚೌಕಟ್ಟನ್ನು ಹಾಕಿಕೊಳ್ಳಲಾರ. ಯಾವುದನ್ನು ತನ್ನ ಮಿತಿಯೊಳಗೆ ಸೀಮಿತಗೊಳಿಸಲಾರ, ಎಲ್ಲವನ್ನೂ ಒಟ್ಟಾಗಿ ತನ್ನ ಕಾವ್ಯಸೃಷ್ಟಿಯಲ್ಲಿ ವಸ್ತುವಾಗಿ ಬಳಸಿಕೊಳ್ಳುವಾತನ ಕಾವ್ಯಕ್ಕೆ ಒಂದು ನೆಲೆ ಸಿಗುತ್ತದೆ.

ಹೀಗೆ ಪಕ್ಷಪಾತಿಯಾಗದೆ, ಸ್ನೇಹಮಯಿಯಾಗಿ, ಬಂಧನಮುಕ್ತನಾಗಿ ಕಾವ್ಯರಚನೆಯಲ್ಲಿ ತೊಡಗಬೇಕು. ಹಾಗೆ ಕಾವ್ಯವಸ್ತುವನ್ನು ಸಂಪಾದಿಸುವಾಗಲೂ ಇಂತಹ ಅಂಶಗಳನ್ನು ಆತ

ಮನಸ್ಸಿನಲ್ಲಿಟ್ಟು ಮುಂದುವರಿಯುವುದು ಅವಶ್ಯಕ. "ಕಾವ್ಯಕ್ಕೂ ಮಡಿವಂತಿಕೆಗೂ ಯಾವ ಸಂಬಂಧವೂ ಇಲ್ಲ. ಹಾಗೆಯೇ ಅದಕ್ಕೂ ಅಸ್ಪೃಶ್ಯತೆಗೂ ಯಾವ ನೆಂಟು ಇಲ್ಲ"[೪೪] ಹೀಗೆ ಹೇಳಿರುವುದರ ಬಹುಮುಖ್ಯ ಕಾಳಜಿ ಎಂದರೆ ಕಾವ್ಯದ ವಸ್ತುವು ಹೀಗೆ ಇರಬೇಕೆಂಬ ನಿಯಮಗಳಿಲ್ಲ ಅಥವಾ ಕಾವ್ಯಕ್ಕೆ ಶುದ್ಧ ಅಶುದ್ಧತೆಯ ನಿಲುವಿಲ್ಲ. ಅದು ಯಾವ ವಸ್ತುವನ್ನೇ ಪಡೆದರೂ ಅದರಿಂದ ನಿರ್ಮಿಲವಾದ, ಸ್ನೇಹಪೂರ್ಣವಾದ, ಮಾನವೀಯ ಮೌಲ್ಯಗಳನ್ನು ಜಾಗೃತಗೊಳಸುವಂತಹ, ರಸಾನುಭವವನ್ನು ನೀಡುವ ಗುಣಗಳನ್ನು ಪಡೆಯಬೇಕು.

ಹೀಗೆ ಪು.ತಿ.ನ. ರವರು ಕಾವ್ಯದ ವಸ್ತುವನ್ನು ಕುರಿತು ಒಂದು ತಾತ್ತ್ವಿಕವಾದ ಜಿಜ್ಞಾಸೆಯನ್ನು ಕೈಗೊಳ್ಳುತ್ತಾರೆ.

**ಈ) ರಸ ಪ್ರಜ್ಞೆ :–**

ಪು.ತಿ.ನ ರವರಲ್ಲಿ ರಸದ ಕಲ್ಪನೆ ಒಂದು ಆಧ್ಯಾತ್ಮ ರೂಪವನ್ನು ಪಡೆಯುತ್ತದೆ. ಅವರು ತಮ್ಮ ರಸದ ಕುರಿತಾದ ಕಾವ್ಯ ಚಿಂತನೆಗಳಲ್ಲಿ 'ರಸಕ್ಕೆ' ನೀಡಿರುವ ಸ್ಥಾನ ಉತ್ಕೃಷ್ಟವಾದದ್ದು. ಅವರು ಹೇಳುವ ಪ್ರಕಾರ 'ರಸ' ಎಂದರೆ ಒಂದು ಪ್ರಜ್ಞೆ, ಅದು ನಮ್ಮ ಜಾಗರದಾವಸ್ಥೆಯಲ್ಲಿ ಬರುವಂಥದ್ದು. ರಸವೆಂಬ ಪರಿಕಲ್ಪನೆ ಪು.ತಿ.ನ ರವರ ಸಾಹಿತ್ಯದಲ್ಲಿ ಹೇಗೆ ಮೂಡಿದೆ ಮತ್ತು ರಸದ ಜಿಜ್ಞಾಸೆ ಕುರಿತು ಇಲ್ಲಿ ಚಿಂತನೆಯನ್ನು ಮಾಡುವುದು ಬಹುಮುಖ್ಯ.

"ಅಖಂಡವಾಗಿ ಅಪರಿಮಿತವಾಗಿ "ಸಾಧಾರಣ"ವಾಗಿ ಗೋಚರವಾಗುತ್ತದೆ. ಬೇರೊಂದರ ಪರಿಜ್ಞಾನವನ್ನು ಇವನಿಗೆ ತಪ್ಪಿಸಿ, ತಾನೇ ತಾನಾಗಿ ಹೊಳೆದಾಡುತ್ತದೆ. ಇದನ್ನು ಏಕಧ್ಯಾನದಿಂದ ಅರಿಯುವುದು ಬೇರೆಯಲ್ಲ. ಆಸ್ವಾಧಿಸುವುದು ಬೇರೆಯಲ್ಲ. ಈ ಆಸ್ವಾದವೇ ಅದರ ಜೀವ ಹೀಗೆ ಅಭಿವ್ಯಕ್ತವಾಗಿ ಆಸ್ವಾದ್ಯವಾಗುವ ಭಾವವೇ ರಸ"[೪೫]

'ರಸ'ವೆಂಬ ಪದಕ್ಕೆ ಪು.ತಿ.ನ ರವರು ಹೀಗೆ ವ್ಯಾಖ್ಯಾನಿಸುತ್ತಾರೆ. "ನನ್ನ ದೃಷ್ಟಿಯಲ್ಲಿ 'ರಸ' ಎಂಬುದೊಂದು ವಿಚಾರ ವಿಶೇಷ. ಮನುಷ್ಯನ ಅಂತಃಕರಣದಲ್ಲಿ ಮಾತ್ರ ಉತ್ಪನ್ನವಾಗಿ ಒಂದು ವಿಶಿಷ್ಟ ಕಾಂತಕ್ಷೇತ್ರವನ್ನು ನಿರ್ಮಿಸುವಂಥದ್ದು. ಈ ಕ್ಷೇತ್ರಕ್ಕೆ ಒಳಗುಪಟ್ಟ ಮಾನುಷಾಂತಃಕರಣ ಉಲ್ಲಸಿತವಾಗುತ್ತದೆ. ಆನಂದಿಯಾಗುತ್ತದೆ. 'ರಸ' ತನ್ನ ಮನಸ್ಸಿನ ಹೊರತಳುಕು. ನಿರ್ಮಲಾತ್ಮದ ಉತ್ ಸ್ಫೂರ್ಜನ, ಅನುರಾಗಯುಕ್ತ ಚಿತ್ತದ ಹೊರಹೊಮ್ಮಿಕೆ"[೪೬] 'ರಸ' ಎನ್ನುವುದು ಬಹು ಸ್ವಾರಸ್ಯಕರವಾದ ಶಬ್ದ. "ರಸ ಶಬ್ಧೇ 'ರಸ ಅಸ್ವಾದನ ಸ್ನೇಹನಯೋಃ' ಹೀಗೆ ಎರಡು ಧಾತುಮೂಲಗಳಿಂದ ಹುಟ್ಟಿದೆ. ಮನಸ್ಸಿನ ಒಂದು ಉದ್ವೇಗವನ್ನೋ, ಆವೇಗವನ್ನೋ ಪ್ರಕಟಗೊಳಿಸುವ ಕೂಗಿಗೆ ಗರ್ಜನೆಗೆ ರಸನ"[೪೭]ಎನ್ನುತ್ತೇವೆ ಎಂದು ಪು.ತಿ.ನ ರಸ ಶಬ್ದದ ಕುರಿತು ವಿವರವಾಗಿ ತಿಳಿಸಿದ್ದಾರೆ.

'ರಸ' ಎಂಬ ಶಬ್ದಕ್ಕೆ ಚರ್ವಣಾ, ಚಮತ್ಕಾರ, ಆಸ್ವಾದ, ಆನಂದ, ವಿಶ್ರಾಂತಿ ಎಂದು ಬೇರೆ ಬೇರೆ ಹೆಸರುಗಳು. ಆದರೆ ಎಲ್ಲದರ ತಾತ್ಪರ್ಯವೂ ಒಂದೇ"[೪೮]

ಆದರೆ ಪು.ತಿ.ನ ಅವರು ಇದಕ್ಕೆ ಮತ್ತೊಂದು ರೀತಿಯಲ್ಲಿ ಅಂದರೆ ತಮ್ಮದೇ ಆದ ಪರಿಕಲ್ಪನೆಗಳಲ್ಲಿ ಚಿಂತಿಸಿ ಅರ್ಥವನ್ನು ಹೀಗೆ ಸೂಚಿಸುತ್ತಾರೆ. ಮಧುರ, ಮನೋಹರ, ಪ್ರಣಯಪೂರ್ಣ, ಆರ್ದ್ರ, ಸತ್ವಸಂಪನ್ನ, ಸಾರ ಇತ್ಯಾದಿ ಅರ್ಥಗಳು ಸಾಮಾನ್ಯವಾಗಿ ರಸಕ್ಕೆ , ಬಳಕೆಯಲ್ಲಿದೆ ಎಂದು ಹೇಳುತ್ತಾರೆ. ಕಾವ್ಯಮೀಮಾಂಸಕರ ಪ್ರಕಾರ "ಲೋಕ ವ್ಯವಹಾರದ ನೆಲೆಯಲ್ಲಿ ನಾವು ಪಡೆಯಲಾರದ ಮತ್ತು ಪಡೆಯಲಾಗದ, ಕಾವ್ಯಕಲೆಗಳಿಂದ ಮಾತ್ರವೇ ನಾವು ಪಡೆಯಬಹುದಾದ ಈ ಆಹ್ಲಾದ ವಿಶೇಷವನ್ನು ರಸಾನುಭವ ಅಥವಾ ಕಲಾನುಭವ ಎಂದು ನಿರ್ದೇಶಿಸಿದ್ದಾರೆ"[೪೯]

ಹೀಗೆ ರಸದ ಕುರಿತಾದ ವ್ಯಾಖ್ಯೆ, ಅರ್ಥ ಮತ್ತು ವಿಶೇಷಣೆಯನ್ನು ಈ ಮೇಲ್ಕಂಡಂತೆ ನೋಡಿದೆವು. ಆದರೆ ಪು.ತಿ.ನ ರವರು ಈ 'ರಸ' ಎಂಬ ಪದಕ್ಕೆ ನೀಡುವ ಅರ್ಥ ಸಾಧ್ಯತೆಗಳೇನು, ರಸದ ಕುರಿತಾದ ಅವರ ನಿಲುವುಗಳು, ಜಿಜ್ಞಾಸೆ ಇವುಗಳನ್ನು ಮುಂದೆ ತಿಳಿಯೋಣ.

ಪು.ತಿ.ನ ರವರು ಹೇಳುವ ಪ್ರಕಾರ ಕಾವ್ಯ-ಶಾಸ್ತ್ರಗಳಲ್ಲಿ 'ರಸ' ಎಂಬುದು ಹೇಗೆ ಅಡಗಿದೆಯೋ ಹಾಗೆ ಸಂಗೀತ, ಕಲೆ, ಶಿಲ್ಪ ಮುಂತಾದ ಕಲೆಗಳ ಪರಿಮಿತಿಯಲ್ಲಿ ಈ 'ರಸದ' ಅಂಶವಿದೆ ಎಂದು. ರಸಕ್ಕೆ ಪರಮಾತ್ಮನೆಂಬ ಸಂಕೇತವೂ ಇದೆ. ರಸದಪ್ರಜ್ಞೆ ಇರುವವನಿಗೆ ಮಾತ್ರ ಈ ಸಂಕೇತದ ಅರಿವು ಮೂಡುವುದು ಎಂದು ಕೂಡ ಅವರು ಹೇಳುತ್ತಾರೆ.

"ರಸೋವೈಸಃ", "ರಸಂ ಹ್ಯೇವಾಯಂ ಅಬ್ಧ್ವಾ ನಂದೀ ಭವತಿ" ಎಂದು ಬಳಸುವ ವಾಕ್ಯದಲ್ಲಿ ರಸ ಎಂಬ ಶಬ್ದವು ತನ್ನಲ್ಲಿಯೇ ಅಡಗಿಸಿಕೊಂಡಿರುವ ಅರ್ಥವಿಶೇಷತೆಯನ್ನು ಪು.ತಿ.ನ ವಿವರವಾಗಿ ಹೇಳುತ್ತಾರೆ.

"ರಸೋವೈಸಃ' ಎಂಬುದು ಉದಾರವಾದ ಮಾತು ಎಂದು ಪು.ತಿ.ನ ಹೇಳುವುದರಲ್ಲಿ ಅರ್ಥವಿದೆ. ಏಕೆಂದರೆ ರಸವು ಅಂತರಾತ್ಮವನ್ನು ಪುಳಕಿತ ಗೊಳಿಸುವ ಒಂದು ಅಂಶ. ಭವಸ್ತರದಿಂದ ಬೇರ್ಪಡಿಸಿ ಒಂದು ಹೊಸ ಬಗೆಯ ಲೋಕದ ಅರಿವು ಮೂಡಿಸುವ ಬಗೆ. ಅದನ್ನು ಅಸ್ವಾದಿಸುವವನಿಗೆ ಮಾತ್ರ ಆ ರಸದ ಪರಿಧಿ ತಿಳಿಯುವುದಕ್ಕೆ ಸಾಧ್ಯ" ಎಂಬ ಅರ್ಥದಲ್ಲಿ ಅಭಿವ್ಯಕ್ತಿಸಿದ್ದಾರೆ. ಅವರೇ ಹೇಳುವಂತೆ "ರಸ' ಒಂದು ಕಡೆಯಲ್ಲಿ ಸಕಲ ಹೃದಯವರ್ತಿ ಆನಂದಮಯ ಭವಾತರ ವಸ್ತುವನ್ನು ನಿರ್ದೇಶಿಸಿ ಮತ್ತೊಂದು ಕಡೆಯಲ್ಲಿ ಸರ್ವವ್ಯಾಪಿಯಾದ ವಿಶ್ವರೂಪ ಜ್ಞಾನಕಾರ ಸದ್ವಸ್ತುವಿನತ್ತ ನಮ್ಮ ಗಮನವನ್ನು ಸೆಳೆಯುತ್ತದೆ"[೫೦] ಭವದ ಸಾಮಾನ್ಯ ವಸ್ತುವನ್ನು ನಮ್ಮ ಪ್ರಜ್ಞೆಗೆ ತರುವ ಪ್ರಯತ್ನವೇ ರಸ.

ಭವಸ್ತರದಲ್ಲಿ ದುರ್ಲಭವಾದ ಸಂವೇದನೆಗಳನ್ನು ನಮ್ಮ ಭೋಗಾನುಭವಕ್ಕೆ ಗೋಚರಪಡಿಸಿ ಪ್ರಜ್ಞೆಯಲ್ಲಿ ತೊಡಗಿಸುವ ಅಂಶವೇ ರಸದ ಅನುಭವ. ಇದಕ್ಕೆ ಈ ಅನುಭವ ಸಾದೃಶ್ಯವೇ ವಿಶೇಷವಾದ ಅರ್ಥ ಎಂದು ಇವರು ಅಭಿಪ್ರಾಯ ಪಡುತ್ತಾರೆ.

ಮಾನವನ ಬದುಕಿನ ಅಂಶಗಳನ್ನು ಮುಂದಿಟ್ಟು ಮಾತನಾಡಿದಾಗ, ಮಾನವನ ಬಾಳಿಗೆ ನೆಮ್ಮದಿ, ಸುಖ, ಭೋಗ, ತರುವುದೇ ಜ್ಞಾನ. ಈ ಜ್ಞಾನದ ಅರಿವು ಅಥವಾ ಪ್ರಜ್ಞೆ ನಮಗೆ ದೊರೆಯುವುದು ಶಾಸ್ತ್ರಗಳು ಮತ್ತು ಕಲೆಗಳಿಂದ. ಇಂಥ ಕಲೆಗಳು ರಸದೊಂದಿಗೆ ಪ್ರಜ್ಞೆಯನ್ನು ತರುವುದೇ ಆದರೆ ಅದು ಮಾತ್ರ ಸ್ಪರ್ಶಗಳಲ್ಲಿ ನಿಗದಿಗೊಳ್ಳುತ್ತದೆ. "ಮಾತ್ರಾಸ್ಪರ್ಶಗಳೆಂದರೆ ಮನಸ್ಸಿನ ನಿಯಂತ್ರಣದಲ್ಲಿ ಇಂದ್ರಿಯಗಳು ಈ ಜಗತ್ತಿನ ವಿಷಯಗಳಲ್ಲಿ ನಡೆಸುವ ವ್ಯವಹಾರಗಳು"[೫೧] ಚಿಂತನೆಗಳನ್ನಿಟ್ಟು ನಡೆದರೆ ಪ್ರತಿಯೊಬ್ಬರ ಕಲೆಯ ರಸಾನುಭೂತಿಯು ಬೇರೆ ಬೇರೆಯಾಗುತ್ತದೆಂದು ಇದನ್ನು ಅರ್ಥೈಸಬಹುದು.

ವೈಜ್ಞಾನಿಕವಾದ ಚಿಂತನೆಯಲ್ಲಿ ಬಹುಮುಖ್ಯವಾಗಿ ಹೇಳಬಹುದಾದರೆ ವೈಜ್ಞಾನಿಕ ಅನ್ವೇಷಣೆಯು ವಸ್ತುಗಳ ಸ್ಥಿತಿಗತಿ ಮತ್ತು ಪರಸ್ಪರ ಸಂಬಂಧಗಳನ್ನು ಹೇಳುತ್ತದೆ. ಪರಿಣಾಮಗಳ ವಿಶ್ಲೇಷಣೆಯನ್ನು ಮಾಡುತ್ತದೆ. ಅಂತಹ ವಿಜ್ಞಾನಿಯು ಭಾವನಾತ್ಮಕವಾದ ಆಸೆ ಆಕಾಂಕ್ಷೆಗಳನ್ನು ತೋರದೆ ಅದಕ್ಕೆ ಅನುಗುಣವಾದ ನಿರುದ್ವೇಗವೂ, ಶಾಂತವೂ ಆದ ಮನಸ್ಸಿನಿಂದ ಈ ಅನ್ವೇಷಣಾ ಕಾರ್ಯವನ್ನು ನಡೆಸಲು ಆತ ಮುಂದಾಗುತ್ತಾನೆ. ಪುರುಷಾರ್ಥಗಳಲ್ಲಿ ಅರ್ಥದ ವಿಷಯವನ್ನು ಕುರಿತಾದ ವಿಜ್ಞಾನಿಯ ಮಾತು, ವಾದ, ಚರ್ಚೆಗಳು ಬಹಳ ಇವೆ. ಆದರೆ 'ಕಾಮದ' ಕುರಿತಾದ ಚಿಂತನೆ ಆತನ ಆಸಕ್ತಿಗೆ ಹೊರತಾಗಿರುತ್ತದೆ. ಆದರೆ ರಸದ ವಿಷಯದಲ್ಲಿ 'ಕಾಮದ' ವಿಚಾರವನ್ನು ಕೈ ಬಿಡುವಂತಿಲ್ಲ ಎಂಬುದು ಪು.ತಿ.ನ ಇಲ್ಲಿ ತಾತ್ವಿಕವಾಗಿ, ವೈಜ್ಞಾನಿವಾಗಿ ಮತ್ತು ಸ್ಥೂಲವಾಗಿ ಹೇಳುತ್ತಾರೆ. ಇದಕ್ಕೆ ಅವರ ಮಾತುಗಳನ್ನು ಇಲ್ಲಿ ಉದಾಹರಿಸಬಹುದು. " ವಿಜ್ಞಾನವನ್ನು ಅರ್ಥ ತತ್ತ್ವೋಪಾಸನೆ ಅಥವಾ ಋತೋಪಾಸನೆ ಎಂದು ಕರೆದರೆ, ರಸಾಭಿಗಮನವನ್ನು ಕಾಮತತ್ತ್ವೋಪಾಸನೆ ಎಂದು ಕರೆಯಬಹುದು. ಇದು ಆತ್ಮತತ್ತ್ವೋಪಾಸನೆ ಮತ್ತು ಸತ್ಯೋಪಾಸನೆಯೂ ಹೌದು"[೫೨] ಎನ್ನುತ್ತಾರೆ.

ತಮ್ಮ ರಸದ ವಿವೇಚನೆಯಲ್ಲಿ ಪು.ತಿ.ನ ವಿಜ್ಞಾನಕ್ಕೂ ರಸಕ್ಕೂ ಇರುವ ವ್ಯತ್ಯಾಸವನ್ನು ತೋರಿಸುತ್ತಾರೆ. ವೈಜ್ಞಾನಿಕವಾದ ಸತ್ಯದ ಶೋಧದಲ್ಲಿ ಜ್ಞಾನ ಉಂಟಾದರೆ ರಸದ ಆತ್ಮೋಪಾಸನೆಯಲ್ಲಿ ಆನಂದ ಮತ್ತು ಅರಿವು ಎರಡೂ ಏಕಕಾಲದಲ್ಲಿ ದೊರೆಯುತ್ತದೆ. "ಕಾಮ ತನ್ನ ಉತ್ಕೃಷ್ಟ ಸ್ಥಿತಿಯನ್ನು ರಸದಲ್ಲಿ ಮುಟ್ಟುತ್ತದೆ"[೫೩] ಅದನ್ನು ಆನಂದ ಎಂದು ಕರೆಯುತ್ತೇವೆ ಇಲ್ಲಿ ರಸಕ್ಕೂ-ಆತ್ಮಕ್ಕೂ ಇರುವ ಅವಿನಾಭಾವ ಸಂಬಂಧವನ್ನು ಕಾಣಬಹುದು.

ವಿಜ್ಞಾನಿಗೆ ಜ್ಞಾನದ ಪ್ರಶ್ನೆ ಎದುರಾದರೆ, ರಸಸ್ವಾಧಿತನಿಗೆ ಅದರ ಆನಂದದ ಪ್ರಶ್ನೆ ಎದುರಾಗುತ್ತದೆ. ಹೀಗೆ ವಸ್ತು, ಸನ್ನಿವೇಶಗಳು ಮತ್ತು ಸಂವೇದನೆಗಳಿಗೆ ತಕ್ಕಂತೆ ಅದರ ಆನಂದದ ಅಪೇಕ್ಷೆಯೂ ಕೂಡ ಭಿನ್ನ ಮತ್ತು ಕಾಲಕ್ಕೆ ತಕ್ಕಂತೆ ಪರಿಷ್ಕೃತವಾಗುತ್ತದೆ.

"ಜ್ಞಾನಾನಂದಗಳೆರಡೂ ಶುದ್ಧ ಮನಸ್ಸಿನ ಸಿದ್ಧಿಗಳು"[೩೪] ಪು.ತಿ.ನ. ಹೇಳುವಂತೆ ರಸಜ್ಞನಿಗೂ, ವಿಜ್ಞಾನಿಗೂ ಒಂದು ಪರಿಶುದ್ಧವಾದ ನಿರ್ಮಲ ಮನಸ್ಸಿರಬೇಕೆಂದು. ಹೀಗೆ ವಿಜ್ಞಾನಿ ತನ್ನ ತಾಂತ್ರಿಕ ಕೌಶಲಗಳಿಂದ ಹೊಸವಸ್ತುವನ್ನು ಆವಿಷ್ಕರಿಸಿ ಆ ವಸ್ತುವಿನ ಉಪಯುಕ್ತತೆ ಅಥವಾ ವಸ್ತುವಿಷಯದಿಂದ ಸತ್ಯವನ್ನು ಹೇಗೆ ಬಯಲು ಮಾಡುತ್ತಾನೋ, ಹಾಗೆಯೇ ರಸಪ್ರಜ್ಞೆಯಿಂದ ಭವದ ವಸ್ತು, ಕ್ರಿಯೆಯನ್ನು ಉನ್ನತಗೊಳಿಸಿ ಕವಿಯಾದವನು ಬದುಕಿನ ಸತ್ಯಗಳನ್ನು ವ್ಯಕ್ತಪಡಿಸುತ್ತಾನೆ. ಆದ್ದರಿಂದ ರಸಪ್ರಜ್ಞೆಯಿಂದ ಮೂಡಬೇಕಾದ ಬದುಕಿನ ಮೌಲ್ಯಗಳನ್ನು ಆಸ್ವಾಧಿಸುವುದರ ಜೊತೆಗೆ ಅರಿವೂ ಮೂಡಬೇಕೆಂದು ಅವರು ಅಭಿಪ್ರಾಯ ಪಡುತ್ತಾರೆ.

ಜಾಗ್ರದಾವಸ್ಥೆಯ ಅನುಭವಗಳು ನಾವು ಪಡೆಯುವ ರಸಪ್ರಜ್ಞೆಯಲ್ಲಿ ಗಾಢವಾಗಿರುತ್ತದೆ. ಇದು ನಾವು ಎಚ್ಚರ ಸ್ಥಿತಿಯಲ್ಲಿ ಗೋಚರಿಸುತ್ತದೆ. ಆದರೆ ಗಾಢ ನಿದ್ರೆಯಲ್ಲಿ ತಲ್ಲೀನರಾದಾಗ ಪ್ರಜ್ಞೆಯ ಪರಿವೇ ಗೋಚರಿಸದು. ಆದುದರಿಂದ "ರಸಾನುಭೂತಿ ನಮ್ಮ ಜಾಗ್ರದಾವಸ್ಥೆಗೆ ಸೀಮಿತವಾಗಿದೆ ಅದು ನಾವು ಇಷ್ಟಪಟ್ಟು ಪಡೆಯುವ ಅನುಭವ ಮತ್ತು ವಿಶಿಷ್ಟದಿಂದ ಪ್ರಾಪ್ತವಾದ ವಿಶಿಷ್ಟ ವಿಷಯಗಳ ಸಂಸರ್ಗದಿಂದ ನಮ್ಮ ಅಂತಃಕರಣದಲ್ಲಿ ವಿಶಿಷ್ಟವೂ ಅಸಾಮಾನ್ಯವೂ ಆದ ಸಂವೇದನೆಗಳನ್ನು ಉತ್ಪಾದಿಸುವುದರಿಂದ ಉಂಟಾಗತಕ್ಕದ್ದು"[೩೩] ಎಂದು ಪು.ತಿ.ನ ರಸಕ್ಕೆ ಮತ್ತು ಅದು ಉತ್ಪತ್ತಿಯಾಗುವ ಮನುಷ್ಯ ಜಾಗರ ಪ್ರಜ್ಞೆಯನ್ನು ಕುರಿತು ಇಲ್ಲಿ ವಿವರಿಸಿದ್ದಾರೆ.

ಮನುಷ್ಯನ ಜೀವನವು ಕಾಮ-ಸಂಕಲ್ಪ ಕ್ರಿಯೆಗಳಿಂದ ಹೇಗೆ ಹೊಂದಿಕೊಂಡಿದೆ ಎಂದು ಮುಂದೆ ವಿವರಿಸಿದ್ದಾರೆ. ಇದನ್ನು ಅವರು ಒಂದು ಗೀತವಾಕ್ಯದ ಮೂಲಕ ಸ್ಪಷ್ಟಪಡಿಸುತ್ತಾರೆ.

**ನಹಿ ಕಶ್ಚಿತ್ ಕ್ಷಣಮಪಿ ಜಾತುತಿಷ್ಠಕ್ಯ ಕರ್ಮಕೃತ್**

**ಕಾರ್ಯತೇ ಹ್ಯವಶಂ ಕರ್ಮ ಸರ್ವಃ ಪ್ರಕೃತಿಜ್ಯೈಃ ಗುಣೈ**

ಕೆಲಸ ಮಾಡದೇ ಯಾರೂ ಇರಲಾರರು. ಪ್ರಕೃತಿಯಿಂದಾದ ಗುಣಗಳ ಮೂಲಕ ದೊರೆಯುವ ಯಾವುದಾದರೊಂದು ಕಾಯಕದಲ್ಲಿ ನಿರತರಾಗಿದ್ದಾರೆ. ಈ ಅರ್ಥವು ಎಲ್ಲ ಜೀವಿಗಳಿಗೂ ಅನ್ವಯಿಸುತ್ತದೆ.

ಕಾಮದ ಬಗೆಯನ್ನು ಪು.ತಿ.ನ ಎರಡು ಬಗೆಯಾಗಿ ವಿಂಗಡಿಸುತ್ತಾರೆ. ಒಂದು ಜೀವಕಾಮ, ಎರಡು ಆತ್ಮಕಾಮ ಎಂದು ಬದುಕಿನಲ್ಲಿರುವ ಆಸೆ, ಆಕಾಂಕ್ಷೆಗಳು, ಬದುಕುವ ತುಡಿತ, ಜೀವನ-ಪ್ರಕೃತಿಯ, ಕಾಮ, ಸಂತಾನೋತ್ಪತ್ತಿ, ನೆಮ್ಮದಿ ಸುಖ, ಶಾಂತಿ ಇವೆಲ್ಲವೂಗಳು ಮನುಷ್ಯ

ಜೀವಕಾಮಗಳು. ಅಂದರೆ ಬದುಕುವ ಪ್ರಕ್ರಿಯೆಗಳಿಗೆ ಮೂಲಾಂಶಗಳು. ಇದನ್ನೇ 'ಭವ' ಎಂತಲೂ ಕರೆಯಬಹುದು. ಭವದ ಜಾಗ್ರದ ಸ್ಥಿತಿಯಲ್ಲಿ ನಡೆಯುವ ಕ್ರಿಯೆ ಮತ್ತು ವಾಸ್ತವಿಕತೆಯ ತಾಕಲಾಟದ ನಡುವೆಯೂ ಮಾನವ ಇಷ್ಟ–ಅನಿಷ್ಟಗಳು, ಬೇಕು ಬೇಡಗಳು, ಪ್ರೀತಿ, ದ್ವೇಷ, ಅಸೂಯೆ, ಅಹಂಕಾರ, ಮಮತೆ, ಇವೆಲ್ಲವುಗಳು ಮನುಷ್ಯನ ಮನೋಬುದ್ಧಿಗಳಿಗೆ ಅನುಗುಣವಾಗಿ ನಡೆಯುತ್ತಿರುತ್ತವೆ. ಇದಕ್ಕೆ ಪ್ರಕೃತಿದತ್ತವಾದ ಮೂಲ ಪ್ರೇರಣೆಗಳೇ ಸಹಾಯಕಾರಿಯಾಗುತ್ತವೆ. ಇದರಲ್ಲಿ ನಮ್ಮ ಸ್ವ–ಇಚ್ಛೆಗಿಂತ ಪ್ರಕೃತಿದತ್ತವಾದ ಹಿಡಿತವೇ ಕಾರಣವಾಗುತ್ತದೆ.

ಮನುಷ್ಯ ಜೀವಿಯೂ ಸ್ವಭಾವತಃ ಆತನ ಇಷ್ಟಾನಿಷ್ಟದಂತೆ ಬದುಕಲು ಅಪೇಕ್ಷಿಸುತ್ತಾನೆ. ಪ್ರಾಪಂಚಿಕ ನೆಲೆಯಲ್ಲಿ ತನ್ನ ಸ್ವಭಾವಕ್ಕೆ ಅನುಗುಣವಾಗಿ ವೃದ್ಧಿಯನ್ನು ಕಾಣುತ್ತಾನೆ. ತನ್ನ ಉಳಿವಿಗಾಗಿ ಅರಿಷಡ್ವರ್ಗಗಳೊಡನೆ ಬದುಕುತ್ತಾನೆ. ಈ ಅರಿಷಡ್ವರ್ಗವನ್ನು ಜೀವಕಾಮದ ಬಯಕೆಯೆಂದು ಕರೆಯುವುದು ಸಹಜ.

'ಪು.ತಿ.ನ ರವರು ಇದಕ್ಕೆ ಹೀಗೆ ಹೇಳಿದ್ದಾರೆ. "ಅರಿಷಡ್ವರ್ಗವನ್ನು ಜೀವಕಾಮದ ನೆಂಟ, ಸ್ವಭಾವದ ಬಂಧು ಎಂದರೂ ಸಂದಿತು"[೫೬] ಎನ್ನುತ್ತಾರೆ. ಮನುಷ್ಯನ ಬದುಕಿನಲ್ಲಿ ತಲೆದೋರುವ ಸುಖ–ದುಃಖ, ನೋವು–ನಲಿವು, ಸರಸ–ವಿರಸಗಳಿಂದ ದೊರಕುವ ಪ್ರಜ್ಞೆಯನ್ನು ಇವು ಹೆಚ್ಚಿಸುತ್ತವೆ. ಇದರಿಂದ ಉಂಟಾಗುವ ಬದುಕಿನ ಭೀಕರತೆಯಿಂದ ಮುಕ್ತಿಯೆಡೆಗೆ ಕರೆದೊಯ್ಯುತ್ತದೆ. ಇದನ್ನೇ ತಪಃ ಪ್ರವೃತ್ತಿಯೆಂದು ಪು.ತಿ.ನ ಇಲ್ಲಿ ಬಳಸಿದ್ದಾರೆ.

ಭವಸ್ತರದ ಆಸೆ–ಆಕಾಂಕ್ಷೆಗಳನ್ನು ಅಂಕುರಿಸುವ, ತಮ್ಮನ್ನು ತಾವು ಅರಿಷಡ್ವರ್ಗದ ತಾಪದಲ್ಲಿ ತೆತ್ತುಕೊಳ್ಳುವ ಫಲಾಪೇಕ್ಷಿಗಳಿಗೆ ತಪಸ್ವಿಗಳೆಂದು ಕರೆಯಲಾಗುವುದಿಲ್ಲ. ಭವದ ತುಡಿತ–ದುಡಿತಗಳೆಲ್ಲವೂ ಹೊಂದಿರುವ ಮಾನವ ಸಂಕುಲದಲ್ಲಿ ಜೀವಕಾಮವು ಯಥೇಚ್ಛವಾಗಿ ಕಂಡುಬರುತ್ತದೆ. ಆದರೆ 'ರಸ'ದ ಕಾಮನೆಯನ್ನು ಹೊಂದಿರುವವರು ತಪದ ಆಶ್ರಯವನ್ನು ಪಡೆಯುವಂಥವರು. ಏಕೆಂದರೆ ಈ ತಪದಿಂದಲೇ ಅವರಿಗೆ ಮೋಕ್ಷ. ಆ ಮೋಕ್ಷದಿಂದಲೇ ರಸಾನುಭವ ಎಂದು ಪು.ತಿ.ನ ಅಭಿಪ್ರಾಯ ಪಡುತ್ತಾರೆ.

ಮುಮುಕ್ಷುವನ್ನು "ರಸಸ್ತರಕ್ಕೇರಿಸುವ ಸಾಧನ ತಪಸ್ಸು, ರಸ–ವಿಹಾರ, ಅದರ ಸಿದ್ಧಿ"[೫೭] ಇಂಥ ಫಲಾಪೇಕ್ಷೆಯಿಲ್ಲದ ಯೋಗಿಯು ಲೋಕ ಸಂಗ್ರಹಕ್ಕಾಗಿ ತನ್ನನ್ನು ತಾನೇ ತೆತ್ತುಕೊಳ್ಳುವ ಮಹಾಪುರುಷನಲ್ಲಿ ಪರಿಣಿತಿಯನ್ನು ಪಡೆಯುವಂಥದು. ಅಂತಹ ಪಡೆಯುವಿಕೆಯೇ 'ರಸ' ಅದರಿಂದಲೇ ಮುಕ್ತಿಯ ಅಪೇಕ್ಷೆಯೂ ಕೂಡ ಎಂದು ಪು.ತಿ.ನ ಹೇಳುತ್ತಾರೆ.

ಆತ್ಮ ಎಂಬ ಪದವನ್ನು ಪು.ತಿ.ನ ಭಿನ್ನವಾಗಿ ವ್ಯಾಖ್ಯಾನಿಸುತ್ತಾರೆ. "ಆತ್ಮ ಎಂಬ ಮಾತು ನಮ್ಮನ್ನು ಬಹುತೊಡಕಿನಲ್ಲಿ ಸಿಕ್ಕಿಸುವಂಥ ಮಾತು. ಅದರ ಅರ್ಥವನ್ನು ನನ್ನೀ ಪ್ರಕರಣಕ್ಕೆ

ಸಂಬಂಧಿಸಿದಂತೆ ವಿಶದೀಕರಿಸುವುದು ಲೇಸು. ಆತ್ಮ ಎಂದರೆ ವ್ಯಕ್ತಿಯ ಪರಿಣತಿ ಮತ್ತು ಪರಿಷ್ಕೃತ ಸ್ವಭಾವದ ಸರ್ವಾದರಣೀಯಾಂಶ. ಸರ್ವ ಗ್ರಾಹ್ಯಾಂಶ ಸರ್ವಹೃದಯಂಗಮಾಂಶ ಹಾಗೂ ಇತರ ಸ್ವಭಾವಗಳಿಗೂ ಆತ್ಮ ಪರಿಣತಿಯನ್ನು ತರುವ ಚಿತ್ ಊರ್ಜಾಂಶ"[೫೮] ಎಂದು ಆತ್ಮ ಭೂಯಿಷ್ಠವಾದ ಪ್ರಜ್ಞೆಗೆ ಒಳಪಟ್ಟಿರುವ ಯಾವುದೇ ವಸ್ತುವು ರಸವನ್ನು ಉದ್ಭವಿಸುತ್ತದೆ. ಭವ ಜಾಗರದಾವಸ್ಥೆಯ ಅನುಭವಗಳೆಲ್ಲವೂ ರಸಪ್ರಜ್ಞೆಗೆ ಒಂದು ವಿಶಿಷ್ಟವಾದ ಆಸ್ವಾದನೆಯನ್ನು ನೀಡುತ್ತದೆ. ಏಕೆಂದರೆ ಆತ್ಮದ ಪ್ರಜ್ಞೆಯಲ್ಲಿ ಈ ಅನುಭವಿಯೂ ಪಕ್ವನಾಗಿರುತ್ತಾನೆ. ರಸಾನುಭವದಲ್ಲಿ ಮುಂದಿರುತ್ತಾನೆ. ಈ ಅನುಭವವಿಲ್ಲದವನಿಗೆ ಅದು ತೊಡಕಿನ ಪ್ರಶ್ನೆಯಾಗಿರುತ್ತದೆ. ಇದನ್ನು ಪು.ತಿ.ನ. ರವರು ಈ ಉದಾಹರಣೆಯ ಮೂಲಕ ಸ್ಪಷ್ಟಪಡಿಸುತ್ತಾರೆ. "ಈಜು ಕಲಿಯುವವನಿಗೆ ಸಂಕಟಗೊಳಿಸುವ ಜಾಗ, ಈಜು ಕಲಿತವನಿಗೆ ವಿಹಾರಕ್ಷೇತ್ರ. ಹಾಗೆಯೇ ರಸಪ್ರಜ್ಞನಿಗೆ ಈ ಲೋಕ ತುಂಬ ಸ್ವಾರಸ್ಯವಾದ ಜಾಗ"[೫೯]

ನಂತರ ಪು.ತಿ.ನ ಭವಿಗೂ ಮತ್ತು ರಸಸ್ಥನಿಗೂ ಇರುವ ವ್ಯತ್ಯಾಸವನ್ನು ತಿಳಿಸುತ್ತಾರೆ. ಇಹದ ಆಸೆಗಳನ್ನು ಹೊತ್ತವನೇ ಭವಿ. ಪ್ರಾಪಂಚಿಕ ಸುಖಗಳು, ಆತನ ಸ್ವಂತ ಯೋಗಕ್ಷೇಮ ಬದುಕುವ ಹಂಬಲ, ಪ್ರೀತಿ–ದ್ವೇಷ, ಅಹಂಕಾರ, ಮಮತೆ, ಸತ್ಯ, ಶಿವ, ಸುಂದರವೆಂಬ ಜ್ಞಾನದ ಅಭಿಲಾಷೆಯನ್ನು ತಾಳದೆ ತನ್ನ ಸುಖಕಾಮನೆಗಳಿಗೆ ಸೀಮಿತನಾದವನೇ ಭವಿ. ಆದರೆ ರಸಜ್ಞನೂ ಇದಕ್ಕೆ ತದ್ವಿರುದ್ಧವೆಂದರೆ ತಪ್ಪಾಗಲಾರದು. ಆತ ಸ್ವಭಾವ ಮುಕ್ತ, ಲೋಕದ ಜಂಜಾಟ, ತಾಕಲಾಟಗಳು ಹಾಗೂ ಜೀವಕಾಮದ ಬಯಕೆಯನ್ನು ನಿಯಂತ್ರಿಸಿ ಅರಿಷಡ್ವರ್ಗಗಳನ್ನು ಹತೋಟಿಯಲ್ಲಿಡಬಲ್ಲನು. ಆತನ ಸ್ವಭಾವ ಶಾಂತ, ಭವದಲ್ಲಿ ನಡೆಯುವ ಸ್ವಭಾವಗಳಿಗೆ ಅನುಗುಣವಾಗಿ ತನ್ನ ನೈಜಸಂವೇದನೆಗಳನ್ನು ಅನುಸರಿಸಿ ವಿಸ್ಮಿತನಾಗುತ್ತಾನೆ. ಅನುರಾಗಯುಕ್ತನಾಗುತ್ತಾನೆ. ಹೀಗೆ ಇಂಥ ರಸಪ್ರಜ್ಞೆವುಳ್ಳವನಿಗೆ ಬದುಕಿನ ಯಾವ ಅಂಶವೂ ನೀರಸವಲ್ಲ. ಇದು ಇಂಥ ರಸಪ್ರಜ್ಞೆಯುಳ್ಳ ರಸಾನುಭವಿಗೆ ಮಾತ್ರ ಸಾಧ್ಯ ಎಂದು ಪು.ತಿ.ನ ಭವಿಗೂ–ರಸಜ್ಞನಿಗೂ ಇರುವ ವ್ಯತ್ಯಾಸವನ್ನು ವಿವರವಾಗಿ ಈ ಭಾಗದಲ್ಲಿ ತಿಳಿಸಿದ್ದಾರೆ.

ಭವಸ್ತರದಲ್ಲಿ ನಾವು ಆ ದೇಶ ಕಾಲಗಳ ಪರಿಸರಕ್ಕೆ, ಲೋಕಾನುಭವಿಗಳಿಗೆ, ಬದುಕಿನ ತುಡಿತಕ್ಕೆ, ಆಸೆಗಳಿಗೆ, ಭಯ–ಆತಂಕಗಳಿಗೆ, ಪ್ರಾಣಶಕ್ತಿಯ ಸೆಳೆತಕ್ಕೆ ಅನುಗುಣವಾಗಿ ನಡೆಯುತ್ತೇವೆ. ಆದರೆ ರಸಸ್ತರದಲ್ಲಿ ಸ್ವತಂತ್ರವಾಗಿ, ಧೈರ್ಯವಂತರಾಗಿ, ಉದಾರವಾಗಿ ಮತ್ತು ಬಂಧಮುಕ್ತರಾಗಿ ಆತ್ಮಶಕ್ತಿಗೆ ಅನುಸಾರವಾಗಿ ಸಾಗುವುದೇ ಇದರ ಸ್ವಭಾವ.

ಭವಸ್ತರದಲ್ಲಿ ವ್ಯಕ್ತಿ ಪಕ್ಷಪಾತಿ, ಪ್ರತಿಷ್ಠೆಕಾಮಿ, ಶೀಘ್ರದುಃಖಿ, ಉದ್ರೇಕಶೀಲತೆ, ಮೋಹ, ಆದರೆ ರಸಪ್ರಜ್ಞನೂ ಧರ್ಮ, ನ್ಯಾಯ, ವಿನಯಶೀಲತೆ, ಸಾಕ್ಷಿ, ಪಕ್ಷಪಾತರಹಿತ, ಅಸಂತೋಷಿ ಶಾಂತ ಮೌಲ್ಯಗಳ ಶ್ರದ್ಧೆ, ಅಂತಃಶುಚಿತ್ವ ಅಂದರೆ ಅಂತರಶುದ್ಧಿಯನ್ನು ಪಡೆದಿರುತ್ತಾನೆ. ಆದ್ದರಿಂದ ಅವನಿಗೆ

ಸತ್ಯ, ಶಿವ, ಸೌಂದರ್ಯಗಳ ಸ್ಪರ್ಶ ಉಂಟಾಗುತ್ತದೆ. ಇದು ಅವನ ಗುಣಗಳಿಂದ ಆತನಿಗೆ ದೊರೆಯುವ ಒಂದು ರಸಾನುಭವ. ಇದೇ ಪ್ರಜ್ಞೆಯೂ ಕೂಡ.

ರಸಪ್ರಜ್ಞೆಯು ಹಲವು ಆತ್ಮಸಂವೇದನೆಗಳಿಗೆ ನಮ್ಮನ್ನು ಒಳಪಡಿಸುತ್ತದೆ. ಮೃಗತ್ವದಿಂದ ಮಾನವೀಯಗುಣಗಳತ್ತ ನಮ್ಮನ್ನು ಜಾಗೃತಗೊಳಿಸುವುದೇ ಈ ಪ್ರಜ್ಞೆ, ಈ ಪ್ರಜ್ಞೆಯು ಜೀವಕಾಮನೆಗಳಿಗಿಂತ ತೀರಭಿನ್ನವಾದದ್ದು. ರಸಪ್ರಜ್ಞೆಯ ಮುಖ್ಯ ಲಕ್ಷಣಗಳೆಂದರೆ ಇಂದ್ರಿಯಗಳು, ಚುರುಕಾದ ಬುದ್ಧಿ, ಸಮಾಧಾನದಿಂದ ಕೂಡಿದ ತಣ್ಣ ಮನಸ್ಸು ಎಂದು ಪು.ತಿ.ನ ಹೇಳುತ್ತಾರೆ. ಭವಜಾಗರದಲ್ಲಿ ನಡೆಯುವ ಎಲ್ಲ ವಸ್ತುಕ್ರಿಯೆಗಳಿಗೆ ರಸಸ್ಥನು ತನ್ನ ರಸಪ್ರಜ್ಞೆಗೆ ಒಳಪಡಿಸಿ ಸುವ್ಯವಸ್ಥಿತವಾದ ಒಂದು ಆತ್ಮ ಸಂವೇದನೆಗಳನ್ನು ಹೊರಗೆಳೆಯುತ್ತಾನೆ. ಇದು ಭವಸ್ತರದಲ್ಲಿ ಬರಲು ಸಾಧ್ಯವಿಲ್ಲ. ಏಕೆಂದರೆ ಅವರೇ ಹೇಳುವಂತೆ ಈ ವಾಕ್ಯಗಳನ್ನು ಇಲ್ಲಿ ಗಮನಿಸಬಹುದು.

**"ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾಇವ".**

ಮಹಾವಿಜ್ಞಾನಿಗೂ, ಮಹಾದಾರ್ಶನಿಕ ಯೋಗಿಗೂ ಲಭಿಸುವ ಈ ದರ್ಶನ ಭಾಗ್ಯ. ಈ ಪ್ರಜ್ಞೆ ಭವಸ್ತರದಲ್ಲಿ ಮೂಡದು ಎಂದು. ರಸಜಾಗರದ ಸಂವೇದನೆಗಳು ಸೂಕ್ಷ್ಮವು, ಸಂಕೀರ್ಣವೂ ಮತ್ತು ಬಹುಗಾಢವೂ ಆಗಿರುತ್ತದೆ.



ರಸಪ್ರಜ್ಞೆ ಭವ ಪ್ರಜ್ಞೆಗೆ ಒಂದು ಎಚ್ಚರಿಕೆಯ ಮಾತನ್ನು ಹೇಳುವ ಈ ಗೀತ ವಾಕ್ಯಗಳನ್ನು ಸೂಕ್ಷ್ಮವಾಗಿ ಬಳಸುತ್ತಾರೆ ಪು.ತಿ.ನ

**ಇಂದ್ರಿಯಸ್ಯೇಂದ್ರಿಯಸ್ಯಾರ್ಥೇ ರಾಗದ್ವೇಷಾ ವ್ಯವಸ್ಥಿತೌ**
**ತಯೋರ್ನ ವಶಮಾಗಚ್ಚೇತ್ ತೌಹ್ಯಸ್ಯ ಪರಿಪಂಥಿನೌ**
**ರಾಗದ್ವೇಷ ವಿಮುಕ್ತೈಸ್ತು ವಿಷಯಾನಿಂದ್ರಿಯೈಶ್ವರನ್**
**ಆತ್ಮ ವಶ್ಯೈರ್ವಿಧೇಯಾತ್ಮಾ ಸ ಶಾಂತಿಮಧ್ಧಿಗಚ್ಛತಿ.**

[ಇಂದ್ರಿಯ ಇಂದ್ರಿಯಗಳಿಗೆ ತಮ್ಮ ವಿಷಯಗಳಲ್ಲಿ ರಾಗವೋ–ದ್ವೇಷವೋ ಏರ್ಪಟ್ಟು ಹೋಗಿದೆ. ಅವುಗಳ ಕೈಗೆ ನಾವು ಸಿಕ್ಕಿಹಾಕಿಕೊಳ್ಳಬಾರದು. ಅವು ನಮ್ಮನ್ನು ದಾರಿಗೆಡಿಸುತ್ತವೆ. ರಾಗದ್ವೇಷಗಳನ್ನು ಒತ್ತಟ್ಟಿಗಿಟ್ಟು ತಾನು ಹೇಳಿದಂತೆ ಕೇಳುವ ಇಂದ್ರಿಯಗಳ ಮೂಲಕ ಯಾವನು ವಿಷಯಗಳಲ್ಲಿ ಸಂಚರಿಸಬಲ್ಲನೋ ಆತ ಮನಸ್ಸಮಾಧಾನವನ್ನು ಹೊಂದಬಲ್ಲ ಎಂಬುದೇ ಇದರ ತಾತ್ಪರ್ಯ]

ಪ್ರಾಪಂಚಿಕ ಸುಖವನ್ನು ಬಿಟ್ಟು ಶಾಂತ ಮನಸ್ಕನಾಗಿ, ಲೋಭ, ಮೋಹ, ಮದ, ಮಾತ್ಸರ್ಯಗಳ ಲಾಲಸೆಯನ್ನು ತೊರೆದು ತನ್ನ ಸುಪ್ತ ಜಾಗರದಲ್ಲಿ ಆತ್ಮತೃಪ್ತನಾಗಲು ರಸಪ್ರಜ್ಞೆಯನ್ನು ಪಡೆಯುವವನೇ ರಸಾನುಭವಿ. ಆದರೆ ಸಾಮಾಜಿಕ, ಸಾಂಸ್ಕೃತಿಕ ಹಿಡಿತಕ್ಕೆ ಒಳಗಾಗಿ ಜೀವಕಾಮನೆ ತೊರೆಯದೆ ಅಂತಹ ನಿರ್ಮಲ ಮನಸ್ಸು ಪಡೆಯುವವರು ಜಗತ್ತಿನಲ್ಲಿ ಬಹಳ ಕಡಿಮೆ. ಆದರೆ

ಅಂತಃಕರಣ ಶಾಂತವೂ, ಶುದ್ಧವೂ ಆಗದೇ ಅವರು ಆಧ್ಯಾತ್ಮ ಸುಖವನ್ನು ಕೂಡ ಸರಿಯಾಗಿ ಪಡೆಯಲಾರರು. ಇದಕ್ಕೆ ಕನಕದಾಸನ ಈ ಹಾಡಿನಲ್ಲಿರುವ ಮಾನವನ ಬಯಕೆಗಳ ಹಾತೊರೆಯುವಿಕೆಯನ್ನು ಇಲ್ಲಿ ಪು.ತಿ.ನ ತರುತ್ತಾರೆ.

**ಎಲ್ಲಾರು ಮಾಡುವುದು ಹೊಟ್ಟೆಗಾಗಿ, ಗೇಣುಬಟ್ಟೆಗಾಗಿ,**

**ತುತ್ತು ಹಿಟ್ಟಿಗಾಗಿ ವೇದಶಾಸ್ತ್ರ ಪಂಚಾಂಗ ಓದಿಕೊಂಡು ಪರ**

**ರಿಗೆ ಬೋಧನೆಯ ಮಾಡುವುದು ಹೊಟ್ಟೆಗಾಗಿ ಗೇಣುಬಟ್ಟೆಗಾಗಿ**

ಎಲ್ಲವೂ ಬದುಕಿಗಾಗಿ–ಅದುವೇ ಸುಖಕರವಾದ ಬದುಕಿನ ಅಪೇಕ್ಷೆಗಾಗಿ ಎಂದು ಇದರ ಅರ್ಥ.

"ರಸಪ್ರಜ್ಞೆ ಸ್ವಕೇಂದ್ರ ಮುಕ್ತಿಯಿಂದ ಮಾತ್ರ ಲಭಿಸತಕ್ಕ ಪ್ರಜ್ಞೆ"[೬೦] ಎನ್ನುತ್ತಾರೆ ಪು.ತಿ.ನ. ಮನುಷ್ಯನು ತನ್ನ ಸ್ವಾರ್ಥಪ್ರಜ್ಞೆಯನ್ನು ಎಷ್ಟರಮಟ್ಟಿಗೆ ಕಡಿಮೆಗೊಳಿಸಿದ್ದಾನೆ ಅಥವಾ ಅದರಿಂದ ಮುಕ್ತನಾಗಿದ್ದಾನೆ ಎಂಬ ಚಿಂತನೆಯಿಂದಲೇ ಆತನ ಬೆಲೆಯನ್ನು ನಿರ್ಧರಿಸಬಹುದು. ಮನುಷ್ಯ ತನ್ನ ಜೀವಕಾಮದ ಬಯಕೆಗಳನ್ನು ತಗ್ಗಿಸಿದಾಗ ಮಾತ್ರ ಆತನಿಗೆ ನೆಮ್ಮದಿ ಮತ್ತು ಸಂತೋಷಗಳೆರಡು ಲಭಿಸುವುದು ಸಾಧ್ಯ.

ರಸಜಾಗರ ಯಾವಾಗ, ಹೇಗೆ, ಏಕೆ, ಸಾಧ್ಯವಾಗುತ್ತದೆ ಎಂಬುದನ್ನು ಹೇಳಲು ಸಾಧ್ಯವಿಲ್ಲ. ಅದು ಆತ್ಮಕ್ಕೆ ಸಂಬಂಧಿಸಿದ್ದು. ಇಂದ್ರಿಯಾನುಗ್ರಹಣೆಗೆ ಬರುವಂಥದ್ದೇ ಈ ರಸಜಾಗರ. ರಸವು ನಮಗೆ ನಿದ್ರಾವಸ್ಥೆಗಿಂತ ಪ್ರಜ್ಞಾವಸ್ಥೆಯಲ್ಲಿ ಅಂದರೆ ಜಾಗ್ರದಾವಸ್ಥೆಯಲ್ಲಿ ಮೂಡುತ್ತದೆ. ಏಕೆಂದರೆ "ಪ್ರಜ್ಞೆ ಜಾಗ್ರದಾವಸ್ಥೆಯಲ್ಲಿ ಪುರುಷನನ್ನು ಪ್ರಕೃತಿಯಿಂದ ಭಿನ್ನೈಸುತ್ತದೆ. ವಿಷಯವನ್ನು ವಿಷಯದಿಂದ ಪ್ರತ್ಯೇಕಿಸುತ್ತದೆ. ವಿಶ್ವ ಬೇರೆ ಎನ್ನುತ್ತದೆ, ಆತ್ಮ ಬೇರೆ ಎನ್ನುತ್ತದೆ"[೬೧] ಈ ಒಂದು ಚಿಂತನೆ, ಪ್ರಜ್ಞೆ ಮೂಡುವುದೇ ಜಾಗರಪ್ರಜ್ಞೆಯ ಮೂಲದಲ್ಲಿ.

ಇಂದ್ರಿಯಗಳಿಂದ ದೊರೆಯುವ ಕೆಲಸಗಳು ಮೂಲತಃ ಅದು ಮನೋಬುದ್ಧಿ ಮತ್ತು ಹೃದಯಗಳೆಂಬ ಪ್ರಜ್ಞಾಂಗಗಳ ಅಭಿಲಾಷೆಯಿಂದ ಬರುವಂಥಹದ್ದು. ವ್ಯಕ್ತಿ ಇವುಗಳನ್ನು ತನ್ನ ಪ್ರಾಕೃತಿಕವಾದಂತಹ ಚಲನವಲನಗಳಿಂದ ನೆರವೇರಿಸುತ್ತಾನೆ. ತನ್ನ ಸುತ್ತ ಮುತ್ತಲಿನ ವಾತಾವರಣ, ತನ್ನ ಮನೆ, ತನ್ನ ಊರು, ತನ್ನ ಪ್ರಾಪಂಚಿಕ ಜಗತ್ತಿನಿಂದ ಕೂಡಿದ ಅನುಭವಗಳೆಲ್ಲವನ್ನೂ ದಾಟಿ, ತನ್ನ ಶುದ್ಧಸಂವೇದನೆಗಳನ್ನು ಪಡೆದು ನಂತರ ತನ್ನ ಆತ್ಮೋಪಾಸನೆಯಲ್ಲಿ ಈ ಭಾವನೆಗಳನ್ನು ವಿಸ್ತರಿಸಿ ಅದನ್ನು ಲೋಕಕ್ಕೂ ವಿಸ್ತರಿಸುತ್ತಾನೆ. ಇದು ಆತನ ಪ್ರೌಢಪ್ರಜ್ಞೆಯಿಂದಲೇ ವ್ಯಕ್ತವಾಗುವಂಥಹ ಅಂಶ.

ಪ್ರಜ್ಞೆಯೂ ಕೆಲವು ಸಲ ಪ್ರಕೃತಿದತ್ತವಾದ ಕೊಡುಗೆಯಾಗಿದೆ. ಈ ಪ್ರಕೃತಿಯ ಕೊಡುಗೆಯೇ ಆನಂದ ಮತ್ತು ಜ್ಞಾನಸಂಪಾದನೆ. ತರ್ಕಕ್ಕೆ, ಜಿಜ್ಞಾಸೆಗೆ ಒಳಪಡಿಸದೇ ಕೆಲವು ಅಂಶಗಳು ನಮಗೆ ಪ್ರಕೃತಿ ಸಹಜವಾಗಿಯೇ ಬರುತ್ತದೆ. ಜೀವಕಾಮಿಯಾದವನು ಈ ಪ್ರಕೃತಿಯಿಂದಾಗುವ ತನ್ನ ಸುಖದುಃಖಗಳಿಗೆ

ಕಾರಣವಾದ ಅಂಶಗಳನ್ನು ಹುಡುಕಿದರೆ "ರಸಪ್ರಜ್ಞನೋ ಈ ಮುದ್ದು ಮುಳಿಸುಗಳನ್ನು ಆಕೆಯ ಪ್ರಣಯದ ರೂಪಗಳೆಂದೇ ಭಾವಿಸಿ ಆನಂದಿಯಾಗುತ್ತಾನೆ"[೬೨] ಎನ್ನುತ್ತಾರೆ ಪು.ತಿ.ನ. ಇಂತಹ ಆನಂದಪ್ರಜ್ಞೆಯನ್ನು ರಸಜ್ಞನೂ ತಪಸ್ಸಿನಿಂದ ಪಡೆಯುತ್ತಾನೆ. 'ತಪಸ್ಸು' ಎಂದರೆ ತನ್ನ ಸ್ವ ಇಚ್ಛೆಯಿಂದ ಭವಸ್ತರದ ಮುಕ್ತಿಯನ್ನು ಅಪೇಕ್ಷಿಸುವವನಿಗೆ ಇಂಥ ರಸಪ್ರಜ್ಞೆಯೂ ಲಭಿಸುತ್ತದೆ. ಉದಾ:-ಬುದ್ಧ, ರಾಮನಂತಹ ವ್ಯಕ್ತಿತ್ವದ ಉದಾಹರಣೆಯನ್ನು ಪು.ತಿ.ನ ನೀಡುತ್ತಾರೆ. "ತಮ್ಮನ್ನು ತಾವು ತಮ್ಮ ನೈಜಭಾವದಲ್ಲಿ ಲೋಕಕ್ಕೆ ತೆತ್ತುಕೊಳ್ಳುವ ಪ್ರಯತ್ನವನ್ನಲ್ಲವೇ? ನಾವು ಕಲೋಪಾಸಕರಲ್ಲಿ ಕಾಣುವುದು"[೬೩]ಇಂತಹ ತಪಸ್ವಿತೆ ಕಲೆಗಾರನಿಗಿರಬೇಕೆಂಬುದೇ ಈ ವಾಕ್ಯದ ಧ್ವನಿ.

ಪ್ರತಿಭೆ ಎಂದರೆ ಅದೊಂದು ಪ್ರಜ್ಞೆ, ಆ ಸ್ಥಿತಿಯಲ್ಲಿ ಮನಸ್ಸಿಗೆ ಹೊಸ ಹೊಸ ಅರ್ಥಗಳು ಹೊಳೆಯುತ್ತವೆ. ಹಾಗೆಯೇ ಹೊಳೆದ ಆ ಹೊಸ ಹೊಸ ಅರ್ಥಗಳು, ಹೊಸ ಹೊಸ ಮಾತುಗಳಲ್ಲಿ ಉಲ್ಲೇಖಿತವಾಗುತ್ತದೆ. ಹೀಗೆ ಅಪೂರ್ವವಾದ ವಸ್ತುವನ್ನು ನಿರ್ಮಾಣ ಮಾಡುವ ಸಾಮರ್ಥ್ಯವೇ ಪ್ರತಿಭೆ"[೬೪] ಪು.ತಿ.ನ ಬುದ್ಧಿಗೂ ರಸಸ್ಥನದ ಅನುಭೂತಿಗೂ ಪ್ರತಿಭೆ ಎಂದು ಕರೆಯುತ್ತಾರೆ. "ರಸಸ್ತರದಲ್ಲಿ ಪ್ರಜ್ಞೆ ಪಡೆದ ಅನುಭೂತಿಗಳನ್ನು ವಿಷಯಿಕರಿಸುವ ಅಥವಾ ಮೂರ್ತಗೊಳಿಸಿ ತನ್ನ ಮತ್ತು ಇತರ ಮನೋಬುದ್ಧಿ ಹೃದಯಗಳಿಗೆ ಗ್ರಾಹ್ಯವಾಗುವಂತೆ ಮಾಡುವ ಕುಶಲ ಬುದ್ಧಿಯ ವಿಲಸನವೇ ಪ್ರತಿಭೆ. ರಸಪ್ರಜ್ಞಾನುಭೂತಿಯ ಮೂರ್ತಿಕರಣವೇ ಪ್ರತಿಭೆಯ ಕೆಲಸ ರಸೋರ್ಜಾ ಪ್ರಸರಣ ಮಾಧ್ಯಮ ಅದು"[೬೫] ಎಂದು ಅವರು ವಿವರಿಸುತ್ತಾರೆ. ಅಂದರೆ ಪ್ರಜ್ಞೆಯಿಂದ ಹೊರಹೊಮ್ಮಿದ ರಸಭರಿತವಾದ ಅನುಭವಗಳನ್ನು ಭಾವತುಂಬಿ ಅಭಿವ್ಯಕ್ತಿಗೊಳಿಸುವುದೇ ಪ್ರತಿಭೆ.

ಪ್ರಜ್ಞೆಯ ಒಳರಚನೆಯಲ್ಲಿ ಪ್ರತಿಭೆಯೂ ಸ್ವತಂತ್ರವಾಗಿ ಬೆಳೆದುಬರುತ್ತದೆ. ರಸಸ್ತರದಲ್ಲಿನ ಅನುಭೂತಿಗಳನ್ನು ನಮ್ಮ ಚಿತ್ತಕ್ಕೆ ಸ್ಪರ್ಶವಾಗುವ ಗುಣ ಈ ಪ್ರತಿಭೆಗೆ ಇರುತ್ತದೆ. ಅಂತಹ ಆನಂದ ನೀಡುವ ರಸಪ್ರವಾಹ ವಾಲ್ಮೀಕಿ ರಾಮಾಯಣದಲ್ಲಿದೆ ಎಂದು ಹೇಳುತ್ತಾರೆ ಪು.ತಿ.ನ

ವಾಲ್ಮೀಕಿ ರಾಮಾಯಣದ ಬಾಲಕಾಂಡದಲ್ಲಿ ಬರುವ ಕ್ರೌಂಚಪಕ್ಷಿಗಳ ಈ ಪ್ರಸಂಗವನ್ನು ಕವಿ ಪು.ತಿ.ನ ಇಲ್ಲಿ ಪ್ರತಿಭೆಯ ಗುಣಕ್ಕೆ ಉದಾಹರಣೆಯಾಗಿ ಬಳಸಿದ್ದಾರೆ. ಬೇಡನೊಬ್ಬ ಕ್ರೌಂಚ ಮಿಥುನದಲ್ಲಿ ಒಂದನ್ನು ಹೊಡೆದು ಕೆಡವಿದ್ದಾನೆ. ಅದು ತನ್ನ ರಕ್ತದಲ್ಲಿ ತೊಯ್ದು ನೆಲದ ಮೇಲೆ ಹೊರಳಾಡುತ್ತಿದೆ. ಮೇಲೆ ಜತೆ ಹಕ್ಕಿ ಆಕ್ರಂದಿಸುತ್ತಿದೆ. ರಸಜಾಗರದಲ್ಲಿದ್ದ ಮುನಿಯ ಪ್ರಜ್ಞೆಗೆ ಹೀಗೆ ಅನಿರೀಕ್ಷಿತವಾಗಿ ಭವಸ್ತರದ ಆಘಾತ ಒದಗಿತು.

ಈ ನೋಟ ಮತ್ತು ಆ ಕೂಗು ಮುನಿಯ ಮನಸ್ಸು ಕರಗಿಸಿ ಕರುಣೆಯನ್ನು ಹುಟ್ಟಿಸಿತು. ವ್ಯಾಧನ ಕರ್ಮ ಅಧರ್ಮ ಎನಿಸಿತು.

"ಮಾ ನಿಷಾದ ಪ್ರತಿಷ್ಠಾಂ ತ್ವಮಗಮಶ್ಯಾಶ್ವತೀಃ ಸಮಾಃ
ಯತ್ ಕ್ರೌಂಚ ಮಿಥುನಾದೇಕಮವಧೀಃ ಕಾಮಮೋಹಿತು"

"ತಾವು ಶೋಕದಿಂದ ಉದ್ಗರಿಸಿದ ತಮ್ಮ ಆ ಮಾತೇ ಅದರ ಛಂದೋಬದ್ಧ ರೂಪವೇ, ಅವರ ಧ್ಯಾನಕ್ಕೆ ವಿಷಯವಾಗಿ ಆಶ್ಚರ್ಯವನ್ನು ತರುತ್ತದೆ. ಕೈಗೆ ಅನಿರೀಕ್ಷಿತವಾಗಿ ಸಿಕ್ಕಿದ್ದು ಕಲ್ಲಲ್ಲ ರತ್ನವೆಂಬುದು ಪರಾಮರ್ಶಕನಿಗೆ ಸ್ವಲ್ಪ ಹೊತ್ತಿನ ಮೇಲೆ ತಿಳಿಯುವಂತೆ ಈ ಶ್ಲೋಕದ ಸ್ವಾರಸ್ಯವೆಲ್ಲ ಅದರ ಛಂದಸ್ಸಿನಲ್ಲಿದೆ"[೬೬] ಪು.ತಿ.ನ ರವರು ಈ ಇಡೀ ಪ್ರಸಂಗವನ್ನಿಲ್ಲಿ ಬಳಸಿರುವುದು ಔಚಿತ್ಯವೇ ಸರಿ. ಏಕೆಂದರೆ ಕವಿಯ ಮನಸ್ಸಿನಲ್ಲಾದ ತಲ್ಲಣ, ಸಂವೇದನೆಗಳು ಇಂಥ ರಾಮಾಯಣದಲ್ಲಿ ಬರುವ ಹಲವು ಪ್ರಸಂಗಗಳ ಸಂವೇದನೆಗಳಿಗೆ ಮೂರ್ತರೂಪವನ್ನು ತಂದುಕೊಟ್ಟಿತು. ಸ್ಥಾಯಿಭಾವವೇ ಇಲ್ಲಿ ಪ್ರಧಾನವಾಗಿ ಕಂಡುಬರುತ್ತದೆ.

"ವಿಪುಲ ಸಂವೇದನೆಗಳುಳ್ಳ ಎಲ್ಲ ಕವಿಗಳ ಮನಸ್ಸಿನಲ್ಲೂ ಕಾವ್ಯವುದಿಸುವುದು ಇಂಥ ರಸಜಾಗರದ ನಿರ್ಮಲಪ್ರಜ್ಞೆಯ ಅಮೃತಗಳಿಗೆಯಲ್ಲಿ. ರಸಸ್ತರದ ಸಂವೇದನೆಗಳೆಲ್ಲ ಹೀಗೆ ಬಹುಸಾಂದ್ರ, ಬಹು ಸಂಕೀರ್ಣ. ಅವುಗಳನ್ನಾರಿಸಿಕೊಂಡು ಪ್ರತಿಭೆಸ್ಥಾಯಿಗೆ ಸಂಚಾರಿಭಾವಗಳ ಅಂಗಾಂಗಗಳನ್ನು ರಚಿಸುತ್ತದೆ. ಕವಿಯ ವ್ಯುತ್ಪತ್ತಿಯ ಕಣಜಕ್ಕೆ ಮುತ್ತಿಗೆ ಹಾಕಿ, ತನ್ನ ಮಹಾಕಾವ್ಯದ ಸ್ಥಾಯಿಭಾವವನ್ನು ಪಡೆದ ಮೇಲೆ ಇನ್ನು ಮುನಿಗೆ ಉಳಿದುದು ಅದನ್ನು ನಿರಂತವಾಗಿ ತನ್ನ ಎಲ್ಲ ಅಂಶಗಳಲ್ಲೂ ಧ್ವನಿಸುವ ವಿಭಾವಾನುಭಾವ ಸಂಚಾರಿಭಾವಗಳ ನಿರ್ಮಾಣ"[೬೭] ಇಂಥ ಜಾಗರಿಕೆಯಲ್ಲಿ ಹೊರಟ ಮಾತೆಲ್ಲ ಕಾವ್ಯ ಎನ್ನುತ್ತಾರೆ ಪು.ತಿ.ನ

ಈ ಒಟ್ಟು ಪ್ರಸಂಗವನ್ನು ಇಲ್ಲಿ ಬಳಸಿರುವ ಉದ್ದೇಶ ಏನೆಂದರೆ ಇಲ್ಲಿ ಬರುವ ಸಂವೇದನೆಗಳಿಗೆ ಕವಿ ಸ್ಪಂದಿಸುವ ಗುಣ ಹಾಗೂ ಭವಜಾಗರದಲ್ಲಿ ಉದ್ಭವಿಸಿದ ಸಂವೇದನೆಗೂ, ಕವಿಯು ತನ್ನ ಪ್ರಜ್ಞೆಯ ಮೂಲಕ ಪಡೆಯುವ ಸಂವೇದನೆಗಳಿಗೂ ತನ್ನ ರಸಸ್ತರದಲ್ಲಿ ಈ ಎರಡಕ್ಕೂ ಪ್ರಜ್ಞೆಯ ಚೌಕಟ್ಟನ್ನು ಒದಗಿಸಿ ಅರಿವು ಮೂಡಿಸುತ್ತಾನೆ. ಈ ಅರಿವಿನಿಂದಾಗಿ ವ್ಯಕ್ತವಾಗುವ ವಿಷಯವೇನೆಂದರೆ ಅಹಿಂಸೆಯ ತೀವ್ರತೆ ಮತ್ತು ಪ್ರಕೃತಿ ಚೆಲುವಿನ ಸೊಬಗು. ಈ ಎರಡು ಸ್ಥಿತಿಗಳನ್ನು ಪಡೆಯುವುದು ಕೇವಲ ಒಂದು ರಸಸ್ಥ ಪ್ರಜ್ಞೆಯಿಂದ ಮಾತ್ರ. ಕವಿಯಾದವನು ಇಂತಹ ರಸಪ್ರಜ್ಞೆಯನ್ನು ಪಡೆದವನಾಗಿರಬೇಕೆಂಬುದೇ ಪು.ತಿ.ನ ಅವರ ನಿಲುವು.

ಹೀಗೆ ರಾಮಾಯಣದಂತಹ ಈ ಮಹಾಪ್ರಸಂಗಗಳಲ್ಲಿ ಮಾನವನ ಜೀವಕಾಮ ಸ್ತರದಲ್ಲೇ ಬರುವ ಜೀವನದ ನೋವು-ನಲಿವು, ಸುಖ-ದುಃಖಗಳಲ್ಲಿಯೇ ಒಂದು ಸತ್ಯದ ದರ್ಶನವಿದೆ. ಈ ದರ್ಶವೂ ಜಿಜ್ಞಾಸೆಯುಕ್ತ ಕವಿ ಮನಸ್ಸಿಗೆ ಸಾಧ್ಯವಾಗುತ್ತದೆ. ಇದಕ್ಕೆ ಇಲ್ಲಿ ಬರುವ ಪಾತ್ರಚಿತ್ರಣಗಳಲ್ಲಿರುವ ಸಂವೇದನಾ ಪ್ರವೃತ್ತಿಯೇ ಸಾಕ್ಷಿ. ಇವುಗಳಿಂದ ದೊರಕುವ ಸಂವೇದನಾಕ್ರಿಯೆಯೂ ವಿಭಿನ್ನವಾದುದು.

ಕಾವ್ಯಾದಿಗಳಲಿ ಇಂತಹ ಸಂವೇದನೆಗಳು ನಮ್ಮ ಇರವಿನ ಸತ್ಯವನ್ನು ನಾವು ಕಾಣಬಹುದು. ಇದಕ್ಕೆ ಪು.ತಿ.ನ ಹೀಗೆ ಹೇಳುತ್ತಾರೆ. "ಕಾವ್ಯಾದಿಗಳಲ್ಲಿ ನಾವು ಕಂಡುಕೊಳ್ಳಬೇಕಾದುದು ನಮ್ಮ ಅರಿವಿನ ಸತ್ಯವನ್ನು, ಆತ್ಮಸಾಕ್ಷಾತ್ಕಾರ ಸ್ಥಲ ಅದು, ಎಂದರೆ ನಿರ್ಭಾದವಾಗಿ ನಮ್ಮ ನಿಜವನ್ನು ನಾವು ಪಡುವಿಕೆಯ ಮೂಲಕ ತಿಳಿದುಕೊಳ್ಳುವ ಸ್ಥಲ ಅದು. ಇದನ್ನೇ ನಾವು ಸಾಧಾರಣೀಕರಣತತ್ವ ಎನ್ನುವುದು"[೬೮] ಇದರಿಂದ ವ್ಯಕ್ತಗೊಳ್ಳುವ ಅಂಶವೆಂದರೆ ಈ ಸಂವೇದನೆಗಳಿಂದ ನಮ್ಮ ಆತ್ಮಪ್ರಜ್ಞೆಯನ್ನು ಜಾಗೃತಗೊಳಿಸುವುದೇ ಈ ರಸಪ್ರಜ್ಞೆ.

ಪು.ತಿ.ನ ರವರು 'ಧರ್ಮವೀರ್ಯ' ಎಂಬ ಪದವನ್ನು ಇಲ್ಲಿ ಬಳಸುತ್ತಾರೆ. ರಸಪ್ರಕಾರದ ಎಲ್ಲ ಅಂಶಗಳನ್ನು ಸುಪ್ತರೀತಿಯಲ್ಲಿ ಒಳಗೊಂಡ ಪದಯಿದು. ಕವಿಯ ಕಾವ್ಯದಲ್ಲಿ ತರಬಹುದಾದ ಅಥವಾ ತರಬೇಕಾದಂತಹ ಪ್ರಾಮಾಣಿಕತೆ, ತಾತ್ವಿಕ ಜಿಜ್ಞಾಸೆಗೆ, ರಸಪ್ರಜ್ಞೆಗೆ ಕಾವ್ಯಕಲಾಸಿದ್ಧಿಗೆ ಇದು ಅವಶ್ಯಕ. ರಾಮಾಯಣದಲ್ಲಿ ಈ ಪದದ ಅರ್ಥವನ್ನುಳ್ಳ ಶ್ಲೋಕಗಳನ್ನು ಪು.ತಿ.ನ ಇಲ್ಲಿ ಉದಾಹರಿಸುತ್ತಾರೆ.

**ಹಸಿತಂ ಭಾಷಿತಂ ಚೈವ ಗತಿರ್ಯಾವಚ್ಚ ಚೇಷ್ಟಿತಂ।**

**ತತ್ಸರ್ವಂ ಧರ್ಮವೀರ್ಯೇಣ ಯಥಾವತ್ ಸಂಪ್ರಪಶ್ಯಸಿ॥**

ಕವಿ ತನ್ನ ಕಾವ್ಯ ಪ್ರತಿಭೆಯಿಂದಾಗಿ ಒಂದು ಭಾವಮಯ ವಸ್ತುವನ್ನು ತರುತ್ತಾನೆ. ಆ ಭಾವಮಯ ವಸ್ತುವಿನಲ್ಲಿ ಸತ್ಯ ಮತ್ತು ಸೌಂದರ್ಯದ ಮೂರ್ತರೂಪವನ್ನು ತರುವುದು ಆತನ ರಸಪ್ರಜ್ಞೆಯೇ. ಈ ರಸಪ್ರಜ್ಞೆಯ ಅರಿವು ಮೂಡುವುದು ಕವಿ ಬಳಸುವ ಶಬ್ದಗಳ ಜೋಡಣೆ ಮತ್ತು ಅದಕ್ಕೆ ತಕ್ಕ ಛಂದಸ್ಸಿನಿಂದ. ಹೀಗೆ ಒಂದು ಕಾವ್ಯವು ರಸಾನುಭವವನ್ನು ನೀಡುವುದರಲ್ಲಿ ಸಾರ್ಥಕತೆಯನ್ನು ಪಡೆದಿರುತ್ತದೆ.

ರಸಪ್ರಜ್ಞೆಯು ಒಂದು ಇಂದ್ರಿಯಾನುಭೂತಿಗಳ ಮೂಲಕ ದೊರೆಯುವಂಥಹದ್ದು. ನಾಟಕಗಳಲ್ಲಿ ನಾವು ಕಾಣುವ ಪ್ರೀತಿ, ಭಯ, ಆಕ್ರೋಶ, ರಾಗದ್ವೇಷಗಳು ಮತ್ತು ಜೀವಕಾಮದ ತುಡಿತ ಇವುಗಳೆಲ್ಲವನ್ನೂ ಆ ರಸಪ್ರಜ್ಞೆಯೂ ಇಂದ್ರಿಯಾಗಳ ಮುಷ್ಟಿಯಲ್ಲಿ ಒಂದು ಕಡೆ ಹಿಡಿದಿಡುತ್ತದೆ. ಏಕೆಂದರೆ ಲೌಕಿಕ ಮಾಯೆಯನ್ನು ತಡೆಹಿಡಿಯುವ ಶಕ್ತಿ ಈ ರಸಪ್ರಜ್ಞೆಗೆ ಇದೆ. ಇದನ್ನು ಪು.ತಿ.ನ ಹೀಗೆ ಹೇಳುತ್ತಾರೆ.

"ಲೌಕಿಕೋದ್ವೇಗಗಳಿಂದ ಬಾಧೆಗೊಳಗಾಗದಿರುವ ಸಂಸಾರ ಕೌಶಲರಸಪ್ರಜ್ಞೆಗೆ ಮಾತ್ರ ಉಂಟು. ಎಂಥಹ ಲೌಕಿಕೋದ್ವೇಗಳನ್ನಾದರೂ ಅದು ತನ್ನ ವಶಮಾಡಿಕೊಂಡು ಆಡಿಸಿತೋರಿಸಬಲ್ಲದು"[೬೯]

ಮನುಷ್ಯನ ಸಾಮಾಜಿಕ, ಸಾಂಸ್ಕೃತಿಕ ನಡೆಗೆ, ಬುದ್ಧಿಗೆ, ಭಾವನೆಗಳಿಗೆ, ಜ್ಞಾನಕ್ಕೆ, ಸಂಪ್ರದಾಯದ ನಡೆಗೆ ಕಲ್ಪಗಳು ಅಗತ್ಯ. ಇಂತಹ "ಕಲ್ಪಗಳು ಬುದ್ಧಿಯ ತಲ್ಪ"ಎನ್ನುತ್ತಾರೆ ಪು.ತಿ.ನ. ಇದು ಕೂಡ ರಸಪ್ರಜ್ಞೆಯ ಮಹತ್ವವಾದ ಸೃಷ್ಟಿ ಎಂದು ಅವರು ಅಭಿಪ್ರಾಯ ಪಡುತ್ತಾರೆ.

"ಕಾವ್ಯ ರಸಾನುಭವದ ಜೊತೆಗೆ, ಧರ್ಮ, ಅರ್ಥ, ಕಾಮಮೋಕ್ಷಗಳೆಂಬ ಪುರುಷಾರ್ಥಗಳು ಸಾಧಿತವಾಗುತ್ತವೆ ಎಂಬ ಮಾತನ್ನು ನಮ್ಮ ಅಲಂಕಾರಿಕರು ಮತ್ತೆ ಮತ್ತೆ ಹೇಳಿದ್ದಾರೆ"[೨೦] ಹೀಗೆ ಪು.ತಿ.ನ ರವರು ಕೂಡ ವಿಜ್ಞಾನಿಗೂ, ರಸಸ್ತನಿಗೂ ಇರುವ ವ್ಯತ್ಯಾಸವನ್ನು ಹೇಳುತ್ತಾ ಮಾನವ ಬದುಕಿಗೆ ನೆಮ್ಮದಿಯನ್ನು, ಭಯಮುಕ್ತ ಸ್ವಭಾವವನ್ನು, ಸಾಮಾಜಿಕ ಹಿತಾಸಕ್ತಿಯನ್ನು ಮೂಡಿಸಬೇಕಾದರೆ ನಮ್ಮ ಧರ್ಮ, ಅರ್ಥ, ಕಾಮದ ಕ್ಷೇತ್ರದಲ್ಲಿ ಇವರು ಪ್ರಜ್ಞೆಯನ್ನು ಮೂಡಿಸಬೇಕು. ಈ ಪ್ರಜ್ಞೆಯ ಜಾಗರಸ್ಥಿತಿಯೂ ಒಬ್ಬ ರಸಪ್ರಜ್ಞನಿಂದ ಸಾಧ್ಯವೇ ಹೊರತು ವಿಜ್ಞಾನಿಯಿಂದಲ್ಲ. ಏಕೆಂದರೆ ರಸಪ್ರಜ್ಞನೊ ವಿಜ್ಞಾನಿಯಂತೆ ಭೋಗ ತೃಷೆಯುಳ್ಳವನಲ್ಲ, ವಿರಕ್ತನೂ, ಲೋಭ, ಮೋಹ, ಭಯಗಳಿಂದ ಮುಕ್ತನಾದವನೂ, ಸ್ವಾರ್ಥನಲ್ಲ. ಆತ ತಪಶ್ಶೀಲ. ಆದ್ದರಿಂದ ಲೋಕದ ಅನಿಷ್ಟಗಳ ನಿವಾರಣೆ ಆತನಿಂದಲೇ ಸಾಧ್ಯ ಎನ್ನುತ್ತಾರೆ ಪು.ತಿ.ನ.

ಮಾನವನ ದೃಷ್ಟಿಕೋನಗಳು ಬೆಳೆಯುತ್ತಾ ಆತನ ರಸಪ್ರಜ್ಞೆಯೂ ಕೂಡ ಇಂದು ಕುಂಠಿತವಾಗುತ್ತಿದೆ. ಎಲ್ಲವನ್ನು ಇಂದು ತಾಂತ್ರಿಕದೃಷ್ಟಿಕೋನದಿಂದ ಅಳೆಯುವ ಜಾಯಮಾನ ಆತನದ್ದಾಗಿದೆ. ಆದರೆ ಇಂತಹ ಅನಾಹುತಗಳನ್ನು ಆಗಾಗ ತಡೆಯುವುದು ರಸಪ್ರಜ್ಞೆ. ಮನುಷ್ಯನಲ್ಲಿ ಧರ್ಮಪ್ರಜ್ಞೆ, ಆಧ್ಯಾತ್ಮಿಕತೆ, ಮುಕ್ತಿ, ಬಿಡುಗಡೆಗಳಂತಹ ಒಂದು ಸೈದ್ಧಾಂತಿಕ ಜ್ಞಾನವನ್ನು ಸಂವೇದ್ಯವಾಗಿ ಈ ರಸಪ್ರಜ್ಞೆಯೂ ನಮಗೆ ನೀಡುತ್ತದೆ. ಅವುಗಳನ್ನು ಜಿಜ್ಞಾಸೆಗೆ ಒಳಪಡಿಸುತ್ತದೆ.

ಇದರಿಂದ ಆತ್ಮಕಾಮನೆಗಳು ನಾಶವಾಗಿ ಮನುಷ್ಯ ಆತ್ಮಸ್ವಾತಂತ್ರ್ಯದ ಮೊರೆಹೋಗುತ್ತಾನೆ. ಶುದ್ಧ ಮನಸ್ಕನಾಗುತ್ತಾನೆ. ಇದು "ಶುದ್ಧಮನಸ್ಸಿನಿಂದ ಜನರ ಸತ್ಕರ್ಮದಲ್ಲಿ ಬೆರೆದು ಅವರ ಶ್ರದ್ಧೆಯನ್ನು ಉತ್ಸಾಹವನ್ನು ಹೆಚ್ಚಳಿಸುವುದು ನಿರಹಂಕಾರಿಗಳಾದ ರಸಪ್ರಜ್ಞನಿಗೆ ಮಾತ್ರ ಸಾಧ್ಯ"[೨೧] ಎನ್ನುತ್ತಾರೆ ಪು.ತಿ.ನ.

ರಸಪ್ರಜ್ಞೆಯು ಮಾನವನ ಸಾಮಾಜಿಕ ಪರಿಸರದಂತೆ ಸುಪ್ತವಾಗಿಯೋ, ಮಂದವಾಗಿಯೋ ನಡೆಯುತ್ತಿರುತ್ತದೆ. ಆದರೆ ಅದನ್ನು ವೃದ್ಧಿಸುವ ಶ್ರೇಯಸ್ಸು ಇಂಥ ರಸಪ್ರಜ್ಞೆಯುಳ್ಳ ಸತ್ಪುರುಷರಿಗೆ ಸಲ್ಲುತ್ತದೆ. ಇವುಗಳ ಸಾಧನ ತಂತ್ರಗಳು ಬೇರೆಯಾದರೂ, ದೊರೆಯುವ ಫಲವೊಂದೇ ಅದುವೇ ಸಂತೋಷ, ಆನಂದ.

ಪು.ತಿ.ನ ರಸಪ್ರಜ್ಞೆಯ ವಿಚಾರವನ್ನು ಎಳೆಎಳೆಯಾಗಿ ಹೇಳುತ್ತಾ ಇಂದಿನ ಸಾಹಿತ್ಯ ಕ್ಷೇತ್ರದಲ್ಲಿ ಈ ರಸಾನುಭವ ದಿನದಿನವೂ ಕುಂಠಿತಗೊಳ್ಳುತ್ತಿರುವುದರ ಬಗ್ಗೆ ಚಿಂತಿಸುತ್ತಾರೆ. ನಮ್ಮ

ಸಾಹಿತ್ಯದ ಒಲವು ಇಂದು ಆಧುನಿಕತೆಯತ್ತ ಅಭಿವೃದ್ಧಿಯತ್ತ 'ಪಾಶ್ಚಾತ್ಯ ಸಂಸ್ಕೃತಿಯತ್ತವಾಲುತ್ತಿದೆ. ಇಂದು ಇಂಗ್ಲೀಷ್ ಸಾಹಿತ್ಯವೂ ನಮಗೆ ಪೂರಕವಾಗದೇ ಮಾರಕವಾಗುತ್ತಿದೆ. ಆರ್ಥಿಕ, ಸಾಂಸ್ಕೃತಿಕ ದಾಸ್ಯತನಕ್ಕೆ ಒಳಗಾಗಿ ಸಾಹಿತ್ಯ ಇಂದು ರಸಹೀನವಾಗಿದೆ.

ವೈಜ್ಞಾನಿಕತೆ, ತಂತ್ರಜ್ಞಾನ, ರಾಜಕೀಯತೆ ಮತ್ತು ಪ್ರಗತಿ ಎಂಬ ಅಂಶಗಳು ತಲೆದೋರಿ ಮಾನವ ರಸಹೀನನಾಗಿದ್ದಾನೆ. ಸಂಪ್ರದಾಯಿಕತೆ, ಸಂಸ್ಕೃತಿ, ಸಂಸ್ಕಾರದ ಶುದ್ಧತೆಗಳನ್ನು ಇಂದು ಭ್ರಷ್ಟಗೊಳಿಸುತ್ತಿದ್ದಾನೆ. ಮಾನವ ಮಾನವೀಯ ಮೌಲ್ಯಗಳನ್ನು ಕಳೆದುಕೊಂಡು ಮೃಗನಾಗುತ್ತಿದ್ದಾನೆ ಎಂದು ಹೇಳಿ ಈ ಮಾತನ್ನು ಅತ್ಯಂತ ದುಃಖಿತರಾಗಿ ನುಡಿಯುತ್ತಾರೆ. "ಮಾನವ ರಸಿಕನಾಗುತ್ತಿಲ್ಲ, ಪ್ರೇಮಿಷ್ಠನಾಗುತ್ತಿಲ್ಲ, ಉಲ್ಲಾಸಯುಕ್ತನೂ ಆಗುತ್ತಿಲ್ಲ"[೨]

ರಸಹೀನನಲ್ಲಿ ರಸಜಾಗರಗೊಳಿಸುವುದು, ಆತನ ಧರ್ಮ-ನೀತಿ ವಿಷಯಗಳಲ್ಲಿ ಚೇತನವನ್ನು ತುಂಬುವುದು, ಭಾವ ಸಂವೇದನಾತ್ಮಕ ಪ್ರವೃತ್ತಿಯನ್ನು ಬೆಳೆಸುವುದು ಒಬ್ಬ ರಸಪ್ರಜ್ಞನಿಂದಲೇ ಸಾಧ್ಯ. ಏಕೆಮದರೆ "ರಸ ಪ್ರಜ್ಞೆಯ ಧ್ಯೇಯ ಆತ್ಮಸಾಕ್ಷಾತ್ಕಾರ"[೨೩] ಎನ್ನುತ್ತಾರೆ ಪು.ತಿ.ನ. ಅಂದರೆ ಆಧುನಿಕತೆಯತ್ತ ಸಾಗುತ್ತಿರುವ ಮಾನವ ಪ್ರವೃತ್ತಿಯನ್ನು ನಿಯಂತ್ರಿಸುವ ಶಕ್ತಿ ಇಂಥ ಆತ್ಮತತ್ತ್ವೋಪಾಸಕರಿಗಿರುತ್ತದೆ. ಎನ್ನುವುದೇ ಇವರ ನಿಲುವು.

ಭಯ, ಆತಂಕಗಳಿಂದ ತುಂಬಿದ ಬದುಕಿಗಿಂತ ಆನಂದ, ತೃಪ್ತಿ ನೆಮ್ಮದಿಯನ್ನು ನೀಡುವ ಬಾಳ್ವೆಯೇ ಉತ್ತಮ. ಅದಕ್ಕೆ ಉತ್ತಮ ದಾರಿ ಎಂದರೆ ರಸಪ್ರಜ್ಞೆ, ಹೀಗೆ ಇದರಿಂದ ಒದಗುವ ಆತ್ಮಸುಖವನ್ನು ಕುರಿತು ಮಾತನಾಡುವಾಗ ಪು.ತಿ.ನ ಹೀಗೆ ಹೇಳಿದ್ದಾರೆ. "ರಸಪ್ರಜ್ಞೆಯ ಚಾಲಿತಶಕ್ತಿ ಸ್ವಕೇಂದ್ರ ಮುಮುಕ್ಷತೆ, ಬಿಡುಗಡೆ, ಸ್ವಾತಂತ್ರ್ಯ, ಪ್ರೀತಿ, ಉಲ್ಲಾಸ, ಆನಂದ, ಇದರಸಿದ್ಧಿ, ಶ್ರೇಷ್ಠಜೀವನ"[೨೪]

ವ್ಯಕ್ತಿಯ ಬದುಕಿನ ಚಲನೆಗೆ ಆತ್ಮಕಾಮನೆಗಳಿಗೆ ನೆಮ್ಮದಿಯ ಬದುಕು ಅತ್ಯಾವಶ್ಯಕ. ಹೇಗೆ ಶುದ್ಧಗಾಳಿ, ನೀರು, ಆಹಾರ ಇವು ಆರೋಗ್ಯಕರವಾದ ದೇಹಕ್ಕೆ ಸೂತ್ರವೋ, ಹಾಗೆಯೇ ರಸಪ್ರಜ್ಞೆ ಎಂಬ ಸೂತ್ರವೂ ಕೂಡ ಆತನ ಸುಖ-ಶಾಂತಿಯುಕ್ತ ಬದುಕಿಗೆ ಅನಿವಾರ್ಯ. ಈ ಪ್ರಜ್ಞೆ ನಮ್ಮ ಧರ್ಮಪ್ರಜ್ಞೆ, ನೀತಿಪ್ರಜ್ಞೆ, ಮತ್ತು ತಾತ್ವಿಕ ಪ್ರಜ್ಞೆ ಹಾಗೂ ಸಂವೇದನೆಗಳ ಕಾರ್ಯಕಾರಿಣಿ ಸಂಬಂಧಗಳ ಅರಿವನ್ನು ಮೂಡಿಸುತ್ತದೆ. ಜೀವನದ ವಿಧಿ ನಿಷೇಧಗಳಿಗೆ ಸದಾ ಎಚ್ಚರಿಕೆಯನ್ನು ನೀಡುತ್ತದೆ ಈ ರಸಪ್ರಜ್ಞೆ. ಸಂವೇದನೆ, ಸಂಸ್ಕೃತಿ, ಸಂಪ್ರದಾಯ, ಧರ್ಮನಿಷ್ಠೆ, ಪ್ರಾಮಾಣಿಕತೆ, ನಿಸ್ವಾರ್ಥತನ, ಸುಖ, ನೆಮ್ಮದಿ, ಸಂತೋಷವೆಲ್ಲವನ್ನು ಉಂಟುಮಾಡುವ ಈ ರಸಪ್ರಜ್ಞೆಯ ಕುರಿತು ಬಹು ಉತ್ಸಾಹಿಯಾಗಿ ಮಾತನಾಡುವ, ಹೆಮ್ಮೆ ಪಡುವ ಕವಿ ಪು.ತಿ.ನ ಮತ್ತೊಂದು ಕಡೆ ಪ್ರಚೋದನಾತ್ಮಕ, ಪ್ರತಿಭಟನಾತ್ಮಕ ಸಾಹಿತ್ಯಸೃಷ್ಟಿಯಿಂದಾಗಿ, ಆಧುನಿಕತೆ, ತಂತ್ರಜ್ಞಾನ, ಔದ್ಯೋಗಿಕ ಶ್ರೀಮಂತರುಗಳ ಜಾಲಕ್ಕೆ ಸಿಕ್ಕಿ ರಸಪ್ರಜ್ಞೆ ಮರೆಯಾಗುತ್ತಿರುವುದರ ಬಗ್ಗೆ ತೀವ್ರ ವಿಷಾದವನ್ನು ವ್ಯಕ್ತಪಡಿಸಿದ್ದಾರೆ.

ಹೀಗೆ ಕಾವ್ಯದಲ್ಲಿ ರಸಪ್ರಜ್ಞೆಯು ಮಾಡುವ ಕಾರ್ಯಗಳು, ಅದರಿಂದಾಗುವ ಪ್ರಯೋಜನಗಳು ಹಾಗೂ 'ರಸಪ್ರಜ್ಞೆ'ಯ ಸ್ಥಾನ, ಅದರ ಔಚಿತ್ಯ, ಎಲ್ಲವನ್ನೂ ಕುರಿತು ಪು.ತಿ.ನ ಇಲ್ಲಿ ವಿವರವಾಗಿ ವಿಶ್ಲೇಷಣಾತ್ಮಕವಾಗಿ ಚರ್ಚೆ ಮಾಡಿದ್ದಾರೆ.

**ಉ) ಕಾವ್ಯ ಮತ್ತು ಇತರ ಶಿಸ್ತುಗಳು:-**

ಕಾವ್ಯದ ನಡೆಯು ಅದರ ಶಿಸ್ತುಬದ್ಧವಾದ ಛಂದಸ್ಸಿನಲ್ಲಿದೆ. ಛಂದಸ್ಸು ಪದಗಳ ಜೋಡಣೆಯ ಕ್ರಮವು ಕಾವ್ಯಕ್ಕೆ ಒಂದು ಅಂದವನ್ನು ನೀಡುತ್ತದೆ. "ಕಾವ್ಯದಲ್ಲಿ ನಾವು ಪಡೆವ ಆನಂದಾಂಶ ಅತರ್ಕ್ಯವೂ, ಅನಿರೀಕ್ಷಿತವೂ ಆದ ಅದರ ಛಂದೋಲಹರಿಗಳಲ್ಲಿ ನೆಲೆಗೊಂಡಿದೆ"[೭೫] ಎಂದು ಪು.ತಿ.ನ ಅಭಿಪ್ರಾಯಪಡುತ್ತಾರೆ. ಕಾವ್ಯದ ಪರಿಣಾಮವನ್ನು ಸಹೃದಯದರಲ್ಲಿ ಮೂಡುವಂತೆ ರಚಿಸಲು ಕವಿಯಾದವನು ಅದಕ್ಕೆ ತಕ್ಕ ಛಂದಸ್ಸನ್ನು ಪಡೆಯಬೇಕು.

ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಒತ್ತಾಸೆಗಳು ಬದಲಾದಂತೆ ಕಲೆ, ಕಾವ್ಯ, ವಿನ್ಯಾಸ, ಛಂದೋರೂಪಗಳಲ್ಲಿಯೂ ಆ ಬದಲಾವಣೆ ಕಂಡುಬರುತ್ತದೆ. ರಸವನ್ನು ಅಭಿವ್ಯಕ್ತಿಸುವ ಕಾವ್ಯಗಳು ಬಹುವಿರಳ. ಆದುದರಿಂದ ಇಂಥ ರಸಭರಿತವಾದ ಕವಿತೆಗಳಲ್ಲಿ ಸ್ವಚ್ಛಂದ ಛಂದೋರೂಪಗಳು ಬಹುಮುಖ್ಯ. ಹಾಗಾಗಿ ಕಾವ್ಯದ ಚಲನೆಗೆ, ಸಹೃದಯರಲ್ಲಿ ಬೆರಗನ್ನು ಹುಟ್ಟಿಸಲಿಕ್ಕೆ ಛಂದಸ್ಸು ಕೂಡ ಒಂದು ಶಿಸ್ತು.

ಕಾವ್ಯಗಳಿಂದ ನಾವು ಪಡೆಯುವುದು ಭವಸ್ತರದ ಅನುಭವಗಳ ಸಾಕ್ಷಾತ್ಕರಣವನ್ನು ಎಂದು ಪು.ತಿ.ನ ಅಭಿಪ್ರಾಯ ಪಡುತ್ತಾರೆ. ಕಾವ್ಯದಲ್ಲಿ ನೀತಿಬೋಧಕ ವಾಕ್ಯಗಳು, ಪ್ರಾಸಂಗಿಕವಾಗಿ, ರಸಾಗತವಾಗಿಯೂ ಬರುವುದು ಉಚಿತ. ಆದರೆ ಕಾವ್ಯದ ಇಡೀ ಪ್ರಯೋಜನಗಳೇ ಅವು ಎಂಬಂತೆ ನೀತಿಬೋಧಗಳೇ ಪ್ರಧಾನವಾಗಿರಬಾರದು. ನೀತಿಬೋಧೆಯೂ ಕಾವ್ಯದ ರಸಸ್ಥಿತಿಗೆ ತಕ್ಕಂತೆ ಹಿತಮಿತವಾಗಿದ್ದರೆ ಕಾವ್ಯದ ಶ್ರೇಯಸ್ಸಿಗೆ ಮೂಲಕಾರಣ.

ಇದಕ್ಕೆ ಉದಾಹರಣೆಯಾಗಿ ಪು.ತಿ.ನ. ರವರ ಈ ಮಾತುಗಳನ್ನು ಗಮನಿಸಬಹುದು. "ಕ್ಷೀರಾನ್ನದಲ್ಲಿ ಸಿಕ್ಕುವ ಗೋಡಂಬಿ-ದ್ರಾಕ್ಷಿ-ಬಾದಾಮಿಗಳಂತೆ, ಪೊಂಗಲ್‌ನಲ್ಲಿ ಸಿಕ್ಕುವ ಮೆಣಸಿನಕಾಳಿನಂತೆ, ಭಕಾಳಬಾತಿನಲ್ಲಿನ ಹಸಿಮೆಣಸಿನಕಾಯಿ ಮತ್ತು ಹಸಿಶುಂಠಿಯ ಚೂರುಗಳಂತೆ, ಇವೆಲ್ಲ ಆಯಾ ಅನ್ನಗಳಲ್ಲಿ ಮಿತವಾಗಿ ರುಚಿವಿನೀತವಾಗಿದ್ದರೆ ಹಿತ. ಇಲ್ಲದಿದ್ದರೆ ಅಗ್ನಿಮಾಂದ್ಯವಿಲ್ಲದವನು ತಿಂಡಿಗೆ ಬದಲು ಬರಿ ಬಾಣಂತಿಯ ಖಾರವನ್ನು ತಿಂದತಾಗುತ್ತದೆ"[೭೬]

ಧರ್ಮ, ಅರ್ಥ, ಕಾಮಗಳು ಇವು ಜೀವಕಾಮದ ಬಯಕೆ. ಕವಿ ತನ್ನ ಸಮೃದ್ಧಸ್ಥಿತಿಯನ್ನು ಕಾಣುವುದು ರಸಸ್ಥ ಭಾವದಲ್ಲಿ. ಧರ್ಮ-ನೀತಿಬೋಧವಾಕ್ಯಗಳು ನಮ್ಮ ಜೀವಕಾಮದ ಪರಿಧಿಯಲ್ಲಿಯೇ ನೆಲೆಸುವಂತೆ ಮಾಡುತ್ತದೆ. ಆದುದರಿಂದ ಅವು ಪ್ರಧಾನವಾಗಿರದೆ ಒಂದು ಸುಪ್ತರಸ

ಪ್ರಜ್ಞೆಯಲ್ಲಿಯೇ ಜಾಗೃತಗೊಳಿಸುವಂತಿದ್ದರೆ ಧರ್ಮಕ್ಕೂ-ನೀತಿಗೂ ಯಾವುದೇ ರೀತಿಯ ಚ್ಯುತಿ ಉಂಟಾಗದು.

ಧರ್ಮ, ನೀತಿ, ಮತಗಳಿಗಾಗಿಯೇ ಹೊರಟ ಕಾವ್ಯಗಳಿಂದ ರಸಸ್ತರದ ಪ್ರಧಾನವಾದ ಅಂಶಗಳು ಅಷ್ಟಾಗಿ ಬರುವುದಿಲ್ಲ. ಇವು ಹೆಚ್ಚಾಗಿ ಭವಸ್ತರದ, ವ್ಯವಹಾರಿಕ ಹಾಗೂ ಜೀವಕಾಮನೆಗಳ ಅಪೇಕ್ಷೆಯಿಂದ ಹೊರಟವುಗಳಾದ್ದರಿಂದ ಹೆಚ್ಚಾಗಿ ಇವು ಲೌಕಿಕ ಭಾವ ಪ್ರಸಾರಗಳಾದವುಗಳು. ಹಾಗೆಯೇ ರಸಸ್ತರದ ಕಾವ್ಯವೂ ಕೂಡ ಆಧ್ಯಾತ್ಮಿಕ ಮೌಲ್ಯದಲ್ಲಿ ಧಾರ್ಮಿಕ, ನೈತಿಕ, ಕಾವ್ಯಗಳಿಗಿಂತಲೂ ಕಡಿಮೆಯಲ್ಲ. ಅಂದರೆ ಕಾವ್ಯದಲ್ಲಿ ವಸ್ತು ಯಾವುದೇ ಆಗಿರಲಿ ಅದು ನಮ್ಮ ಮೌಲ್ಯಗಳಿಗೆ ಧಕ್ಕೆ ತರುವುದಿಲ್ಲ. ಹಾಗೆಯೇ ನೀತಿಬೋಧೆಯೂ ಅದರದ್ದೇ ಒಂದು ಅಂಗ. "ಒಟ್ಟಿನಲ್ಲಿ ಕಾವ್ಯದಲ್ಲಿ ನಾವು ಅಪೇಕ್ಷಿಸುವುದು ಜ್ಞಾನಭಾವವಾಗಿ ಪರಿಣಮಿಸುವ ಸೋಜಿಗವನ್ನು; ತದ್ವಿಪರೀತ ವೃತ್ತಿಯನ್ನಲ್ಲ"[೨೨] ಹೀಗೆ ಒಂದು ಕಾವ್ಯವೂ ಇಂಥಹ ಜೀಗಗುಣವನ್ನು ಹಾಗೂ ರಸಸೋಪಾನ ಚೇತನವನ್ನು ತುಂಬುವಂತಹದ್ದಾಗಿರಬೇಕು ಎಂದು ಪು.ತಿ.ನ ಅಪೇಕ್ಷಿಸುತ್ತಾರೆ. ಕಾವ್ಯದ ಲಯ, ಪದಬಂಧ, ಅದರವಸ್ತು, ಶಬ್ದಗಳ ಜೋಡಣೆ ಇವು ಕಾವ್ಯ ರಚನಾ ವಿಧಾನಕ್ಕೆ ಮೂಲ ಸಾಮಗ್ರಿಗಳು. ಅದನ್ನೇ ಸೌಂದರ್ಯ ಎಂತಲೂ ಕರೆಯುತ್ತೇವೆ. "ಸೌಂದರ್ಯವೆಂಬ ಮಾತಿಗೆ ಅಲಂಕಾರ' ಎಂಬ ಮಾತು ಬರುತ್ತದೆ"[೨೮] ಎಂದು ಪು.ತಿ.ನ ಅಭಿಪ್ರಾಯ ಪಡುತ್ತಾರೆ. ಅಲಂಕಾರ ಎಂದರೆ ಶೃಂಗರಿಸುವುದು ಎಂದರ್ಥವೂ ಇದೆ. ಇದು ಔಚಿತ್ಯವಾಯುಕ್ತ ಬುದ್ಧಿಪೂರ್ವಕ ಮನಸ್ಸಿನಿಂದಲೇ ಸಾಧ್ಯ.

"ಔಚಿತ್ಯವಿಲ್ಲದೆ ಸಮವಾಯವಿಲ್ಲ; ಸಮವಾಯವಿಲ್ಲದೆ ಸಾಮರಸ್ಯವಿಲ್ಲ, ಸಾಮರಸ್ಯವಿಲ್ಲದೆ ಭಾವೋದಯವಾಗದು, ಭಾವೋದಯವಾಗದೇ ಸೌಂದರ್ಯಬೋಧೆಯೂ ಆಗದು. ಹೀಗೆ ಸೌಂದರ್ಯದ ಪರಮ ಸಾಧನ ಔಚಿತ್ಯ"[೨೯] ಕವಿಯು ತನ್ನ ಬುದ್ಧಿಯ ಗುಣದಿಂದ ಹಾಗೂ ಅದಕ್ಕೆ ತಕ್ಕ ಪ್ರತಿಭೆಯಿಂದ ಕಾವ್ಯದಲ್ಲಿ ಸೌಂದರ್ಯವನ್ನು ತರುವ ಪ್ರಯತ್ನವನ್ನು ನಡೆಸುತ್ತಾನೆ.

ವ್ಯಕ್ತಿಗೆ ದೊರಕುವ ಯಾವುದೇ ವಸ್ತುವಿನಿಂದಾದರೂ ಆತ ಸೌಂದರ್ಯವನ್ನು ಗ್ರಹಿಸಬಲ್ಲ. ಇದಕ್ಕೆ ಶಾಂತವೂ, ನಿರ್ಮಲವೂ ಆದ ಚಿತ್ತದ ಅವಶ್ಯಕತೆ ಹೆಚ್ಚಾಗಿರುತ್ತದೆ. ಅಂತಹ ಶಾಂತಚಿತ್ತ ಸ್ವಭಾವ, ಆತ್ಮಸಂಬೋಧನೆ ಮತ್ತು ಲೋಭ, ಮೋಹದೂರನು ಆದ ಕವಿಯಿಂದಲೇ ಸಾಧ್ಯ. "ಬುದ್ಧಿ ರಸಸ್ಥನ ಆತ್ಮಕ್ಕೆ ಅಡಿಯಾಳಾಗಿ ಆಯಾ ವಸ್ತುಗಳನ್ನು ತನ್ನ ಸೌಂದರ್ಯ ಮೌಲ್ಯವನ್ನು ವೃದ್ಧಿಸಲು ಪ್ರೇರೇಪಿಸುತ್ತದೆ.

ಕಾವ್ಯದಲ್ಲಿ ಸೌಂದರ್ಯಾನುಭೂತಿಯನ್ನು ತರುವ ಕವಿಗೆ ಎರಡು ಕೌಶಲಗಳಿರಬೇಕೆನ್ನುತ್ತಾರೆ ಪು.ತಿ.ನ. ಅವುಗಳೆಂದರೆ "ಶುದ್ಧ ಬುದ್ಧ ನಿಯುಕ್ತ ಸ್ವಭಾವ, ಸಂಪಾದನ, ಕೌಶಲ ಮತ್ತು ಆಯಾವಸ್ತುಗಳ ಸ್ವಭಾವಕ್ಕೆ ಭಂಗತಾರದೇ ಅವುಗಳು ಭಾವಕರವಾಗುವಂತೆ ಮಾಡುವ

ಪರಿಷ್ಕರಣ ಕೌಶಲ"[೮೦] ಉದಾ:-ಗರುಡನ ವಿಗ್ರಹವನ್ನೇ ತೆಗೆದುಕೊಳ್ಳೋಣ. ಅದರ ಸೊಟ್ಟಮೂಗಿಗೆ ಬದಲಾಗಿ ಮನುಷ್ಯನ ಮೂಗನ್ನು ನೆಟ್ಟರೆ ಅದು ವಿಕಾರವಾಗಿ ಕಾಣುತ್ತದೆ. ಅದ್ದರಿಂದ ವಸ್ತುವಿನ ಸ್ವಭಾವಕ್ಕೆ ಅನುಗುಣವಾಗಿ ಸೌಂದರ್ಯಾನುಭೂತಿಯನ್ನು ಪಡೆಯಬೇಕು. ಆಗ ಕಾವ್ಯಕ್ಕೆ ಒಂದು ಸೌಂದರ್ಯ ಲಭಿಸಿದಂತೆ ಎನ್ನುತ್ತಾರೆ ಪು.ತಿ.ನ

ಕಾವ್ಯದಲ್ಲಿ ದೊರಕುವ ಆನಂದ ಅಲೌಕಿಕವಾದದ್ದು. ಅದನ್ನು ಭವದಲ್ಲಿ ಪಡೆಯುವುದು ಕಷ್ಟ. ಅಂತಹ ಅಲೌಕಿಕ ಆನಂದವನ್ನು ತರಲು ಒಬ್ಬ ಭಾವುಕನು, ಕಲಾನಿಪುಣನು, ರಸಸಂಪನ್ನನೂ, ಭವವಿರಕ್ತನೂ ಆದ ಕವಿಯಿಂದ ಮಾತ್ರ ಸಾಧ್ಯ. ಇದನ್ನು ಪು.ತಿ.ನ ಇಲ್ಲಿ ಸೊಗಸಾಗಿ ಅಭಿವ್ಯಕ್ತಿಸುತ್ತಾರೆ. "ಸೌಂದರ್ಯವೆಂಬುದು ಅಲೌಕಿಕವಾದ ಮೌಲ್ಯವಾದುದರಿಂದ, ಅದು ಭವಸ್ತರದಲ್ಲಿ ದುರ್ಲಭವಾದುದರಿಂದ ವಸ್ತುಗಳು ನಮ್ಮಲ್ಲಿ ಲೌಕಿಕ ಭಾವವನ್ನು ಉದ್ಬೋಧಿಸಿ ಅರಿಷಡ್ವರ್ಗ ಕ್ಷೇತ್ರಕ್ಕಿಳಿಸದೇ ರಸಸಂಬದ್ಧವಾದ ಶುದ್ಧ ಭಾವಗಳನ್ನು ಮಾತ್ರ ವ್ಯಂಜಿಸುವಂತೆ ಮಾಡುವುದು. ಕುಶಾಗ್ರಬುದ್ಧಿಯಾದ ಕಲಾನಿಪುಣ ಭಾವುಕನಿಗೆ ಮಾತ್ರ ಸಾಧ್ಯ. ಇವೆಲ್ಲ ಬುದ್ಧಿ ಬಲಿತಿರುವ ಕುಶಲರ ದೇವಸ್ತರದ ಯೋಗಭೋಗಗಳು"[೮೧] ಎಂದು.

'ಕಾವ್ಯದ ಸಮಗ್ರ ಸೌಂದರ್ಯ ಅದರ ಸ್ಥಾಯಿಭಾವವನ್ನು ಅದರ ಅಂಶಗಳು ಈ ವಿಭಾವಾನುಭಾವಗಳನ್ನು ಸಂಪೂರ್ಣವಾಗಿ ಆಶ್ರಯಿಸಿದೆ"[೮೨] ಅಂದರೆ ಕಾವ್ಯದ ಉತ್ತಮತೆಯು ಅದರ ಸ್ಥಾಯಿ-ಸಂಚಾರಿ ಭಾವಗಳಲ್ಲಿ ಸಮ್ಮಿಲಿತಗೊಂಡಿರುತ್ತದೆ. ಹಾಗೆಯೇ ಇಲ್ಲಿ ಕವಿಯ ಕಾವ್ಯ ಕೌಶಲವು ಆತನ ಪ್ರತಿಭೆ ಮತ್ತು ಔಚಿತ್ಯವನ್ನು ಒಳಗೊಂಡಿರುತ್ತದೆ. ಈ ಸೌಂದರ್ಯಾನುಗ್ರಹಣೆಯು ಕಾವ್ಯದಲ್ಲಿ ಔಚಿತ್ಯ ಭಂಗವನ್ನು, ರಸದೂರ ತರದೆ ಎಚ್ಚರವಹಿಸುವುದೇ ಕಾವ್ಯದ ಮುನ್ನಡೆಗೆ ಅದರ ಸೌಂದರ್ಯಕ್ಕೆ ಒಂದು ಅರ್ಥಗರ್ಭಿತವಾದ ಚೌಕಟ್ಟು ದೊರಕಿಸಿಕೊಡಬಲ್ಲದು.

ಯಾವುದರಿಂದ ಮನಸ್ಸು ಅರಿಷಡ್ವರ್ಗಗಳ ಬಂಧನದಿಂದ ಮುಕ್ತವಾಗುತ್ತದೆಯೋ, ಅಲೌಕಿಕ ಆನಂದಸ್ತರಕ್ಕೇರುತ್ತದೆಯೋ, ನಿರ್ವೈರಭಾವ ಪಡೆಯುತ್ತದೆಯೋ ಅದೇ ಸೌಂದರ್ಯ. ಸಹೃದಯರಲ್ಲಿ ಆತ್ಮಶುದ್ಧಿ, ಮೋಹ ಕಾತರಗಳಿಂದ ಮುಕ್ತಿಯನ್ನು ಒದಗಿಸಿ ಸರ್ವಸಿದ್ಧಿಗಳನ್ನು ತರುವುದು ಇದರ ಗುಣ. ಆದುದರಿಂದ ಇಂಥ ಆತ್ಮಸಂವರ್ಧಕ ಭಾವವನ್ನು ತರುವ ಈ ಸೌಂದರ್ಯ ಪ್ರಜ್ಞೆಯೂ ಕಾವ್ಯಕ್ಕೆ ಅಗತ್ಯ ಎಂದು ಪು.ತಿ.ನ ವಿಶ್ಲೇಷಿಸಿದ್ದಾರೆ.

ಕಾವ್ಯದ ಬೆಳವಣಿಗೆಗೆ ಹಾಗೂ ಅದು ಗುಣಸ್ವಭಾವಗಳ ವಿಶ್ಲೇಷಣೆಗೆ ವಿಮರ್ಶೆಯು ಬಹುಮುಖ್ಯ "ಕಾವ್ಯದ ಭಾವ, ಅರ್ಥ, ಉದ್ದೇಶಗಳನ್ನು ವಿಚಾರಪೂರ್ವಕವಾಗಿ ವಿಶ್ಲೇಷಿಸಿ ವಿವೇಚಿಸುವುದೇ ವಿಮರ್ಶೆ"[೮೩] ಕಾವ್ಯದಲ್ಲಿರುವ ವಸ್ತು, ಜ್ಞಾನ, ಆತ್ಮಾನಂದ, ರಸಪ್ರಜ್ಞೆ ಸೌಂದರ್ಯಬೋಧೆಯನ್ನು ನೀಡುವುದೇ ವಿಮರ್ಶೆ. ಕವಿಯಾದವನು ವಿಮರ್ಶಕನೂ ಕೂಡ

ಆಗಬೇಕು. ಆಗ ಆತನ ಕಾವ್ಯ ಒಂದು ತಾತ್ವಿಕ ಚಿಂತನೆಗೆ ಒಳಪಟ್ಟು ಉತ್ತಮ ಕಾವ್ಯ ಹೊರಹೊಮ್ಮಲು ಸಹಕಾರಿಯಾಗುತ್ತದೆ.

ಪು.ತಿ.ನ ರವರು ಕಾವ್ಯದ ಶಿಸ್ತಿಗೆ ವಿಮರ್ಶೆಯ ಮಹತ್ವ ಮತ್ತು ಪಾತ್ರವನ್ನು ಕುರಿತು ತಮ್ಮ ಕಾವ್ಯಮೀಮಾಂಸೆಯಲ್ಲಿ ಚರ್ಚೆಗೊಳಪಡಿಸುತ್ತಾರೆ. ವಿಮರ್ಶೆಯು ಕಾವ್ಯದ ಕಲಾಭಾಗವನ್ನು ಕುರಿತು ವ್ಯಾಖ್ಯಾನಿಸಬಹುದು. ಅದರ ಅಲಂಕಾರಶಾಸ್ತ್ರ ಇದಕ್ಕೆ ಸೂಕ್ತ ಉದಾಹರಣೆಯಾಗಬಹುದು. ಆದರೆ ಕಾವ್ಯದಲ್ಲಿರುವ ಭಾವಾ ಭಾವವನ್ನು ಒಳಹೊಕ್ಕು ನೋಡುವುದಾದರೆ ವಿಮರ್ಶಕನಿಗೂ ಆ ಭಾವಕ್ಷೇತ್ರದ ಅರಿವು ಇರಬೇಕು ಎಂದು ಪು.ತಿ.ನ ಹೇಳುತ್ತಾರೆ.

ಕವಿಯು ಸಾಮಾನ್ಯನಂತೆ ಭವಜಾಗದಲ್ಲಿ ತನ್ನ ಜೀವನವನ್ನು ನಡೆಸಬಲ್ಲ, ಭವದ ಅನುಭವಗಳನ್ನು ಬಿಟ್ಟು ತನ್ನ ಅಂತಃಕರಣದ ಅನುಭವ ಅಂದರೆ ಆತ್ಮಾನುಭೂತಿಗಳಿಂದಾಗಿ ಆತ್ಮವಿಕಸನಗೊಂಡು ಕಾವ್ಯರಚಿಸಲು ಸಿದ್ಧನಾಗುತ್ತಾನೆ. ಕಾವ್ಯದಿಂದ ಕವಿಗೆ ಸ್ವಾಸ್ಥ್ಯ ಲಭಿಸುತ್ತದೆ. ಹೀಗೆ ಕವಿ ತನ್ನ ವಿಭಾವಾನುಭಾವಗಳ ಮೂಲಕ ಒಂದು ಕ್ರಮಬದ್ಧವಾದ ಕಾವ್ಯವನ್ನು ರಚಿಸುತ್ತಾ ತನ್ನ ಅಸ್ತಿತ್ವವನ್ನು ವ್ಯಕ್ತಪಡಿಸುತ್ತಾನೆ. ಸಹೃದಯನಾದವನು ಈ ಅನುಭವಗಳಲ್ಲಿಯೇ ತನ್ನ ಆನಂದವನ್ನು, ಆಶ್ಚರ್ಯವನ್ನು ವ್ಯಕ್ತಪಡಿಸುತ್ತಾನೆ. ವಿಮರ್ಶಕನಾದವನು ಈ ಕಾವ್ಯದ ಆತ್ಮ ಕಾಂತಕ್ಷೇತ್ರವನ್ನು ಅಂದರೆ ಅಕರ್ಷಣೆಯ ಕೇಂದ್ರವನ್ನು ಗುರುತಿಸಬೇಕಾಗುತ್ತದೆ ಎಂದು ಪು.ತಿ.ನ ವಿಮರ್ಶಕನ ಶಿಸ್ತುಬದ್ಧವಾದ ಗುಣದ ಕುರಿತು ಹೇಳುತ್ತಾರೆ.

"ಅಸಾಂಗತ್ಯ, ಅನೌಚಿತ್ಯ, ಅಜಾಗರೂಕತೆಯಿಂದ ಕಾವ್ಯ ನಷ್ಟವಾಗುತ್ತದೆ. ಸಾಂಗತ್ಯ, ಔಚಿತ್ಯ, ಜಾಗರೂಕತೆಗಳಿಂದ ಕಾವ್ಯವೂ ಉಜ್ಜೀವಿಸುತ್ತದೆ"[೬೪] ಹಾಗಾಗಿ ವಿಮರ್ಶಕನ ಗುಣವಿರುವುದು ಈ ಔಚಿತ್ಯ ಜಾಗರೂಕತೆಗಳನ್ನು ಗುರುತಿಸುವುದರಲ್ಲಿ ಎಂದು ಪು.ತಿ.ನ ರವರು ಹೇಳುತ್ತಾರೆ. "ಕಾವ್ಯದಲ್ಲಿ ಬರುವ ಸಾಂಗತ್ಯ, ಸಾಮರಸ್ಯಗಳನ್ನು ಕುರಿತು ಮಾತನಾಡುವಾಗ ಪು.ತಿ.ನ ಅದರ ಔಚಿತ್ಯವನ್ನು ಸಹ ಹೇಳುತ್ತಾರೆ. ನಾವು ಕಾವ್ಯದಲ್ಲಿ ಪಾತ್ರಗಳ ವಿಷಯದಲ್ಲಿ ನೋಡಬೇಕಾದುದು ಸ್ಥಾಯಿಭಾವದ್ಯೋತಕವಾದ ಅನುಭಾವಗಳ ರಸವಿನೀತ ಸಾಂಗತ್ಯ ಸಾಮರಸ್ಯಗಳನ್ನು ಮಾತ್ರ"[೬೫] ಈ ಸಾಂಗತ್ಯ ಸಾಮರಸ್ಯಗಳು ವಿಮರ್ಶಾ ಯೋಗ್ಯವಾದ ವಸ್ತುಗಳು. ಏಕೆಂದರೆ ತಾರ್ಕಿಕಾನ್ವೇಷಣೆಯು ಇಲ್ಲಿ ಸಹಜವಾಗಿ ಬರುವಂತಹದ್ದು.

ಸತ್ಕಾವ್ಯದಲ್ಲಿ ವಿಭಾವಾನುಭಾವಗಳಿಗೂ ಮತ್ತು ಸಂಚಾರಿಭಾವಕ್ಕೂ ಯಾವುದೇ ಕುಂದುಕೊರತೆಗಳಿರುವುದಿಲ್ಲ, ಒಂದು ವೇಳೆ ಇಂಥ ಕುಂದುಕೊರತೆಗಳು ಉಂಟಾದರೂ ಅದು ಕವಿಯ ಬುದ್ಧಿ, ಇಂದ್ರಿಯ, ಅಹಂಕಾರಗಳು, ರಾಗದ್ವೇಷಗಳ ಸಂಪರ್ಕದಿಂದ ಹದಗೆಟ್ಟು ರಸಸ್ತರಕ್ಕೆ ಭಂಗವನ್ನುಂಟು ಮಾಡಿದಾಗ. ಇಂಥ ಸಂದರ್ಭದಲ್ಲಿ ಒಂದು ಉತ್ತಮ ವಿಮರ್ಶೆಯು ಎಚ್ಚರಿಕೆಯನ್ನು

ನೀಡುವುದು ಕವಿಗೂ–ಸಹೃದಯನಿಗೂ, ಸಮಾಜಕ್ಕೂ ವಿಮರ್ಶಕನಿಂದ ಆಗುವ ಉಪಕಾರ ಎನ್ನುತ್ತಾರೆ ಪು.ತಿ.ನ

"ವಿಮರ್ಶೆಯು ಮನಸ್ಸಿಗೆ ಕ್ಲೇಶವನ್ನು ತರುವುದು ವಿಮರ್ಶಕನು ತಿರಸ್ಕಾರಭಾವವನ್ನು ಸ್ವಪ್ರತಿಷ್ಠೆಯನ್ನೂ ಮೆರಸಲೆಳಸುವಾಗಲೆ ಹೊರತು ಸತ್ಕಾವ್ಯ ಪ್ರೀತಿಯಿಂದ ಪ್ರವೃತ್ತನಾದಾಗಲಲ್ಲ"[೮೬] ಅಂದರೆ ಒಂದು ಕಾವ್ಯದ ಕುರಿತಾದ ಪ್ರೀತಿಯಿಂದ, ಸದ್ಭಾವನೆಯಿಂದ ವಿಮರ್ಶಕ ಅದನ್ನು ತನ್ನ ವಿಮರ್ಶಾ ನೆಲೆಯಿಂದ ನೋಡುವುದಕ್ಕೂ, ಆತ ನೀರಸ ಭಾವದಿಂದ ನೋಡುವುದಕ್ಕೂ ಭಿನ್ನತೆ ಇದೆ.

ಕಾವ್ಯ ಸೌಂದರ್ಯದ ಅಂತಃಸತ್ವವನ್ನು ಪಡೆದಿದೆಯೇ, ಇದರಿಂದ ರಸಾನುಭವ ಸಾಧ್ಯವೇ, ಸಹೃಯರಿಗೆ ಇದರಿಂದ ಪ್ರಯೋಜನಗಳಿವೆಯೇ ಹೀಗೆ ಕಾವ್ಯದ ಕುರಿತಾದ ಹಲವಾರು ಪ್ರಶ್ನೆಗಳಿಗೆ ಉತ್ತರನೀಡಿ, ಕಾವ್ಯವನ್ನು ಜೀವಂತವಾಗಿಸುವ ಕಾರ್ಯ ವಿಮರ್ಶೆ ಮಾಡುತ್ತದೆ. ಈ ವಿವೇಚನೆಯ ಹಿನ್ನೆಲೆಯಲ್ಲಿ ನಾವು ಕಂಡುಕೊಳ್ಳಬಹುದಾದುದೆಂದರೆ ಪು.ತಿ.ನ ಅವರ ಕಾವ್ಯಚಿಂತನೆ ವಸ್ತುಮುಖಿಗಿಂತ ಹೆಚ್ಚಾಗಿ ಆತ್ಮಮುಖಿಯಾದ ಅಪೇಕ್ಷೆಗಳನ್ನು ಬೆಳೆಸುವತ್ತ ಹೆಚ್ಚಿನ ಒಲವನ್ನು ತೋರುತ್ತದೆ ಎನ್ನುವುದು."[೮೭]

ಹೀಗೆ ಪು.ತಿ.ನ ರವರು ಕಾವ್ಯದ ಇತರ ಶಿಸ್ತುಗಳಾದ ಸೌಂದರ್ಯ, ವಿಮರ್ಶೆ, ನೀತಿಬೋಧನೆ ಇವುಗಳು ನಿಜವಾಗಿಯೂ ಹೊಂದಿರಬೇಕಾದ ಗುಣಗಳನ್ನು ಕುರಿತು ಹೇಳಿರುವ ಅಂಶಗಳನ್ನು ಅಭಿವ್ಯಕ್ತಿಸುವ ಪ್ರಯತ್ನ ನನ್ನದಾಗಿದೆ.

**ಊ) ಕಾವ್ಯ ಪ್ರಯೋಜನ:–**

ಕಾವ್ಯ ಸೃಷ್ಟಿಯಿಂದ ಸಹೃದಯರಿಗಾಗಲಿ ಅಥವಾ ಕವಿಗಾಗಲಿ ಏನು ಪ್ರಯೋಜನ ಎಂಬ ಮಾತಿನಲ್ಲಿ ಹಲವು ಭಿನ್ನಾಭಿಪ್ರಾಯಗಳಿವೆ. ಆದರೆ ಒಟ್ಟಾರೆಯಾಗಿ ಹೇಳುವುದಾದರೆ ಈ ಕಾವ್ಯ ಸೃಷ್ಟಿಯಿಂದ ಪರಸ್ಪರರಿಬ್ಬರು ಪಡೆಯುವ ಪ್ರಯೋಜನವೆಂದರೆ ಅದು ಆನಂದ. ಮಮ್ಮಟನು ಹೇಳುವ ಹಾಗೆ "ಎಲ್ಲ ಪ್ರಯೋಜನಗಳಿಗೂ ಶಿಖರದಂತಿರತಕ್ಕದ್ದೆಂದರೆ ರಸಸ್ವಾದದಿಂದ. ಅದೇ ಸಮಯದಲ್ಲಿಯೇ ಒದಗಿ ಬೇರೊಂದರ ಅರಿವನ್ನೇ ಉಳಿಸದ ಆನಂದ ಎಂದು"[೮೮]

**ಕವಿತೆಯೊಳಾಸೆಗೆಯ್ವ ಫಲಮಾವುದೊ ಪೂಜೆನೆಗಲ್ತೆ ಲಾಭಮೆಂ**
**ಬಿವೆ ವಲಮಿಂದ್ರಪೂಜೆ ಭುವನಸ್ತುತಮಪ್ಪ ನೆಗಳ್ತೆ ಮುಕ್ತಿಸಂ**
**ಸಂಭವಿಸುವ ಲಾಭಮೆಂಬಿವೆ ಜಿನೇಂದ್ರಗುಣಸ್ತುತಿಯಿಂದೆ ತಾಮೆಸಾ**
**ರವೆ ಪೆರರೀವುದೇಂ ಪೆರರ ಮಾಡುವುದೇಂ ಪೆರರಿಂದವಪ್ಪುದೇಂ**

ಎಂಬ ಈ ಪದ್ಯದ ಸಾಲುಗಳಲ್ಲಿ ಕಾವ್ಯದಿಂದ ಆಗುವ ಪ್ರಯೋಜನಗಳನ್ನು ಪಂಪ ಹೀಗೆ ಅಭಿಪ್ರಾಯ ಪಡುತ್ತಾನೆ. ಕಾವ್ಯದಿಂದ ಆಗುವ ಪ್ರಯೋಜನಗಳೆಂದರ ಪೂಜೆ, ಕೀರ್ತಿ ಮತ್ತು ಲಾಭ. ಇಂದ್ರನನ್ನು

ಒಲಿಸುವ ಪೂಜೆ, ಇಡೀ ಭೂಮಂಡಲದಲ್ಲಿ ದೊರೆಯುವ ಕೀರ್ತಿ ಮತ್ತು ಲಾಭವೆಂದರೆ ಅದುವೇ ಮುಕ್ತಿ ಎಂದು ಪಂಪ ಕಾವ್ಯ ಪ್ರಯೋಜನಗಳ ಕುರಿತು ಹೇಳುತ್ತಾರೆ.

ಕವಿ ಪು.ತಿ.ನ ಹೇಳುವ ಪ್ರಕಾರ ಕಾವ್ಯ ಯಾವುದೇ ಕಾರಣಕ್ಕೂ ಅದು ಉದ್ವೇಗ ಅಥವಾ ಆವೇಶಕ್ಕೆ ಒಳಪಡುವಂತಿರಕೂಡದು. ಅಲೌಕಿಕತೆಯ ಅಸ್ಪಷ್ಟತೆ ಮತ್ತು ಈಗಿನ ಆಧುನಿಕತೆಯ ಚಿಂತನೆಗಳ ನಡುವೆಯೂ ಕವಿಗೆ ಸಾಕ್ಷಾತ್ಕಾರ ಸಾಧ್ಯವಾದ ವಾಸ್ತವತೆಗಳನ್ನು ಅವಲಂಬಿಸಿ, ಸ್ವತಂತ್ರವಾಗಿ ಕಾವ್ಯ ರಚನೆಗೆ ಒಳಪಟ್ಟಾಗ ಮಾತ್ರ ಕವಿ ಸಹೃದಯನ ಮನಸ್ಸನ್ನು ತಲುಪುವುದು ಸಾಧ್ಯ.

**ಕಾವ್ಯಂ ಯಶಸೇರ್ಥಕೃತೇ ವ್ಯವಹಾರವಿದೆ ಶಿವೇತರಕ್ಷತಯೇ।**

**ಸದ್ಯ : ಪರನಿರ್ವೃತಯೇ ಕಾಂತಾಸಮಿತತಯೋಪದೇಶಯುಜೇ॥**

"ಕಾವ್ಯವು ಕೀರ್ತಿಗಾಗಿ, ಧನಾರ್ಜನೆಗಾಗಿ, ವ್ಯವಹಾರಜ್ಞಾನಕ್ಕಾಗಿ, ಅಮಂಗಳ ನಿವಾರಣೆಗಾಗಿ, ತತ್ಕಾಲದಲ್ಲೇ ಪರಮಾನಂದ ಹೊಂದುವುದಕ್ಕಾಗಿ, ಕಾಂತೆಯಂತೆ ಉಪದೇಶಿಸುವುದಕ್ಕಾಗಿ"[೬೯] ಎಂದು ಮಮ್ಮಟನು ಹೇಳುತ್ತಾನೆ.

ಕವಿ ತಾನು ಮಾಡುವ ಕರ್ಮದಿಂದ ಆತನಿಗೆ ಸುಖ ಲಭಿಸಲೆಂದು ಮತ್ತು ತನಗೆ ರಸಸ್ವಾದವಾಗಲೆಂದು ಕಾವ್ಯ ರಚಿಸುತ್ತಾನೆ. ಆದರೆ ಇಹದ ಆಸೆ-ಬಯಕೆಗಳಿಗೆ ಆತ ವಶನಾಗಿ ಕಾವ್ಯ ರಚಿಸಲು ಹೊರಟರೆ ಆತನ ಕೃತಿ ರಸಪ್ರದವಾಗುವುದಿಲ್ಲ.

"ಕಾವ್ಯದಿಂದ ಕವಿಯು ಪಡೆಯುವ ನಿಶ್ಚಿತ ಪ್ರಯೋಜನವೆಂದರೆ ಸೃಷ್ಟಿಕಾರ್ಯದ ಆನಂದವೊಂದೇ"[೭೦] ಎಂದು ಹೇಳುವಲ್ಲಿ ಪು.ತಿ.ನ ಕಾವ್ಯದಿಂದ 'ರಸಸ್ವಾದ'ದ ಪ್ರಯೋಜನದ ಕುರಿತು ಹೇಳುತ್ತಾರೆ. "ಆದ್ಯತನ ವಿಮುಕ್ತಿಯನ್ನು ತಾವಿಚ್ಛಿಸಿದಂದು ಪಡೆಯುವಂಥವರು ಕವಿಗಳಾಗುವುದಕ್ಕೆ ಅರ್ಹರು"[೭೧] ಅಂದರೆ ಪು.ತಿನ ರವರು ಇಲ್ಲಿ ಕವಿಗೆ ಮುಕ್ತಿಯ ಸ್ವಾತಂತ್ರ್ಯವನ್ನು ಸಹ ದೊರಕಿಸಿಕೊಟ್ಟಿದ್ದಾರೆ. ಕವಿ ತಾನು ಕವಿ ಎಂದೆನಿಸಿಕೊಳ್ಳಲು ಆತ ಸ್ವ ಇಚ್ಛೆಯಿಂದ ಇಹದ ಸಮಸ್ಯೆಗಳಿಂದ ಮುಕ್ತಿಯನ್ನು ಪಡೆದಿರಬೇಕು. ಭವ ಜಾಲದಿಂದ ಮುಕ್ತನಾಗಿರಬೇಕು.

ಯಾವುದೇ ವಸ್ತುಸ್ಥಿತಿಯಿಂದ ನಾವು ಸ್ಫೂರ್ತಿಯನ್ನು ಪಡೆದರೂ ಅದು ಚಿರಕಾಲ ಶಾಶ್ವತವಾಗಿ ಉಳಿಯುವಂತಹ ಭಾವನೆಗಳನ್ನು ಹೊರಹೊಮ್ಮುವಂತಹ ಸಾಹಿತ್ಯಕೃತಿ ಅದಾಗಿರಬೇಕು. ಐಹಿಕ ಅನುಭವಗಳು ಕವಿ ಮನಸ್ಸಿನಿಂದ ಬರುವ ಹೊತ್ತಿಗೆ ಅದು ಶಾಪವಿಮುಕ್ತತೆಯನ್ನು ಪಡೆದರೆ ಮಾತ್ರ ಅವು ದಿವ್ಯವಾಗಲು ಸಾಧ್ಯ ಎಂದು ಪು.ತಿ.ನ ಅಭಿಪ್ರಾಯ ಪಡುತ್ತಾರೆ. ಕಾವ್ಯದಿಂದ ಸಹೃದಯನು ಬಯಸುವುದು ರಸಸ್ವಾದವನ್ನು ಈ ರಸಸ್ವಾದದೊಳಗೆ ಒಂದು ಭವದ ಉಪಶಮನವೂ ಕೂಡ ಇರಬೇಕು.

ಪು.ತಿ.ನ ಹೇಳುವಲ್ಲಿ ಒಂದು ಅರ್ಥವಿದೆ. ಏಕೆಂದರೆ ಉದ್ರೇಕ, ಆವೇಶಗಳು ತುಂಬಿದ ಸಾಹಿತ್ಯ ಕ್ಷಣಿಕವಾದದ್ದು. ಸಾಂದರ್ಭಿಕವಾದದ್ದು. ಆಯಾ ಸಂದರ್ಭದಲ್ಲಿ ಮಿಂಚಿ ಮತ್ತೆ ಕಾಲಚಕ್ರದಡಿಯಲ್ಲಿ ಮರೆಯಾಗುವಂತಹವು.

"ಸಂಗೀತದಂತೆ ಕಾವ್ಯವೂ ಕೂಡ ವಾಸ್ತವದ ನಿರ್ಬಂಧವನ್ನು ಎಷ್ಟರಮಟ್ಟಿಗೆ ಕಳೆದುಕೊಂಡರೆ ಅಷ್ಟರಮಟ್ಟಿಗೆ ಅದು ಭೋಗ್ಯವಾಗುತ್ತದೆ, ದಿವ್ಯವಾಗುತ್ತದೆ"[೧] ಎನ್ನುವ ಹಾಗೆ ಕಾವ್ಯವು ಕೂಡ ಶಬ್ದನಿಷ್ಠಾರ್ಥಗಳನ್ನು ಉಪಯೋಗಿಸಿ ರಸವನ್ನು, ಆನಂದವನ್ನು, ನೀಡುವಂತಿರಬೇಕು ಎನ್ನುವ ಮಾತು ಸತ್ಯವೆನಿಸುತ್ತದೆ. ಕಾವ್ಯ ತನ್ನ ಶಕ್ತಿಯಿಂದ ಹಾಗೂ ಕಾವ್ಯೋಪಕರಣಗಳಿಂದ ಭವದ ಉಪಶಮನವನ್ನು ಸಾಧಿಸುವ ಸಾಹಸಕ್ಕೇರುತ್ತದೆ. ಇಲ್ಲಿ ಪು.ತಿ.ನ ಹೇಳುವ ಅರ್ಥದಲ್ಲಿ ಗ್ರಹಿಸಿದರೆ ರಸ, ಆನಂದ ಇವುಗಳಿಂದಲೇ ಸಹೃದಯನಾದವನು ವಾಸ್ತವತೆಯನ್ನು ಕಾಣುವಲ್ಲಿ ನಿಸ್ಸೀಮನಾಗುತ್ತಾನೆ.

ಹೀಗೆ ಕಾವ್ಯದ ಗುಣವೆಂದರೆ ನಿರಂತರ ಆನಂದವನ್ನು ನೀಡುವಂತಿರಬೇಕು. ಹಾಗೆಯೇ ಕಾವ್ಯದಿಂದ ನಮಗೆ ದೊರೆಯುವ ಪ್ರಯೋಜನವೆಂದರೆ ರಸ ಮತ್ತು ಆನಂದ. ಇಂತಹ ರಸಭರಿತವಾದ ನಲವಿನ ಕೃತಿಗಳಿಂದಲೇ ನಮಗೆ ಶಾಶ್ವತವಾದ ಭವದ ಉಪಶಮನ. ಇಲ್ಲದೆ ಹೋದರೆ ಕೃತಿ ಆ ನಿರ್ದಿಷ್ಟ ಕಾಲಕ್ಕೆ ಮಾತ್ರ ಸೀಮಿತವೆನಿಸಿಕೊಂಡು ನಂತರ ರಸಹೀನವೆನಿಸಿಕೊಳ್ಳುತ್ತದೆ. ಇದಕ್ಕೆ ಪು.ತಿ.ನ ರವರು ಈ ಉದಾಹರಣೆಯನ್ನು ನೀಡುತ್ತಾರೆ. "ಸ್ವಾತಂತ್ರ್ಯ ದೊರೆಯುವುದಕ್ಕೆ ಮುಂಚೆ ನಮ್ಮ ದೇಶದ ದುರ್ದಶೆಯನ್ನು ಕುರಿತು ವಿಪುಲವಾಗಿ ಹುಟ್ಟಿದ ಕವನಗಳನ್ನು ತೆಗೆದುಕೊಳ್ಳಿ, ಆಗ ಅವು ಎಷ್ಟು ಮೋಹಕ. ಈಗ ಎಷ್ಟು ನೀರಸ"[೨] ಒಂದು ನಿಶ್ಚಿತ ಕಾಲದಲ್ಲಿ ಹುಟ್ಟುವ ಕಾವ್ಯ ಆಯಾ ಕಾಲದಲ್ಲಿ ಮೋಹಕವೆನಿಸಿ ನಂತರ ಅದೇ ಕಾವ್ಯ ರಸಹೀನವೆನಿಸಿಕೊಳ್ಳುತ್ತದೆ. ಕಾವ್ಯವು ಇಂಥ ನೀರಸತ್ವಕ್ಕೆ ಅವಕಾಶ ಕೊಡದೆ ಶಾಶ್ವತವೆನಿಸಿ ಕೊಳ್ಳಬೇಕು.

ಅಂತಿಮವಾಗಿ ಪು.ತಿ.ನ ರವರು ಹೇಳುವ ಅಂಶವೆಂದರೆ ಒಂದು ಕಾವ್ಯ ಉದ್ರೇಕಗಳನ್ನು 'ಆವೇಶಗಳನ್ನು ಹುಟ್ಟಿಸದೆ ಅದು ಶಾಶ್ವತವಾದ ಭವದ ಉಪಶಮನವನ್ನು ತರುವಂತಹದ್ದಾಗಿರಬೇಕು. ರಸದ ಪ್ರಾಮುಖ್ಯತೆ ಹೆಚ್ಚಾಗಿರಬೇಕು. ಆಗಿ ಹೋದ ಮತ್ತು ಆದದ್ದನ್ನು ಆಗುವಂತೆ ಬರೆಯುವ ಶಕ್ತಿ ಕವಿ ಮನಸ್ಸಿಗಿರಬೇಕು ಎಂದು.

ಕಾವ್ಯ ಎನ್ನುವುದು ರಸ ಪ್ರಧಾನವಾಗಿರಬೇಕೆಂಬುದೇ ಪು.ತಿನ ಅವರ ನಿಲುವು. ಶಾಶ್ವತವಾದ ಆನಂದ ಮತ್ತು ಭವದ ಸೆಳೆತದಿಂದ ಮುಕ್ತಿಯನ್ನು ನೀಡುವುದಾಗಿರಬೇಕು. ಇದು ಕಾವ್ಯದ ಪ್ರಯೋಜನಗಳಲ್ಲಿಯೇ ಪ್ರಧಾನವಾದದ್ದು.

## ಅಡಿ ಟಿಪ್ಪಣಿ

೧. ಭಾರತೀಯ ಕಾವ್ಯಮೀಮಾಂಸೆ : ತೀ.ನಂ.ಶ್ರೀ. ಪುಟ–೧೬೧

೨. ಅದೇ ಪುಟ

೩. ಪು.ತಿ.ನಸಮಗ್ರಗದ್ಯಸಂಪುಟ:(ಸಂ)ಡಾ.ಜಿ.ಎಸ್.ಶಿವರುದ್ರಪ್ಪ ಮತ್ತು ಡಾ.ಎಚ್.ಎಸ್.ವೆಂಕಟೇಶ ಮೂರ್ತಿ, ಪುಟ–೩೮೯

೪. ಅದೇ ಪುಟ–೩೯೦

೫. ಕಾವ್ಯಾರ್ಥಚಿಂತನ : ಜಿ.ಎಸ್.ಶಿವರುದ್ರಪ್ಪ, ಪುಟ–೨೧೧

೬. ಪು.ತಿ.ನ ಸಮಗ್ರ ಗದ್ಯಸಂಪುಟ :(ಸಂ)ಡಾ.ಜಿ.ಎಸ್.ಶಿವರುದ್ರಪ್ಪ ಮತ್ತು ಡಾ.ಎಚ್.ಎಸ್.ವೆಂಕಟೇಶ ಮೂರ್ತಿ, ಪುಟ–೩೮೯

೭. ಅದೇ ಪುಟ– ೩೯೦

೮. ಅದೇ ಪುಟ–೩೯೧

೯. ಅದೇ ಪುಟ–೩೯೧

೧೦. ಅದೇ ಪುಟ–೩೯೨

೧೧. ಅದೇ ಪುಟ–೩೯೩

೧೨. ಅದೇ ಪುಟ–೩೯೩

೧೩. ಕಾವ್ಯಾರ್ಥಚಿಂತನ : ಜಿ.ಎಸ್.ಶಿವರುದ್ರಪ್ಪ, ಪುಟ–೩೭

೧೪. ಅದೇ ಪುಟ–೧೧

೧೫. ಭಾರತೀಯ ಕಾವ್ಯಮೀಮಾಂಸೆ : ತೀ.ನಂ.ಶ್ರೀ, ಪುಟ–೧೬೪

೧೬. ವಿಮರ್ಶೆಯ ಪೂರ್ವ–ಪಶ್ಚಿಮ : ಜಿ.ಎಸ್.ಶಿವರುದ್ರಪ್ಪ, ಪುಟ–೧೬

೧೭. ಸಮಗ್ರ ಗದ್ಯ –೨ : ಜಿ.ಎಸ್.ಶಿವರುದ್ರಪ್ಪ, ಪುಟ–೨೫೯

೧೮. ಅದೇ ಪುಟ–೨೫೯

೧೯. ಅದೇ ಪುಟ–೨೬೦

೨೦. ಅದೇ ಪುಟ–೨೬೧

೨೧. ಪು.ತಿ.ನ ಸಮಗ್ರ ಗದ್ಯ ಸಾಹಿತ್ಯ : (ಸಂ)ಡಾ.ಜಿ.ಎಸ್.ಶಿವರುದ್ರಪ್ಪ, ಪುಟ–೩೮೪

೨೨. ಕಾವ್ಯಾರ್ಥಚಿಂತನ : ಜಿ.ಎಸ್.ಶಿವರುದ್ರಪ್ಪ, ಪುಟ–೨೨೨

೨೩. ಅದೇ ಪುಟ–೨೨೨

೨೪. ಅದೇ ಪುಟ-೨೨೬

೨೫. ಅದೇ ಪುಟ-೨೩೨

೨೬. ಪು.ತಿ.ನ. ಸಮಗ್ರ ಗದ್ಯ ಸಂಪುಟ : ಡಾ.ಜಿ.ಎಸ್.ಶಿವರುದ್ರಪ್ಪ, ಡಾ.ಎಚ್.ಎಸ್.ವೆಂಕಟೇಶ ಮೂರ್ತಿ, ಪುಟ-೩೮೬

೨೭. ಅದೇ ಪುಟ-೩೮೬

೨೮. ಕಾವ್ಯಾರ್ಥ ಚಿಂತನೆ : ಜಿ.ಎಸ್.ಶಿವರುದ್ರಪ್ಪ, ಪುಟ-೨೩೫

೨೯. ಪು.ತಿ.ನ ಸಮಗ್ರ ಗದ್ಯ ಸಂಪುಟ : (ಸಂ)ಡಾ.ಜಿ.ಎಸ್.ಶಿವರುದ್ರಪ್ಪ, ಡಾ.ಎಚ್.ಎಸ್.ವೆಂಕಟೇಶ ಮೂರ್ತಿ, ಪುಟ-೪೦೮

೩೦. ಅದೇ ಪುಟ-೪೦೯

೩೧. ಅದೇ ಪುಟ-೪೦೯

೩೨. ಅದೇ ಪುಟ-೩೭೭

೩೩. ಅದೇ ಪುಟ-೩೭೭

೩೪. ಅದೇ ಪುಟ-೩೭೮

೩೫. ಅದೇ ಪುಟ-೩೭೯

೩೬. ಅದೇ ಪುಟ-೩೮೮

೩೭. ಅದೇ ಪುಟ-೪೦೯

೩೮. ಅದೇ ಪುಟ-೪೨೮

೩೯. ಯದುಗಿರಿ ಆಯ್ದ ಕವಿತೆಗಳು : ಪುಟ-೭೬

೪೦. ಪು.ತಿ.ನ ಸಮಗ್ರ ಗದ್ಯ ಸಂಪುಟ : (ಸಂ)ಡಾ.ಜಿ.ಎಸ್.ಶಿವರುದ್ರಪ್ಪ, ಡಾ.ಎಚ್.ಎಸ್.ವೆಂಕಟೇಶ ಮೂರ್ತಿ, ಪುಟ-೪೨೯

೪೧. ಯದುಗಿರಿ ಆಯ್ದ ಕವಿತೆಗಳು : ಪುಟ-೭೬

೪೨. ಪು.ತಿ.ನ ಸಮಗ್ರ ಗದ್ಯ ಸಂಪುಟ : (ಸಂ)ಡಾ.ಜಿ.ಎಸ್.ಶಿವರುದ್ರಪ್ಪ, ಡಾ.ಎಚ್.ಎಸ್.ವೆಂಕಟೇಶ ಮೂರ್ತಿ, ಪುಟ-೫೦೧

೪೩. ಅದೇ ಪುಟ-೫೦೨

೪೪. ಅದೇ ಪುಟ-೫೦೨

೪೫. ಭಾರತೀಯ ಕಾವ್ಯಮೀಮಾಂಸೆ : ತೀ.ನಂ.ಶ್ರೀ, ಪುಟ-೨೮೧

೪೬. ಪು.ತಿ.ನ ಸಮಗ್ರ ಗದ್ಯ ಸಂಪುಟ : (ಸಂ)ಡಾ.ಜಿ.ಎಸ್.ಶಿವರುದ್ರಪ್ಪ, ಡಾ.ಎಚ್.ಎಸ್.ವೆಂಕಟೇಶ ಮೂರ್ತಿ, ಪುಟ-೫೧೨

೪೭. ಅದೇ ಪುಟ-೫೧೧

೪೮. ಭಾರತೀಯ ಕಾವ್ಯಮೀಮಾಂಸೆ : ತೀ.ನಂ.ಶ್ರೀ, ಪುಟ-೨೮೧

೪೯. ಕಾವ್ಯಾರ್ಥ ಚಿಂತನೆ : ಜಿ.ಎಸ್.ಶಿವರುದ್ರಪ್ಪ, ಪುಟ-೨೦೪

೫೦. ಪು.ತಿ.ನ ಸಮಗ್ರ ಗದ್ಯ ಸಂಪುಟ : (ಸಂ)ಡಾ.ಜಿ.ಎಸ್.ಶಿವರುದ್ರಪ್ಪ, ಡಾ.ಎಚ್.ಎಸ್.ವೆಂಕಟೇಶ ಮೂರ್ತಿ, ಪುಟ-೫೧೨

೫೧. ಅದೇ ಪುಟ-೫೧೨

೫೨. ಅದೇ ಪುಟ-೫೧೩

೫೩. ಅದೇ ಪುಟ-೫೧೪

೫೪. ಅದೇ ಪುಟ-೫೧೪

೫೫. ಅದೇ ಪುಟ-೫೧೪

೫೬. ಅದೇ ಪುಟ-೫೧೫

೫೭. ಅದೇ ಪುಟ-೫೧೬

೫೮. ಅದೇ ಪುಟ-೫೧೬

೫೯. ಅದೇ ಪುಟ-೫೧೬

೬೦. ಅದೇ ಪುಟ-೫೧೯

೬೧. ಅದೇ ಪುಟ-೫೨೧

೬೨. ಅದೇ ಪುಟ-೫೨೧

೬೩. ಅದೇ ಪುಟ-೫೨೨

೬೪. ಕಾವ್ಯಾರ್ಥ ಚಿಂತನೆ : ಜಿ.ಎಸ್.ಶಿವರುದ್ರಪ್ಪ, ಪುಟ-೧೬

೬೫. ಪು.ತಿ.ನ ಸಮಗ್ರ ಗದ್ಯ ಸಂಪುಟ : (ಸಂ)ಡಾ.ಜಿ.ಎಸ್.ಶಿವರುದ್ರಪ್ಪ, ಡಾ.ಎಚ್.ಎಸ್.ವೆಂಕಟೇಶ ಮೂರ್ತಿ, ಪುಟ-೫೨೨

೬೬. ಅದೇ ಪುಟ-೫೨೩

೬೭. ಅದೇ ಪುಟ-೫೨೪

೬೮. ಅದೇ ಪುಟ-೫೨೫

೬೯. ಅದೇ ಪುಟ-೫೩೦

೭೦. ಕಾವ್ಯಾರ್ಥ ಚಿಂತನೆ : ಜಿ.ಎಸ್.ಶಿವರುದ್ರಪ್ಪ, ಪುಟ-೨೦೪

೭೧. ಪು.ತಿ.ನ ಸಮಗ್ರ ಗದ್ಯ ಸಂಪುಟ : (ಸಂ)ಡಾ.ಜಿ.ಎಸ್.ಶಿವರುದ್ರಪ್ಪ, ಡಾ.ಎಚ್.ಎಸ್.ವೆಂಕಟೇಶ ಮೂರ್ತಿ, ಪುಟ-೫೩೭

೭೨. ಅದೇ ಪುಟ-೫೩೯

೭೩. ಅದೇ ಪುಟ-೫೪೦

೭೪. ಅದೇ ಪುಟ-೫೪೦

೭೫. ಅದೇ ಪುಟ-೪೪೩

೭೬. ಅದೇ ಪುಟ-೪೬೦

೭೭. ಅದೇ ಪುಟ-೪೬೨

೭೮. ಅದೇ ಪುಟ-೪೬೩

೭೯. ಅದೇ ಪುಟ-೪೬೩

೮೦. ಅದೇ ಪುಟ-೪೬೪

೮೧. ಅದೇ ಪುಟ-೪೬೫

೮೨. ಅದೇ ಪುಟ-೪೬೬

೮೩. ವಿಮರ್ಶೆಯ ಪೂರ್ವ-ಪಶ್ಚಿಮ : ಲೇಖಕರು.ಜಿ.ಎಸ್.ಶಿವರುದ್ರಪ್ಪ, ಪುಟ-೯

೮೪. ಪು.ತಿ.ನ ಸಮಗ್ರ ಗದ್ಯ ಸಂಪುಟ : (ಸಂ)ಡಾ.ಜಿ.ಎಸ್.ಶಿವರುದ್ರಪ್ಪ, ಡಾ.ಎಚ್.ಎಸ್.ವೆಂಕಟೇಶ ಮೂರ್ತಿ, ಪುಟ-೪೭೬

೮೫. ಅದೇ ಪುಟ-೪೭೭

೮೬. ಅದೇ ಪುಟ-೪೮೦

೮೭. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ : (ಸಂ) ಡಾ.ಚಕ್ಕೆರೆ ಶಿವಶಂಕರ, ಪ್ರೊ.ಜಿ.ಅಬ್ದುಲ್ ಬಷೀರ್, ಲೇಖನ: ಕಾವ್ಯಮೀಮಾಂಸೆಯನ್ನು ಕುರಿತು ಪು.ತಿ.ನ ಅವರ ಚಿಂತನೆಗಳು, ಪ್ರೊ.ಎಚ್.ಎಸ್.ಮುರಳಿಧರ

೮೮. ಭಾರತೀಯ ಕಾವ್ಯಮೀಮಾಂಸೆ : ತೀ.ನಂ.ಶ್ರೀ. ಪುಟ-೧೬೭

೮೯. ಅದೇ ಪುಟ-೧೬೭

೯೦. ಅದೇ ಪುಟ-೧೬೮

೯೧. ಪು.ತಿ.ನ ಸಮಗ್ರ ಗದ್ಯ ಸಂಪುಟ : (ಸಂ)ಡಾ.ಜಿ.ಎಸ್.ಶಿವರುದ್ರಪ್ಪ, ಡಾ.ಎಚ್.ಎಸ್.ವೆಂಕಟೇಶ ಮೂರ್ತಿ, ಪುಟ-೩೮೪

೯೨. ಅದೇ ಪುಟ–೩೮೪

೯೩. ಅದೇ ಪುಟ–೩೮೪

# ಅಧ್ಯಾಯ – ೪

## ಭಾಷಿಕ ನೆಲೆಯ ಚಿಂತನೆಗಳು

### ಅ) ಶಬ್ದಮಾಧುರ್ಯ :-

ನಮ್ಮ ಭಾವನೆಗಳನ್ನು ಬರಹದ ರೂಪದಲ್ಲಿ ತರುವಾಗ ಒದಗುವ ಶಬ್ದಪುಂಜವೇ ಪ್ರಧಾನವಾದದ್ದು. ಕವಿಯಾದವನು ಭಾವಕ್ಕೆ ತಕ್ಕ ಶಬ್ದಗಳನ್ನು ಬಳಸಿ ಆ ಭಾವಕ್ಕೆ ಒಂದು ಅರ್ಥವನ್ನು ತರಲೆತ್ನಿಸುತ್ತಾನೆ. ಮನಸ್ಸಿಗೆ ಮುದವನ್ನು, ಹಿತವನ್ನು ನೀಡುವ ಈ ಶಬ್ದಗಳ ಜೋಡಣೆಯೇ ಶಬ್ದ ಮಾಧುರ್ಯ. ಇವು ಭಾವಕ್ಕೆ ಅಂಟಿಕೊಂಡಿರುವುದರಿಂದ ಇವುಗಳ ಪ್ರಾಮುಖ್ಯತೆ ಹೆಚ್ಚು.

"ಶಬ್ದರಾಶಿಯನ್ನು ಎರಡು ವರ್ಗಗಳಾಗಿ ವಿಂಗಡಿಸಬಹುದು. ಜ್ಞಾನವಾಹಿಗಳು ಮತ್ತು ಭಾವವಾಹಿಗಳು. ಶಾಸ್ತ್ರನಿಯುಕ್ತ ಶಬ್ದಗಳು ಜ್ಞಾನವಾಹಿಗಳು. ಇವುಗಳು ನಮಗೆ ತಿಳಿಯದ ವಿಷಯಗಳನ್ನು ತಿಳಿಸಿಕೊಡುವ ಕೆಲಸದಲ್ಲಿ ನಿರತವಾಗಿವೆ"[1]

ಸಾಹಿತ್ಯವು ಹೆಚ್ಚಾಗಿ ಭಾವಪ್ರಧಾನವಾದದ್ದರಿಂದ ಬಳಸುವ ಪದಗಳ ಬಗೆಯೂ ಕೂಡ ಸ್ವಲ್ಪ ಭಿನ್ನವೇ ಆಗಿರುತ್ತದೆ. ಹೀಗೆ ಸಾಹಿತ್ಯಕವಾಗಿ ಬಳಸಲ್ಪಡುವ ಪದಗಳು ಭಾವಕ್ಕೆ ಅನುಗುಣವಾಗಿ ಸಿದ್ಧವಾಗಬೇಕಾಗುತ್ತದೆ. ಇಲ್ಲದಿದ್ದರೆ ಅದು ನೀರಸ ಎಂದೆನಿಸುತ್ತದೆ. "ಶಬ್ದಗಳು ಭಾವದ ಮೈ ಶಬ್ದಗಳು ಕೆಡುವಾಗ ಭಾವಗಳೂ, ಕೊಳಕಾಗುತ್ತವೆ, ಕೆಡುತ್ತವೆ" ಎನ್ನುತ್ತಾರೆ ಪು.ತಿ.ನ. ಅಂದರೆ ಪು.ತಿ.ನ ರವರು ತಮ್ಮ ಪದಬಳಕೆಯ ಹಂತಗಳಲ್ಲಿ ತಾವು ವಹಿಸಬೇಕಾದ ಎಚ್ಚರಿಕೆಯನ್ನು ಇಲ್ಲಿ ಸುಪ್ತವಾಗಿ ತಿಳಿಸುವ ಪ್ರಯತ್ನವನ್ನು ನಡೆಸಿದ್ದಾರೆ.

ಒಳ್ಳೆಯ ಅಚ್ಚುಕಟ್ಟಾದ ಶಬ್ದಗಳಿಂದ ಆವತರಿತವಾದ ಸಾಹಿತ್ಯವನ್ನು ರಚಿಸಬೇಕಾದರೆ ಅದಕ್ಕೆ ತಕ್ಕುತಾದ ಶಬ್ದವನ್ನು ಬಳಸಿ ಆ ಭಾವಕ್ಕೊಂದು ಮಾಧುರ್ಯವನ್ನು ಒದಗಿಸಬೇಕಾಗುತ್ತದೆ. ಪು.ತಿ.ನ ರವರು ಸರ್ವಜ್ಞನ ವಚನವನ್ನು ಇಲ್ಲಿ ಸ್ಮರಿಸುತ್ತಾರೆ.

**"ಹೇಳಿದ್ದೆ ಹೇಳುವರು**
**ಕೇಳಿದ್ದೆ ಕೇಳುವರು**
**ಹೇಳಿದ್ದೆ ಕೇಳಿ ಸುಖಿಸುವರು"**[2]

ಈ ವಚನವನ್ನು ಇಲ್ಲಿ ಬಳಸಿರುವುದು ಔಚಿತ್ಯವೆನಿಸುತ್ತದೆ. ಏಕೆಂದರೆ ರಾಮಾಯಣ, ಮಹಾಭಾರತ ಮತ್ತು ವೇದಗಳನ್ನು ನಾವು ಇಂದಿಗೂ ಕೇಳುತ್ತಿದ್ದೇವೆ. ಆನಂದಿಸುತ್ತಿದ್ದೇವೆ. ಏಕೆ? ಏಕೆಂದರೆ ನಮ್ಮ ಹಿರಿಯರು ಶಬ್ದಕ್ಕೆ ಕೊಟ್ಟ ಮಹತ್ವದಿಂದ ಅವುಗಳ ಶಬ್ದ ಚಾತುರ್ದಿಂದಲೇ ಇಂತಹ ಮಹಾಕಾವ್ಯಗಳು ಜೀವಂತವೆನಿಸಿಕೊಂಡಿವೆ. ಆದ್ದರಿಂದ ಅವುಗಳನ್ನು ಪದೇ ಪದೇ ಕೇಳುತ್ತಿದ್ದರು ನಮಗೆ ನೀರಸವೆನಿಸದೆ ಸದಾ ಚೇತನವನ್ನು ತುಂಬುತ್ತಿವೆ.

"ಸಾಹಿತ್ಯದ ಶಬ್ದ ಪ್ರಕಾರಗಳಿಗೆ ತಮ್ಮ ಸೌಂದರ್ಯ ಮಾಧುರ್ಯಗಳನ್ನು ಪ್ರಕಾಶಪಡಿಸಲು ತಕ್ಕ ಮಾರ್ಗಗಳುಂಟು. ನಮ್ಮ ಪ್ರಾಚೀನಾಲಂಕಾರಿಕರು ಶ್ರೇಷ್ಠ ಲಕ್ಷ್ಯಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಕಿವಿಗಿಂಪಾಗಿ ಮನಸ್ಸನ್ನು ಆಪ್ಯಾಹನಗೊಳಿಸಿ ಲಾವಣ್ಯದಿಂದ ಶೋಭಿಸಬೇಕಾದ ಪದಗಳಿಗೆ ಶ್ಲೇಷ, ಪ್ರಸಾದ, ಸಮತೆ, ಮಾಧುರ್ಯ, ಸೌಕುಮಾರ್ಯ, ಅರ್ಥವ್ಯಕ್ತಿ, ಉದಾರತ್ವ, ಓಜಸ್ಸು, ಕಾಂತಿ ಮತ್ತು ಸಮಾಧಿ ಎಂಬ ಹತ್ತು ಗುಣಗಳಿರಬೇಕೆಂದೂ ಶೃತಿಕಟುತೆ ಮುಂತಾದ ದೋಷಗಳಿಂದ ಅವು ಮುಕ್ತವಾಗಿರಬೇಕೆಂದೂ ಹೇಳಿದ್ದಾರೆ"[3]

ಮೇಲೆ ತಿಳಿಸಿದ ಈ ಲಕ್ಷಣಗಳು ನಮ್ಮ ಹಿರಿಯ ಕವಿಗಳಲ್ಲಿ ಸಹಜವಾಗಿಯೇ ಇದೆ ಎಂದು ಪು.ತಿ.ನ ಹೇಳುತ್ತಾರೆ. ಉದಾ:–ರನ್ನ, ನಾರಣಪ್ಪ, ರಾಘವಾಂಕ, ಇತ್ಯಾದಿ. ಇವು ಕಾವ್ಯದ ಮಾಧುರ್ಯತೆಯನ್ನು ಹೆಚ್ಚಿಸುತ್ತದಲ್ಲದೆ ಭಾವನೆಗಳಿಗೆ ಸ್ಪಂದಿಸುವ ಅಂಶಗಳನ್ನು ಹೊಂದಿರುತ್ತವೆ.

ಪದಗಳಲ್ಲಿ ಬೆಡಗು, ಪ್ರಾಸ, ಅನುಪ್ರಾಸ, ಯಮಕ ಎಂಬ ಮೂರು ಶಬ್ದಾಲಂಕಾರಗಳಿಂದ ಬರುತ್ತದೆ ಎನ್ನುತ್ತಾರೆ ಪು.ತಿ.ನ. ಗದ್ಯದಲ್ಲಿ ಛಂದಸ್ಸು ನಿಗೂಢವಾಗಿ ಬಂದು ಇಂಥ ಮಾಧುರ್ಯತೆಯನ್ನು ಮೆರೆಯುತ್ತದೆ. ಇಂತ ಶಬ್ದಭಂಡಾರವು ಕವಿಗಳಿಗೆ ಪ್ರಯತ್ನಪೂರ್ವಕವಾಗಿ ಬರುತ್ತದೆ. ಛಂದಸ್ಸು, ಪ್ರಾಸ, ಅನುಪ್ರಾಸ, ಕನ್ನಡ ದೇಸಿ ಪದಗಳ ಬಳಕೆ, ಇವುಗಳು ಸಹೃದಯವನ್ನು ಆಶ್ಚರ್ಯಗೊಳಿಸದಿರದು.

ಹೀಗೆ ಸಾಹಿತ್ಯದ ಶಬ್ದಸಾಗರದಲ್ಲಿ ಮಿಂದ ಹಲವಾರು ಕವಿವರ್ಯರನ್ನು ಅವರ ಪದ್ಯಗಳ ಸಹಿತ ಸ್ಮರಿಸುತ್ತಾರೆ ಪು.ತಿ.ನ. ನಮ್ಮ ಮನಸ್ಸನ್ನು ಸೆಳೆಯುವ, ನಮ್ಮನ್ನು ಆಕರ್ಷಿಸುವ ನುಡಿಗಳು ನಾರಣಪ್ಪ, ಲಕ್ಷ್ಮೀಶ, ರಾಘವಾಂಕ ಮುಂತಾದ ಕವಿಗಳಲ್ಲಿ ಕಾಣಬಹುದು. ತಾವು ಹೇಳಹೊರಟಿರುವ ವಿಷಯವು ಸ್ಪಷ್ಟವೂ ಪರಿಪೂರ್ಣವೂ ಆಗಬೇಕಾದರೆ ಈ ಪ್ರಕಾರದ ಶಬ್ದಗಳಿಗೆ ಗಮನ ಕೊಡುವುದೇ ಒಂದು ಕಲೆ. ಆಗ ಮಾತ್ರ ಸಾಹಿತ್ಯದ ಮೂಲಕ ನಮಗೆ ಸರ್ವಸುಖವು ಲಭಿಸಲು ಸಾಧ್ಯ. ಇದನ್ನು ಲಕ್ಷ್ಮೀಶನ ಪದ್ಯದ ಮೂಲಕ ಪು.ತಿ.ನ ಹೀಗೆ ವರ್ಣಿಸಿದ್ದಾರೆ.

**ಕೈಗೆ ಮೊಲೆಗಳ ಬಿಣ್ಪು ಕಣ್ಗೆಚೆಲ್ವಿನ ಸೊಂಪು**
**ಬಾಯ್ಗೆ ಚೆಂದುಟಿಯಿಂಪು ಕಿವಿಗೆ ನುಡಿಗಳನುಣ್ಪಾಂ**
**ಸುಯ್ಗೆ ತನುವಿನ ಕಂಪು ಸೊಂಕಿಗಣ್ಣಿನ ತಂಪು ಚಿತ್ತಕೆ ಸೊಗಸಿನಲಿಂಪು**

"ಸಾಹಿತ್ಯದಲ್ಲಿ ಸಹೃದಯನಿಗೆ ಈ ಸುಖ ಸಕಲಲಾವಣ್ಯಯುತ ಶಬ್ದ ಶರೀರದಿಂದಲೇ ಲಭ್ಯ"[4] ಎನ್ನುತ್ತಾರೆ ಪು.ತಿ.ನ.

ಒಂದು ಭಾವ ಪೂರ್ಣ ಶಬ್ದ ಸಂಪತ್ತು ಹೇಗೆ ಸಹೃದಯನಲ್ಲಿ ನೆಲೆಯೂರಬೇಕು ಮತ್ತು ಅದಕ್ಕೆ ಕವಿಯ ಶಬ್ದಸಂಪತ್ತಿನ ಕುರಿತ ಎಚ್ಚರಿಕೆಯನ್ನು ಪು.ತಿ.ನ ಈ ಭಾಗದಲ್ಲಿ ಹೇಳುತ್ತಾರೆ. ಅಲ್ಲದೆ ಇದನ್ನು ಅನೇಕ ಕವಿವರ್ಯರ ಸಾಹಿತ್ಯಸೃಷ್ಟಿಯಿಂದ ನಮಗೆ ತಿಳಿಯಪಡಿಸಿದ್ದಾರೆ.

**ಆ) ಛಂದಸ್ಸು :–**

ಕಾವ್ಯವು ಸಹೃದಯರ ಮನಸ್ಸನ್ನು ಸೂರೆಗೊಳ್ಳಬೇಕಾದರೆ ಅದು ಒಂದು ಕ್ರಮಬದ್ಧವಾದ ಪದಗಳ ಜೋಡಣೆಯನ್ನು ಪಡೆದಿರಬೇಕು. ಕಾವ್ಯದಲ್ಲಿ ನಾವು ಪಡೆಯುವ ಆನಂದವು ಅದರ ಛಂದೋಬಂಧದಲ್ಲಡಗಿರುತ್ತದೆ. ಕವಿಯ ಸ್ವಪ್ರಯತ್ನದಿಂದ ಆತನ ಕೌಶಲದಿಂದ ಭಾವಕ್ಕೆ ತಕ್ಕ ಛಂದೋಲಹರಿಯು ದೊರಕಲು ಸಾಧ್ಯ. ಇದೇ ಕಾವ್ಯಗುಟ್ಟು ಕೂಡ ಆಗಿದೆ.

ಕವಿ ತನ್ನ ಕಾವ್ಯರಚನೆಯ ಸಂದರ್ಭದಲ್ಲಿ ಬಳಸುವ ಛಂದಸ್ಸು ಆತನಿಗೆ ದಿಗ್ಭ್ರಮೆಯನ್ನು ಹುಟ್ಟಿಸದಿರದು. ಏಕೆಂದರೆ ಆತನ ಮನಸ್ಸಿನಲ್ಲಿ ಹುದುಗಿರುವ ಪದಗಳನ್ನು ಆತ ಹೆಕ್ಕಿ ತೆಗೆಯಲು ಪ್ರಯತ್ನಿಸಿದಾಗ ಆತ ಒಂದು ಕ್ಷಣ ವಿಸ್ಮಿತನಾಗದೇ ಇರಲಾರ. ಏಕೆಂದರೆ ಸಹೃದಯರಲ್ಲಿ ಆತ ಚಿರಸ್ಥಾಯಿಯಾಗಿ ಉಳಿಯಬೇಕಾದರೆ ಇಂತಹ ಛಂದಸ್ಸಿನ ಅವಶ್ಯಕತೆ ಆತನಿಗೆ ಬಹುಮುಖ್ಯ. ಅಲ್ಲದೇ ಕಾವ್ಯದ ರಸದ ಕುರಿತು ಉನ್ನತಸ್ಥಾನಕ್ಕೇರಬೇಕಾದರೂ ಇದು ಬೇಕಾಗುತ್ತದೆ. ಇದು ಕಾವ್ಯಕ್ಕೆ ಒಂದು ಲಯವನ್ನು ತಂದುಕೊಡುತ್ತದೆ. "ಗಿರಿಶಿಖರದಲ್ಲಿ ಚಿಮ್ಮಿದ ಒಂದು ಬೊಗಸೆ ನೀರು ಕೆಳಗೆ ಇಳಿದು ಬರಬರುತ್ತಾ ಒಂದು ಮಹಾನದಿಯಾಗಿ ಹರಿಯುತ್ತದೆ. ಮಹಾಕಾವ್ಯಕ್ಕೆ ಛಂಧೋವತರಣ ಅಂಥ ಒಂದು ನಾಂದಿ"[39] ಎನ್ನುತ್ತಾರೆ ಪು.ತಿನ.

ಕವಿಯು ತನ್ನ ಮನಸ್ಸಿನಲ್ಲಿ ಮೂಡುವ ಭಾವನೆಗೆ ಒಂದು ಚಾಲನೆಯನ್ನು ನೀಡಬೇಕಾದರೆ ಆಕರ್ಷಕವಾದ ಭಾವಗಳು ವ್ಯಕ್ತವಾಗಬೇಕಾದರೆ ಆತನಿಗೆ ಛಂದಸ್ಸು ಬಹುಮುಖ್ಯ ಎನ್ನುತ್ತಾರೆ ಪು.ತಿ.ನ ಇಲ್ಲದಿದ್ದರೆ ಆತನ ಕಾವ್ಯ ಕೌಶಲತೆ ಅರ್ಥಹೀನವೆನಿಸುತ್ತದೆ. ಆದುದರಿಂದ ಛಂದಸ್ಸು ಕವಿಗೆ ಸರಸ್ವತಿ ಕೊಡುವ ವರ ಎಂದು ಪು.ತಿ.ನ ಹೇಳುತ್ತಾರೆ. ಅಂದರೆ ಇಲ್ಲಿ ವ್ಯಕ್ತವಾಗುವ ವಿಷಯವೆಂದರೆ ವಿಪುಲವಾದ ಭಾವಗಳಿಗೆ ನಡೆ ಒದಗಬೇಕಾದರೆ ಅದು ಛಂದಸ್ಸಿನಿಂದ ಮಾತ್ರ ಎಂಬುದು.

ಕನ್ನಡ ಮತ್ತು ಸಂಸ್ಕೃತ ಛಂದಸ್ಸಿನ ಲಯವನ್ನು ತಿಳಿಸುತ್ತಾ ಪ್ರಾಚೀನ ಕನ್ನಡ ಕವಿಗಳು ಸಂಸ್ಕೃತದ ವೃತ್ತಿಗಳನ್ನು ಬಳಸಿದರೂ ಅದರಲ್ಲಿ ಕನ್ನಡ ಭಾಷೆಗೆ ಯಾವುದೇ ಧಕ್ಕೆಯುಂಟು ಮಾಡಲಿಲ್ಲವೆಂಬ ಮಾತನ್ನು ಹೇಳುತ್ತಾರೆ. ಉತ್ಪಲಮಾಲೆ, ಚಂಪಕಮಾಲೆ ಎಂಬ ವೃತ್ತಗಳು ಕನ್ನಡಕ್ಕೆ ವಿಶಿಷ್ಟವಾದ ಅಂತರ ಲಯವನ್ನು ಪಡೆದಿದೆ. ಹಾಗೆಯೇ ಸಂಸ್ಕೃತದ ಛಂದಸ್ಸಿನಲ್ಲಿರುವ 'ಯತಿ'ಯ ಕುರಿತು ಹೇಳುವಾಗ ಅದು ಕನ್ನಡಕ್ಕೆ ಅಷ್ಟು ಸೂಕ್ತವಲ್ಲವೆಂದು ಎರಡು ಪದ್ಯಗಳ ಮೂಲಕ ವಿಶದಪಡಿಸುತ್ತಾರೆ.

**ಕೆಲರಂ ಬೀಸಿಯುಮೊಕ್ತಿಯುಂ ಪಿಡಿದುಮಾರ್ದಿಟ್ಟುಂ ಗದಾದಂಡದಿಂ**
**ಕೆಲರಂ ಗುರ್ದಿಯುಮರ್ದಿಯಂ ತಿರುಪಿಯುಂ ತೇದುಂಭುಜಾದಂಡದಿಂ**
**ಕೆಲರಂ ಕುತ್ತಿಯುಮೆತ್ತಿಯುಂ ಪೊಣರಿಯಂ ಪೊಯ್ದುಂ ಧನುರ್ದಂಡದಿಂ**
**ಕಲಿಕಟ್ಟಾನೆ ಕಡಂಗಿ ಕೊಲ್ವತೆರದಿಂ ಕೊಂದಂ ಮರುನ್ನಂದನಂ**

ಇಲ್ಲಿ ಶ್ಲೋಕವು ಚೆನ್ನಾಗಿದೆ. ಆದರೆ ನಿಯತವಾದ ಯತಿಯಿಂದಲೇ ಇದರ ಸಾರ ಸಪ್ಪೆ ಎನಿಸುತ್ತದೆ.

**ಪ್ರಕಟಾಟೋಪದ ಪೊಯ್ದುಪೊಯ್ದು ಶಿಲೆಯೊಳ್**
**ವೃಕ್ಷಂಗಳೊಳ್ ಮೋದಿ ಮೋದಿ**
**ಕರದ್ವೈತದೆ ಗುರ್ದಿಗುರ್ದಿ ಕಠಿಣಾಂಗಂ ನುರ್ಗುನುರ್ಗಪ್ಪಿನಂಬತನಂ**
**ಬಾಹುಮದಾವಳಂಬನಕನನುರ್ದುರ್ದುಗ್ರ ವಿದ್ಯುತ್ ಕದಂಬಕನಂ**
**ವೈರಿ ಗಜೇಂದ್ರನಂ**
**ಬಕನಂ**
**ಕೊಂದಂ ಮರುನ್ನಂದನಂ॥**

ಇದು ಆಧುನಿಕ ನವ್ಯಕಾವ್ಯದ ರೀತಿಯಲ್ಲಿ ಬರೆಯಲಾಗಿದೆ. ಇಲ್ಲಿ ಯತಿ ಇಲ್ಲ. ಇಲ್ಲದರ ಕೊರತೆಯೂ ಕಾಣಿಸದೂ ಎಂದು ಪು.ತಿ.ನ ವಿವರಿಸುತ್ತಾರೆ.

ಕನ್ನಡದಲ್ಲಿ ವೃತ್ತಗಳಲ್ಲಿ ಕೆಲವೊಂದನ್ನು ಬಳಸಿ, ಮಾತ್ರಾಗಣ ಅನುಗುಣವಾಗಿ, ಕಂದಪದ್ಯಗಳನ್ನು ಬಳಸಿಕೊಂಡಿದ್ದರಿಂದ ಅದರ ಕಾವ್ಯ ನಡೆಯು ಮುಂದುವರೆಯಲು ಪೂರಕವಾಗಿದೆ. 'ಯತಿ'ಯು ಇಂದು ವೃತ್ತಗಳಲ್ಲಿ ಕಂಡುಬರದೆ ಅಕ್ಕರ, ತ್ರಿಪದಿ, ಸಾಂಗತ್ಯ ಮೊದಲಾದವುಗಳಲ್ಲಿ 'ಯತಿ' ಈಗಲೂ ಇದೆ ಎಂಬುದನ್ನೂ ಪು.ತಿ.ನ ಸ್ಪಷ್ಟಪಡಿಸುತ್ತಾರೆ.

ನಡುಗನ್ನಡ ಸಾಹಿತ್ಯದಲ್ಲಿ ಹೆಚ್ಚಾಗಿ ನಾವು ಕ್ರಾಂತಿಯ ಸ್ವರೂಪವನ್ನು ಕಾಣುತ್ತೇವೆ. ಸಂಪ್ರದಾಯ ಹಾಗೂ ಪರಂಪರೆಯ ಮಡಿವಂತಿಕೆಯನ್ನು ಬಿಟ್ಟು ಒಂದು ಹೊಸ ಆಲೋಚನಾ ಕ್ರಮದಲ್ಲಿ ಸಾಹಿತ್ಯ ಬೆಳೆಯಿತು. ವಚನಸಾಹಿತ್ಯ ಇದಕ್ಕೆ ಉದಾಹರಣೆ ಎನ್ನಬಹುದು. ಇಲ್ಲಿ ವೀರಶೈವ ಧರ್ಮ ಬೆಳಕಿಗೆ ಬಂದಂತೆ ಹೊಸಭಾವಕ್ಕೆ ತಕ್ಕಂತೆ ಹೊಸ ಛಂದಸ್ಸು ಹುಟ್ಟಿತು.

ಕಾಲಕಾಲಕ್ಕೂ ಹೊಸ ಹೊಸ ಛಂದಸ್ಸಿನ ಲಯಗಳು ಬಂದವು. ಆದರೆ ಒಬ್ಬರು ಮತ್ತೊಬ್ಬರಿಗಿಂತ ಭಿನ್ನವಾದ ಛಂದಸ್ಸನ್ನು ಪಡೆದರೂ, ರಾಘವಾಂಕ ಷಟ್ಪದಿಯಾದರೆ, ಹರಿಹರ ರಗಳೆ, ಸರ್ವಜ್ಞ ತ್ರಿಪದಿ ಹೀಗೆ ಆಯಾ ಕವಿಗೆ ಸೀಮಿತವೆಂಬಂತೆ ಹೊಸ ಪ್ರಕಾರಗಳು ಬಂದು ನೆಲೆಗೊಂಡವು.

ಆಧುನಿಕ ಕನ್ನಡ ಸಾಹಿತ್ಯ ಬಂದ ನಂತರ ಛಂದಸ್ಸು ಕೂಡ ಕೊಂಚ ಬದಲಾಯಿತು. ಪಾಶ್ಚಾತ್ಯರ ಪ್ರಭಾವದಿಂದ ಪ್ರೇರಿತಗೊಂಡ ಈ ಸಾಹಿತ್ಯ ಸಹಜವಾಗಿಯೇ ಅದರ ಛಂದಸ್ಸಿನ

ಪ್ರಭಾವಕ್ಕೂ ಒಳಗಾಯಿತು. ಇಲ್ಲಿ ಸರಳ ರಗಳೆಗಳು ಮತ್ತು ಮಾತ್ರಾವೃತ್ತಗಳ ಸ್ವರೂಪ ಒಟ್ಟೊಟ್ಟಾಗಿಯೇ ಇಲ್ಲಿಯ ಕವಿಗಳ ಕಾವ್ಯ ಸ್ವರೂಪದಲ್ಲಿ ಕಂಡುಬಂದಿತು.

ಇಂದು ಆಧುನಿಕ ಕಾವ್ಯದಲ್ಲಿ ರಸಕ್ಕಿಂತ ಹೆಚ್ಚಾಗಿ ವಸ್ತುಗಳಲ್ಲಿ ವಿಡಂಬನೆಯ ಸಾಮಗ್ರಿಗಳೇ ಹೆಚ್ಚು. ಲೋಕದಲ್ಲಿ ಕಂಡುಬರುವ ಕಷ್ಟ, ಕ್ರೌರ್ಯ, ವಿಷಾದ, ಅಸಹ್ಯ, ಶೋಕ, ಚಿಂತೆ, ಕಾರ್ಪಣ್ಯ ಇವುಗಳು ವ್ಯಕ್ತಗೊಳ್ಳುವ ಕಾವ್ಯನಡಿಗೆಯೇ ಬೇರೆ ತರನಾಗಿರುತ್ತದೆ. ಆದರೆ ಇಂದು ಆಧುನಿಕ ಛಂದೋ ಪ್ರಕಾರ ಇವುಗಳನ್ನು ಹೆಚ್ಚು ತೀವ್ರವಾಗಿ ತರುವ ಪ್ರಯತ್ನದಲ್ಲಿದೆ. ಶೃಂಗಾರ, ಕರುಣಾ, ವೀರರಸಗಳ ಕುರಿತ ಛಂದಸ್ಸಿನ ಚಲನಗಳಂತಿಲ್ಲ ಎಂದು ಪು.ತಿ.ನ ವಿವರಿಸಿದ್ದಾರೆ.

"ರಸಮುಟ್ಟಿದ ಕವಿತೆಗಳಲ್ಲಿ ಅವುಗಳ ನಿರ್ವಹಣತಂತ್ರ ಬಹು ಕುಶಲವೂ, ಜಟಿಲವೂ ಆಗಿದ್ದು ಮೇಲುತೋರಿಕೆಗೆ ಮಾತ್ರ ವಿಕಲ ವಿಕಾರವೆನಿಸುವ ಅವುಗಳ ಸ್ವಚ್ಛಂದ ಛಂದೋರೂಪಗಳು ರಸಗ್ರಹಣ ಚತುರನಾದ ಸಹೃದಯದಲ್ಲಿ ಬೆರಗನ್ನು, ಪ್ರೀತಿಯನ್ನು ಹುಟ್ಟಿಸುತ್ತದೆ"[1]

ಪ್ರಾಚೀನ, ನಡುಗನ್ನಡ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಛಂದಸ್ಸಿನಲ್ಲಾದ ಬದಲಾವಣೆ, ಪ್ರೇರಣೆ, ಪ್ರಭಾವಗಳನ್ನು ಕುರಿತು ಪು.ತಿ.ನ ಈ ಭಾಗದಲ್ಲಿ ತಿಳಿಸಿದ್ದಾರೆ. ಯಾವುದೇ ಪ್ರಕಾರದ ಕಾವ್ಯತಂತ್ರವೇ ಆಗಿರಲಿ ಅದು ರಸಪ್ರಧಾನವಾದ ಸೊಗಸನ್ನು ಹೊರಹೊಮ್ಮಿಸುವಂತಿದ್ದರೆ ಸಾಕು. ಅದು ಸಹೃದಯನ ಮನಸ್ಸನ್ನು ಮೋಹಗೊಳಿಸದಿರದು ಎಂಬುದೇ ಪು.ತಿ.ನ ರವರ ಅಭಿಪ್ರಾಯವಾಗಿದೆ.

### ಇ) ಗದ್ಯಕಲೆ :-

'ಗದ್ಯಕಲೆ ಎಂಬುದು ಭವದ ಆಗುಹೋಗುಗಳನ್ನು ಸರಳ ಹಾಗೂ ಸುಸಂಸ್ಕೃತವೂ ಆದ ಭಾವಗಳಲ್ಲಿ ಅಭಿವ್ಯಕ್ತಿಸುವ ಕಲೆ. "ಎಲ್ಲೂ ಪದ್ಯತನವನ್ನು ಮುಟ್ಟದಿರುವುದು ಹಾಗೆ ಮುಟ್ಟದೆಯೆ ಕಾವ್ಯಗುಣವನ್ನು ಪ್ರದರ್ಶಿಸುವುದು ಈ ಕಲೆಯ ರಹಸ್ಯ"[2]

ಪ್ರಾಪಂಚಿಕ ಅನುಭವಗಳ ಅಭಿವ್ಯಕ್ತಿಯಿಂದಲೇ ಇದರ ರಸವು ವ್ಯಕ್ತಗೊಳ್ಳುತ್ತದೆ. ಆದರೆ ಇದು ಅನುಸರಿಸುವ ಮಾರ್ಗ ಪದ್ಯಕ್ಕಿಂತ ಭಿನ್ನವಾದುದು. ಗದ್ಯಕಲೆಯೂ ವಾಸ್ತವಕ್ಕೆ ತೀರಾ ಹತ್ತಿರವಾದದ್ದು. ಭವದ ಸೆಳೆತಕ್ಕೆ ಸಮೀಪವಾಗಿಯೂ ರಸಪ್ರಾಪ್ತಿಗೊಳಿಸುವ ಕೌಶಲ ಇದಕ್ಕಿದೆ.

ಪದ್ಯಕ್ಕೆ ಛಂದಸ್ಸಿನ ಸೌಕರ್ಯವುಂಟು. ಆದರೆ ಗದ್ಯಕ್ಕೆ ಅದಾವುದೂ ಇಲ್ಲ. ಗದ್ಯದ ನಡೆಗೆ ಕುಶಲನಾದವನು ಸೂಕ್ತಪದ ರಚನೆಗಳಿಂದ ತಾನು ಹೇಳಬೇಕಾದ ವಿಷಯಕ್ಕೆ ತಲುಪಬೇಕಾಗುತ್ತದೆ. ಪದ್ಯಕ್ಕಿರುವ ಉಪಮಾಲಂಕಾರಗಳು ಗದ್ಯಕ್ಕೂ ಒದಗಿಬಂದರೆ ಅದು ತಪ್ಪೇನಿಲ್ಲ ಎನ್ನುತ್ತಾರೆ ಪು.ತಿ.ನ. ಅವರ ಈ ಮಾತನ್ನು ಸ್ಪಷ್ಟಪಡಿಸಲು ಹಾ.ಮಾ.ನಾಯಕರ ಈ ವಾಕ್ಯಗಳನ್ನು ಬಳಸುತ್ತಾರೆ. "ವಸುಂಧರೆಯ ಮುಖ ಎದುರುಬಂತು, ಕನಸು ತುಂಬಿದ ಕಣ್ಣುಗಳು, ಕರುಳಬಳ್ಳಿಗಳು, ಹೂಬಿಟ್ಟ ಬಿಳಿಯ ಬೆಂಡೋಲೆಗಳು... ಚೆಲುವಿನ ಸ್ಪಷ್ಟತೆಯನ್ನು ವಿವರಿಸುವ ಈ ರೂಪಕ ಎಷ್ಟು ಸೊಗಸಾಗಿದೆ.

ಗದ್ಯಕ್ಕೆ ಇಂತಹ ರೂಪಕಗಳಿಂದ ಸೌಂದರ್ಯ ಒದಗಲು ಸಾಧ್ಯ ಎಂಬುದು ಪು.ತಿ.ನ ಅವರ ಅಭಿಪ್ರಾಯ.

“ಪದ್ಯದಲ್ಲಿ ವಾಸ್ತವ ಹುಚ್ಚಿಗೇರಬೇಕು; ಗದ್ಯದಲ್ಲಿ ಹುಚ್ಚು ವಾಸ್ತವಕ್ಕಿಳಿಯಬೇಕು ಹೀಗಿದೆ ಇವುಗಳ ನಿಯಮ”[೮] ಇದು ಒಪ್ಪತಕ್ಕಮಾತು ಎನ್ನಬಹುದು. ಗದ್ಯಕಲೆಯನ್ನು ಪದ್ಯದಂತೆ ಸ್ವಾರಸ್ಯಕರಗೊಳಿಸಬೇಕಾದರೆ ಅಲ್ಲಿ ರೂಪಕಗಳನ್ನು ಬಳಸಿ ಅದನ್ನು ಕೂಡ ಅಂದರೆ ಗದ್ಯಕಲೆಯನ್ನು ಕೂಡ ಪದ್ಯದಂತೆ ರಸಯುಕ್ತಗೊಳಿಸಬಹುದು ಎಂಬುದೇ ಪು.ತಿ.ನ ಅವರ ನಿಲುವು.

ಅಂತಿಮವಾಗಿ ಪು.ತಿ.ನ ಹೇಳುವುದೇನೆಂದರೆ ಗದ್ಯಕಲೆ ಎಂಬುದು ಸಾಮಾನ್ಯವಲ್ಲ. ಅದು ಕೂಡ ಬೃಹತ್ ಪಾಂಡಿತ್ಯದ ಅಪೇಕ್ಷೆಯುಳ್ಳಂತಹ ಸಾಹಿತ್ಯದ ಬಗೆ. ಪದ್ಯಕ್ಕೆ ಪ್ರಾಸ, ಛಂದಸ್ಸು ಎಂಬ ಬಂಧಗಳ ಸೌಲಭ್ಯವಿರುತ್ತದೆ. ಆದರೆ ಗದ್ಯಕಲೆ ನಮ್ಮ ಪಾಂಡಿತ್ಯಕ್ಕೆ ಅದನ್ನು ನಾವು ಅಳವಡಿಸಿಕೊಳ್ಳುವ ಕೌಶಲ, ಕುಶಲ ಲೇಖಕನದ್ದಾಗಿರುತ್ತದೆ. ಹೀಗೆ ಪದ್ಯ ಗದ್ಯ ಇವುಗಳ ನಡುವಿನ ಸಂಬಂಧ ಹಾಗೂ ಗದ್ಯದ ಪ್ರಾಮುಖ್ಯತೆಯನ್ನು ಸಹ ಈ ಭಾಗದಲ್ಲಿ ಪು.ತಿ.ನ ಎಳೆ ಎಳೆಯಾಗಿ ತಿಳಿಸಿದ್ದಾರೆ.

## ಅಡಿ ಟಿಪ್ಪಣಿ

೧. ಪು.ತಿ.ನ.ಅವರಸಮಗ್ರಗದ್ಯಸಂಪುಟ: (ಸಂ)ಡಾ.ಜಿ.ಎಸ್.ಶಿವರುದ್ರಪ್ಪ, ಡಾ.ಎಚ್.ಎಸ್.ವೆಂಕಟೇಶ ಮೂರ್ತಿ

೨. ಅದೇ ಪುಟ–೪೩೮

೩. ಅದೇ ಪುಟ–೪೩೨

೪. ಅದೇ ಪುಟ–೪೪೨

೫. ಅದೇ ಪುಟ–೪೪೩

೬. ಅದೇ ಪುಟ–೪೪೬

೭. ಅದೇ ಪುಟ–೪೪೭

೮. ಅದೇ ಪುಟ–೪೪೮

## ಅಧ್ಯಾಯ – ೫

## ಕೆಲವು ಪಾರಿಭಾಷಿಕ ಶಬ್ದಗಳು [ಪೌತಿನ್ಯ]

ಪು.ತಿ.ನ ರವರು ತಮ್ಮ ಓರಗೆಯ ಇತರೆ ಕವಿ, ಲೇಖಕರಿಗಿಂತ ವಿಶಿಷ್ಟವಾದ, ಸಂಸ್ಕೃತ ಭೂಯಿಷ್ಟವಾದ ಹಾಗೂ ಸಮಾಸಯುಕ್ತವಾದ ಪದಬಂಧಗಳನ್ನು ತಮ್ಮ ಸಾಹಿತ್ಯರಚನೆಯಲ್ಲಿ ಬಳಸಿದ್ದಾರೆ. ಈ ವಿಶಿಷ್ಟವಾದ ಪಾರಿಭಾಷಿಕ ಪದಗಳು ಅವರ ವಿಶಿಷ್ಟವಾದ ವ್ಯಕ್ತಿತ್ವದ ವಿಶಿಷ್ಟ ಛಾಪನ್ನು ಅಭಿವ್ಯಕ್ತಿಸುತ್ತವೆ. ಆದ್ದರಿಂದ ನಾನು ಇದನ್ನು 'ಪೌತಿನ್ಯ' ಎಂಬ ವಿಶೇಷ ಹೆಸರಿಂದ ಗುರುತಿಸಿದ್ದೇನೆ.

"ಶಬ್ದದೊಳಗಣ ನಿಶ್ಯಬ್ದದಂತೆ" ಎಂಥ ಚಿತ್ತಾಕರ್ಷಕವಾದ ಮಾತು. ಕಾವ್ಯದ ಆತ್ಮ ಕವನದಲ್ಲಿ ಹಾಗೆ ಹುದುಗಿದೆ. ಅದು ಅತೀಂದ್ರಿಯ ಅನುಭಾವ್ಯ. ಎಂಥ ಸಾಲಂಕೃತ ಛಂದೋಬದ್ಧ ಶಬ್ದಪುಂಜವೇ ಆಗಲಿ ಅದು ಅದರೊಳಗಣ ಈ ನಿಶ್ಯಬ್ದವನ್ನು ಅಂದರೆ ಅನಿರ್ವಾಚ್ಯವನ್ನು ಕೇಳಿಸುವುದಕ್ಕೆ ಸಮರ್ಥವಾದರೆ ಮಾತ್ರ ಕವನವೆನ್ನಿಸಿಕೊಂಡೀತು. ಸಹೃದಯಗ್ರಾಹ್ಯವಾಗಿ ಆನಂದವನ್ನೂ ಹರಡೀತು. ಮಿಕ್ಕವೆಲ್ಲ ಅಸಮರ್ಥ, ಆದುದರಿಂದ ವ್ಯರ್ಥ. ಆದರೆ ಈ ನಿಶ್ಯಬ್ದ ಶಬ್ದದೊಳಗಣ ನಿಶ್ಯಬ್ದ. ಅರ್ಥಸಹಿತವಾದ ಪದಸಮೂಹದಿಂದ ಈ ನಿಶ್ಯಬ್ದವನ್ನು ವ್ಯಂಜಿಸುವ ಕೌಶಲವನ್ನು ಸಾಧಿಸಬಲ್ಲ ಮಾಂತ್ರಿಕನನ್ನು ಮಾತ್ರ ನಾವು ಕವಿ ಎನ್ನುತ್ತೇವೆ"[೧] ಎಂದು ಪು.ತಿ.ನ ಹೇಳುತ್ತಾರೆ. ಅಂತಹ ಮಾಂತ್ರಿಕ ಶಕ್ತಿ ಅವರಲ್ಲಿಯೂ ಇದೆ ಎಂದು ಹೇಳುವುದರಲ್ಲಿ ಯಾವ ಸಂಶಯವೂ ಇಲ್ಲ.

ತಮ್ಮ 'ರಸಪ್ರಕಾಶ' ಎಂಬ ಕೃತಿಯಲ್ಲಿರುವ ಪದ್ಯಗಳಲ್ಲಿ ಅವರು ಬಳಸಿರುವ (ಸ್ವತಃ ಅವರೇ ನೀಡಿರುವ) ಪಾರಿಭಾಷಿಕ ಪದಗಳು ಮತ್ತು ಅದರ ಅರ್ಥವನ್ನು ಇಲ್ಲಿ ನೋಡೋಣ.

೧. ರಸಪದ – ರಸಸಿದ್ಧಿ

೨. ಉನ್ಮೀಲನ – ಅರಳು, ಕಣ್ಣುತೆರೆಯುವಿಕೆ

೩. ಗುಂಭಿತ – ಒಳಗೊಂಡ

೪. ಅಸಿತಾಧವ – ಕಾಳಿಯ ಗಂಡ

೫. ರಸತೋಷ – ರಸಾನಂದ

೬. ದಿತ್ಸಾ – ಕೊಡುವ ಇಚ್ಛೆ

೭. ಉತ್ಸರ್ಪ – ಹೊರಬರುವಿಕೆ, ಅಭಿವ್ಯಕ್ತಿ, ಉತ್ಕರ್ಷ, ಆಧಿಕ್ಯ

೮. ಭವಛದ್ಮಂ – ಈ ಭವದಿಂದ ಅಥವಾ ಲೋಕಾನುಭವದಿಂದ ಆಚ್ಛಾದಿತವಾಗಿರುವುದು ಅಥವಾ ಆವರಿಸಲ್ಪಟ್ಟಿರುವುದು

೯. ಉತ್ಕರ್ಷಕ – ಏಳ್ಗೆ

೧೦. ಗ್ರಥಿತ – ಕ್ರಮಬದ್ಧವಾಗಿ ಜೋಡಿಸಿದ

೧೧. ಸ್ವಾಂತ – ಮನಸ್ಸು, ತನಗೆ ಸಂಬಂಧಿಸಿದ ಈ ವಾಸ್ತವದ

೧೨. ನಿರ್ಗ್ರಥನ – ಕಥನ, ನಿರೂಪಣೆ

೧೩. ಭಣಿತೆ – ನುಡಿ, ಉಕ್ತಿ

೧೪. ಮಾನಜ – ಪ್ರತ್ಯಕ್ಷಾದಿ ಪ್ರಮಾಣ ಜನ್ಯವಾದುದು

೧೫. ಮೇಯಸ್ಥಾನ – ಪ್ರತ್ಯಕ್ಷಾದಿ ಪ್ರಮಾಣಗಳಿಂದ ಉಂಟಾದ ತಿಳವಳಿಕೆ

೧೬. ರುಚಿರ – ಸುಂದರ, ಮನೋಜ್ಞ

೧೭. ಪ್ರಚಯ – ಸಮೂಹ

೧೮. ಅಭುಕ್ತ – ಅನುಭವಕ್ಕೆ ಪಕ್ಕಾಗದ

೧೯. ಓವಾಂತರ – ಪ್ರೀತಿಯುಳ್ಳವರ

೨೦. ಕಾಶ್ಯಪಿ – ಭೂಮಿ

೨೧. ಆತ್ಮಪ್ರಪೆ – ಆತ್ಮವನ್ನು ತಣಿಸುವಂಥ, (ಪ್ರಪೆ–ಅರವಟ್ಟಿಗೆ)

೨೨. ಪಡುಹ – ಅನುಭವ

೨೩. ಓದನ – ಅನ್ನ, ಆಹಾರ

೨೪. ಕವಿ+ಈರಿತಂ – ಕವಿಯ ನುಡಿ, ಕವಿತೆ

೨೫. ಚಿದ್+ರುಜಾ+ಅಪಹಂ – ಮನಸ್ಸಿನ ಬೇಗುದಿಯನ್ನು ಕಳೆಯುವ

೨೬. ಪರಿಸ್ಫೂರ್ಜನ – ಪ್ರಕಾಶ, ತೇಜಸ್ಸು, ಅವಿರ್ಭಾವ

೨೭. ನಿಳಿಂಪ – ದೇವತೆ

೨೮. ಆದ್ಯವಿಮುಕ್ತಂ – ತತ್ಕಾಲೀನತೆಯಿಂದ ಬಿಡುಗಡೆ ಪಡೆದ

೨೯. ಅನವದ್ಯ – ದೋಷರಹಿತ, ನಿರ್ಮಲ

೩೦. ಮೋದನ – ಸಂತೋಷ, ಆನಂದ

೩೧. ಅಜಸ್ರ – ನಿರಂತರ

೩೨. ಪ್ರಜನಿಸು – ಹುಟ್ಟುವುದು, ನಿಷ್ಪತ್ತಿ

೩೩. ವಾಗಬ್ದಸ್ರವ – ಮಾತೆಂಬ ಮೋಡದ ವೃಷ್ಟಿ

೩೪. ಜಿಗುನೆ – ಯಮುನೆ

೩೫. ವಿಸಂಜ್ಞ – ಎಚ್ಚರ ತಪ್ಪಿದ

೩೬. ಮಾತ್ರಾಸ್ಪರ್ಶ – ಇಂದ್ರಿಯ ವಿಷಯಗಳ ಸಂಪರ್ಕ

೩೭. ತಿತಿಕ್ಷು – ಲಕ್ಷಿಸದಿರುವವ, ಸಹನೆಯುಳ್ಳವ

೩೮. ಹೃದಿಹೃದಿಶಯ – ಹೃದಯ ಹೃದಯಗಳಲ್ಲಿ ಪವಡಿಸಿರುವ (ಪರಮಾತ್ಮ)

೩೯. ಬೇಹರ – ವ್ಯವಹಾರ, ನೈಪುಣ್ಯ

೪೦. ನರ್ಮಸಖ – ಆಪ್ತಸ್ನೇಹಿತ

೪೧. ಮೃಗ್ಯಂ – ಹುಡುಕಬೇಕಾದದ್ದು, ಅನ್ವೇಷಿಸತಕ್ಕುದು.

೪೨. ಅಮರುವ – ತಗುಲಿಕೊಳ್ಳುವ

೪೩. ಮೂಲೋರ್ಜೆ – ಮೂಲಸತ್ವ

೪೪. ಊಷರ – ಬಂಜರು

೪೫. ಊರ್ಜಸ್ವಿ – ಶಕ್ತಿ ವಿಶೇಷವುಳ್ಳವ

೪೬. ಅಹಂತೆ – ನಾನು ಎನ್ನುವ ಭಾವನೆ

೪೭. ಊಣೆಯ – ಕೊರತೆ, ವ್ಯತ್ಯಾಸ

೪೮. ಸ್ಫೂರ್ಜನ – ಉತ್ಸಾಹ, ತೇಜಸ್

೪೯. ಶಮದಂ – ಶಮವನ್ನು (ಚಿತ್ತದ ಸ್ವಾಸ್ಥ್ಯವನ್ನು) ನೀಡುವ

೫೦. ಭಾವಕತಾ – ಭಟ್ಟನಾಯಕನು ಕಾವ್ಯ ನಾಟಕಗಳಲ್ಲಿ ಶಬ್ದಗಳಿಗೆ ಅಭಿದಾಶಕ್ತಿಯ ಜತೆಗೆ ಭಾವಕತ್ವ ಮತ್ತು ಭೋಜಕತ್ವ ಎಂಬ ಎರಡು ವ್ಯಾಪಾರಗಳಿವೆಯೆಂದು ಹೇಳುತ್ತಾನೆ. ಕಾವ್ಯ ನಾಟಕಾದಿಗಳಲ್ಲಿ ವರ್ಣಿತವಾಗಿರುವ ವಿಭಾವಾದಿಗಳಿಗೆ ಸಾಧಾರಣತ್ವವನ್ನುಂಟು ಮಾಡಿ ಅವು ರಸವಿಷಯವಾಗುವಂತೆ ಮಾಡುವುದು ಭಾವಕತ್ವ.. ಭಾವಕತ್ವ ವ್ಯಾಪಾರದಿಂದ ಭಾವಿತವಾಗುವ ಸ್ಥಾಯಿಭಾವವೇ ರಸ.

೫೧. ಭೋಜಕತೆ – ಸಾಮಾಜಿಕನ ಹೃದಯವು ದ್ರವಿಸಿ, ವಿಸ್ತಾರವಾಗಿ, ವಿಕಾಸ ಹೊಂದುವ ಮೂಲಕ ರಸವು ಭೋಗವಿಷಯವಾಗುವ ವ್ಯಾಪಾರವೇ ಭೋಜಕತ್ವ

೫೨. ಸಾವಿಲಿತೆ – ಸಾವಿಲ್ಲದಿರುವಿಕೆ, ಅಮರತ್ವ

೫೩. ಆಸ್ಮಿತೆ – ನಾನು ನನ್ನದೆಂಬ ಅಭಿಮಾನ

೫೪. ಕಸುಕ – ಅಪ್ರಬುದ್ಧ

೫೫, ಪಸದನಿಗ – ಅಲಂಕಾರಪ್ರಿಯ

೫೬. ಅನುಭೂತಿ – ಎನಿಸಿಕೆ, ಅನುಭವಿಸುವಿಕೆ

೫೭. ಅಚ್ಛಾಚ್ಛರ – ಅತಿಶುಭ್ರ, ಶುದ್ಧವಾದ ಹೃದಯವುಳ್ಳವ

೫೮. ಅಭಿಗಮನ – ಅತ್ತಕಡೆ ಚಲಿಸುವ

೫೯. ಅಕ್ಷಕಕ್ಷೆ – ಜ್ಞಾನದ ವಲಯ

೬೦. ಭಣಿತ – ಚಮತ್ಕಾರವಾದ ಮಾತು

೬೧. ವಿನಕೆ – ಸಂಗೀತವನ್ನು ಕೇಳುವ

೬೨. ನಿಷ್ಪ್ರಭ – ಕಳಾಹೀನ

೬೩. ಊಣೆಯ – ಕೊರತೆ

೬೪. ಚಷಕ – ಪಾನಪಾತ್ರೆ

೬೫. ರಸತರ್ಷಿತ – ರಸದ ನೀರಡಿಕೆಯುಳ್ಳ

೬೬. ಮಾಮತಿ – ಮಹಾಮತಿ

೬೭. ಪರಭೃತಿಕೆ – ಕೋಗಿಲೆ

೬೮. ಉನ್ಮದಿಕೆ – ಅಮಲು

೬೯. ರಸದೂರ – ಸ್ಪೆಕಿಕಲ್ ಡಿಸ್ಟೆನ್ಸ್ (ಮಾನಸಿಕ ದೂರ) ಎಂಬ ಪಾಶ್ಚಾತ್ಯ ಪರಿಕಲ್ಪನೆ

೭೦. ತಾದಾತ್ಮ್ಯೋದ್ಬೋಧನಮೇ – ತಾದಾತ್ಮ್ಯವನ್ನು ಉಂಟು ಮಾಡುವುದೇ

೭೧. ಲಸನ – ಹೊಳೆಯುವ

೭೨. ಅಭೀಪ್ಸೆ – ಅಪೇಕ್ಷೆ

೭೩. ಅನ್ಯಾಶಂಸಾಸಕ್ತಂ – ಬೇರೆಯವರನ್ನು ಹೊಗಳುವುದರಲ್ಲಿ ನಿರತವಾದ

೭೪. ಸಾಕಲ್ಯಚ್ಯುತ – ಸಮಗ್ರತೆಯಿಂದ ಹೊರತಾದದ್ದು, ಅಸಮಗ್ರ

೭೫. ಕ್ಷಪಿತ+ಆಸ್ರವ – ಎಸೆದ ಅಥವಾ ಕಳುಹಿಸಿದ ಪ್ರವಾಹ

೭೬. ವಾಕ್ಕಲೆ – ಮಾತಿನ ಕಲೆಗಾರಿಕೆ

೭೭. ಪ್ರಕೃಷ್ಟ – ಶ್ರೇಷ್ಠ

೭೮. ಕ್ಷೀರೋದಧಿರುಹವೃಕ್ಷಂ – ಹಾಲ್ಗಡಲಿನಿಂದ ಬಂದ ಮರ, ಕಲ್ಪವೃಕ್ಷ

೭೯. ಪ್ರರೋಹ – ಮೊಳಕೆ, ಹುಲುಸಾಗುವಿಕೆ

೮೦. ಪರಿವೇಷ್ಟಿಪ – ಆವರಿಸುವ, ಸುತ್ತುಗಟ್ಟುವ

೮೧. ಹೈತುಕದರ್ಶನ – ಕಾರಣಕ್ಕೆ ಸಂಬಂಧಿಸಿದ ಕಾಣ್ಕೆ

೮೨. ಪ್ರತಿಭಾಜನಿ – ಪ್ರತಿಭೆಯಿಂದ ಹುಟ್ಟಿದ್ದು.

೮೩. ಸಂಹ್ರಾದಿನಿ – ಭೋರ್ಗರೆಯುವ ನದಿ

೮೪. ಉತ್ತಾನಿಪ – ಮೇಲೆತ್ತುವ

೮೫. ಹಮಸ್ಮಿತೆ – ನಾನು ಇರುವೆನೆಂಬ ಭಾವನೆ

೮೬. ಪ್ರತ್ಯಾಭಾಸಿತ – ಪ್ರತಿಯಾಗಿ ಕಾಣಿಸಿಕೊಳ್ಳುವ, ಪ್ರಕಾಶಿಸುವ

೮೭. ಋತಗ – ವಿಶ್ವನಿಯಮವನ್ನು ಅನುಸರಿಸುವವ

೮೮. ದುರ್ಜ್ಞೇಯಾಬ್ಧಿ – ತಿಳಿಯಲಸಾಧ್ಯವಾದ ಕಡಲು

೮೯. ಸರ್ವಾತಿಗ – ಎಲ್ಲವನ್ನೂ ಮೀರಿದವನು"

## ಅಡಿ ಟಿಪ್ಪಣಿ

೧. ಪು.ತಿ.ನ. ಅವರ ಸಮಗ್ರ ಗದ್ಯ ಸಂಪುಟ : (ಸಂ)ಡಾ. ಜಿ.ಎಸ್.ಶಿವರುದ್ರಪ್ಪ, ಡಾ.ಎಚ್.ಎಸ್.ವೆಂಕಟೇಶ ಮೂರ್ತಿ, ಪುಟ-೭೮೩

೨. ರಸ ಪ್ರಕಾಶ : (ಸಂ) ಡಾ.ಜಿ.ಎಸ್.ಶಿವರುದ್ರಪ್ಪ, ಶ್ರೀರಾಮಭಟ್ಟ, ಪುಟ-೧೪೧ರಿಂದ೧೬೨

# ಅಧ್ಯಾಯ – ೬

## ಸಮಾರೋಪ

ಪು.ತಿ.ನ ರವರು ಕನ್ನಡ ಸಾಹಿತ್ಯದ ಮಹತ್ವದ ಕವಿಗಳಲ್ಲಿ ಒಬ್ಬರು. ನವೋದಯ ಸಾಹಿತ್ಯದ ಅಗ್ರಗಣ್ಯ ಲೇಖಕರೂ ಕೂಡ. ಒಬ್ಬ ಸಾಹಿತಿಯಾಗಿ, ಕವಿಯಾಗಿ, ಮೀಮಾಂಸಕರಾಗಿ ಆಧುನಿಕ ಕನ್ನಡಕ್ಕೆ ಹೊಸ ತಿರುವನ್ನು ನೀಡಿದ ಸಾಹಿತ್ಯ ಸಾಧಕರೂ ಹೌದು. ಬದುಕಿನ ವಾಸ್ತವತೆಯ ಹಾಗೂ ಭಾರತೀಯ ಪರಂಪರೆಯ ದಾರ್ಶನಿಕ ಸತ್ವವುಳ್ಳ ಪು.ತಿ.ನ ರವರ ಸಾಹಿತ್ಯ ನಮ್ಮ ಸಂಸ್ಕೃತಿಯ ಉನ್ನತಮಟ್ಟವನ್ನು ದರ್ಶಿಸುತ್ತದೆ. ಅಲ್ಲದೆ ಕನ್ನಡ ಸಾಹಿತ್ಯಕ್ಕೆ ಅವರ ಶ್ರಮ ಅಪಾರ. ಈ ದೃಷ್ಟಿಯಿಂದ ಕನ್ನಡ ಕಾವ್ಯಮೀಮಾಂಸೆಗೆ ಡಾ.ಪು.ತಿ.ನ ರವರ ಮಹತ್ವದ ಕೊಡುಗೆಗಳನ್ನು ಇಲ್ಲಿ ಒಟ್ಟಾರೆಯಾಗಿ ಗಮನಿಸಲಾಗಿದೆ.

ಪು.ತಿ.ನ ರವರ ವ್ಯಕ್ತಿತ್ವದ ಉಜ್ವಲ ಅಭಿವ್ಯಕ್ತಿ ಅವರ ಸಾಹಿತ್ಯ ಭಂಡಾರದಲ್ಲಿ ಹುದುಗಿದೆ. ಸಾಹಿತ್ಯ ಮತ್ತು ಬದುಕಿನಲ್ಲಿ ಮೌಲ್ಯಗಳ ಅನುಸರಣೆಯೂ ಅವರ ವ್ಯಕ್ತಿತ್ವದ ವಿಕಾಸದ ಹಾದಿಯನ್ನು ಸೂಚಿಸುತ್ತದೆ. ಅವರ ಸರಳ ಹಾಗೂ ಸ್ನೇಹಯುತವಾದ ಬದುಕು, ಧ್ಯೇಯ, ಆದರ್ಶಗಳು ಸಾಹಿತ್ಯದಲ್ಲಿ ಅಭಿವ್ಯಕ್ತಗೊಂಡಿದೆ. ಇಂಥ ನೇರ, ಸ್ಪಷ್ಟ, ಸ್ನೇಹ, ನಿಲುವುಗಳ ನಿರ್ಮಲವ್ಯಕ್ತಿತ್ವ ಅಪರೂಪವೆಂದರೆ ತಪ್ಪಾಗಲಾರದು.

ಪು.ತಿ.ನ ರವರ ಸಾಹಿತ್ಯ ಸಾಧನೆ ಅವರ ವಿವಿಧ ಸಾಹಿತ್ಯ ಪ್ರಕಾರಗಳ ರಚನೆಯಿಂದ ವ್ಯಕ್ತಗೊಂಡಿದೆ. ಪು.ತಿ.ನ ರವರ ಗದ್ಯಸಾಹಿತ್ಯದ ಎರಡು ಮೇರುಕೃತಿಗಳಾದ ಕಾವ್ಯಕುತೂಹಲ ಮತ್ತು ರಸಪ್ರಕಾಶ ಕಾವ್ಯಮೀಮಾಂಸೆಯನ್ನು ಕುರಿತ ಮಹತ್ ಕೃತಿಗಳಾಗಿವೆ. ಈ ಹಿನ್ನೆಲೆಯಲ್ಲಿ ಇವುಗಳ ಮೌಲಿಕ ಕೊಡುಗೆ ಮತ್ತು ಕಾವ್ಯಮೀಮಾಂಸೆಯ ಕುರಿತು ಪು.ತಿ.ನ ರವರ ಅಭಿಪ್ರಾಯಗಳನ್ನು ಇಲ್ಲಿ ಗಮನಿಸಲಾಗಿದೆ.

ಪು.ತಿ.ನ ರವರ ಸಾಹಿತ್ಯದ ಆಶಯಗಳು ಬದುಕಿನ ಮೌಲ್ಯಗಳಿಗೆ ಪೂರಕವಾದವುಗಳು. ಸನಾತನ ಧರ್ಮ, ಪರಂಪರೆ, ಸಂಸ್ಕೃತಿ, ಬಂಡಾಯ, ಭಕ್ತಿ, ಜಿಜ್ಞಾಸೆ, ಪ್ರಕೃತಿ ಪ್ರೇಮ, ಜೀವನಪ್ರೇಮ, ಪ್ರಣಯ, ಆಧ್ಯಾತ್ಮಿಕತೆ, ಚಿಂತನಶೀಲತೆ, ಪೌರಾಣಿಕತೆ, ಸಾಮಾಜಿಕತೆ, ಮೌಲ್ಯಪ್ರಜ್ಞೆ, ಅಂತಃಸಾಕ್ಷಿ, ಸಹಾನುಭೂತಿ, ನವರಸಗಳು, ತತ್ವಾನ್ವೇಷಣೆ, ಸಮಕಾಲೀನತೆ ಮತ್ತು ಸರ್ವಕಾಲಿಕತೆ ಈ ಎಲ್ಲ ಆಶಯಗಳು ಅವರ ಸಾಹಿತ್ಯದಲ್ಲಿ ನೆಲೆಗೊಂಡಿರುವ ಬಗೆ ಅದ್ಭುತವಾದದ್ದು. ಈ ಎಲ್ಲ ವಿಷಯಗಳನ್ನು ಪು.ತಿ.ನ ರವರು ತಮ್ಮ ಜಿಜ್ಞಾಸು ಸ್ವಭಾವಕ್ಕೆ ಒಳಪಡಿಸಿ ಅದಕ್ಕೊಂದು ಸಾಮಾಜಿಕ ಸಾಂಸ್ಕೃತಿಕ ಮೌಲ್ಯಗಳನ್ನು ನೀಡಿರುತ್ತಾರೆ. ಪು.ತಿ.ನ ರವರಿಗೆ ಜೀವನವೇ ಕಲೆ. ವಾಸ್ತವಿಕತೆಯೇ ಬದುಕಿನ

ಆಯಾಮ. ಇಂತಹ ಜೀವನವನ್ನು ಸಾರ್ಥಕಗೊಳಿಸಲು ಜೀವನದ ಸತ್ಯವನ್ನು ದರ್ಶಿಸುವ, ಮಾರ್ಗವನ್ನು ಅರಸುವ ಅನ್ವೇಷಣಾತ್ಮಕಗುಣ ಅವರ ಸಾಹಿತ್ಯಿಕ ಆಶಯಗಳಲ್ಲಿ ಒಂದಾಗಿದೆ.

ಕಾವ್ಯಮೀಮಾಂಸೆಯನ್ನು ಕುರಿತ ಪು.ತಿ.ನ ಅವರ ಚಿಂತನೆಗಳು ವಿಶಿಷ್ಟವಾದವುಗಳಾಗಿವೆ. ಕಾವ್ಯ ಎನ್ನುವುದು ಆತ್ಮಕ್ಕೆ ಹತ್ತಿರವಾದದ್ದು. ರಸವೇ ಅದರ ಪ್ರಧಾನ ಎಂಬ ನಿಲುವು ಪು.ತಿ.ನ ರವರದ್ದು. ಈ ನಿಟ್ಟಿನಲ್ಲಿ ಕಾವ್ಯಜಿಜ್ಞಾಸೆಯ ವಿಷಯಗಳಾದ ಕವಿ–ಸಹೃದಯ, ಕಾವ್ಯದ ಸ್ವರೂಪ, ಕಾವ್ಯದ ವಸ್ತುಗಳು, ಕಾವ್ಯದ ಇತರೆ ಶಿಸ್ತುಗಳು, ರಸಪ್ರಜ್ಞೆ, ಕಾವ್ಯಪ್ರಯೋಜನ, ಕಾವ್ಯಮೀಮಾಂಸೆಗೆ ಸಂಬಂಧಿಸಿದ ಕವಿ–ಕಾವ್ಯ–ಕಾವ್ಯದಲ್ಲಿ ಪ್ರತಿಮೆ, ಕಾವ್ಯದಲ್ಲಿ ಸೌಂದರ್ಯ, ಕಾವ್ಯದಲ್ಲಿ ವಿಮರ್ಶೆಯ ಗುಣ, ಕಾವ್ಯದಲ್ಲಿ ವ್ಯಕ್ತಿತ್ವದ ನಿರೂಪಣೆ ಮುಂತಾದ ವಿಚಾರಗಳ ಬಗ್ಗೆ ಪು.ತಿ.ನ ಅವರ ಚಿಂತನ–ಮಂಥನಗಳ ಹಿನ್ನೆಲೆಯಲ್ಲಿ ವಿಮರ್ಶಾತ್ಮಕವಾಗಿ ವಿವರಿಸಲಾಗಿದೆ. ಆನಂದವಿಲ್ಲದೆ ಜೀವನವಿಲ್ಲ ಎಂಬಲ್ಲಿ ಪು.ತಿ.ನ ರವರ ದೃಷ್ಟಿ ಉನ್ನತವಾದದ್ದು. ಸಾಹಿತ್ಯವೇ ಜೀವನದ ಆತ್ಮ ಎಂಬ ಮಾತಿಗೆ ನಿದರ್ಶನಗಳನ್ನು ನೀಡುತ್ತಾ, ಜೀವನ ಹಾಗೂ ಸೌಂದರ್ಯವನ್ನು ಜಿಜ್ಞಾಸೆಗೆ ಒಳಪಡಿಸುವ ಅವರ ಮನೋಧರ್ಮಗಳತ್ತ ಇಲ್ಲಿ ಗಮನ ಹರಿಸಲಾಗಿದೆ.

ಪು.ತಿ.ನ ರವರ ಭಾಷಿಕ ನೆಲೆಯ ಚಿಂತನೆಗಳು ಹೆಚ್ಚು ಗಮನಾರ್ಹವಾದದ್ದು. ಶಬ್ದಮಾಧುರ್ಯ ಎಂಬ ಶೀರ್ಷಿಕೆಯ ಹಿನ್ನೆಲೆಯಲ್ಲಿ ಕವಿಯಾದವನು ಶಬ್ದಗಳನ್ನು ಬಳಸುವಾಗ ವಹಿಸಬೇಕಾದ ಎಚ್ಚರಿಕೆಯನ್ನು ಕುರಿತು ಈ ಭಾಗದಲ್ಲಿ ಹೇಳಲಾಗಿದೆ. ಶಬ್ದಗಳಿಗೂ–ಭಾವನೆಗಳಿಗೂ ಇರುವ ಅವಿನಾಭಾವ ಸಂಬಂಧ, ವಿಷಯಗಳ ವ್ಯಕ್ತಪಡಿಸುವಿಕೆ ಶಬ್ದಗಳ ಮೂಲಕ ಹೇಗೆ ಸಾಧ್ಯ ಹಾಗೂ ಪ್ರಾಸ, ಅನುಪ್ರಾಸ, ಯಮಕ ಇವುಗಳ ಔಚಿತ್ಯವನ್ನು ಕುರಿತು ಕವಿ ಪು.ತಿ.ನ ರವರ ನಿಲುವಿನ ಹಿನ್ನೆಲೆಯಲ್ಲಿ ವಿವೇಚಿಸಲಾಗಿದೆ.

ಕಾವ್ಯದಲ್ಲಿ ಛಂದಸ್ಸಿನ ಮಹತ್ವವೇನು? ಪ್ರಾಚೀನ, ನಡುಗನ್ನಡ ಹಾಗೂ ಆಧುನಿಕ ಕನ್ನಡದ ಸಂದರ್ಭದಲ್ಲಿ ಹಲವು ಬದಲಾವಣೆಗಳಿಗೆ ಒಳಗಾದ ಛಂದಸ್ಸಿನ ಕೆಲವು ಅಂಶಗಳನ್ನು ಇಲ್ಲಿ ಎತ್ತಿ ತೋರಿಸಲಾಗಿದೆ. ಅಲ್ಲದೆ ಸಂಸ್ಕೃತ–ಕನ್ನಡ ಛಂದಸ್ಸಿನ ನಡುವೆ ಇರುವ ಅಂತರ ಸಂಬಂಧಗಳು ಹಾಗೂ ಭಿನ್ನಮತಗಳನ್ನು ಇಲ್ಲಿ ಕೂಲಂಕಶವಾಗಿ ಚರ್ಚಿಸಲಾಗಿದೆ. ಪು.ತಿ.ನ ನೀಡಿರುವ ನಿದರ್ಶನಗಳ ಮೂಲಕ ಕಾಲಕಾಲಕ್ಕೆ ಬಂದ ಹೊಸ ಕವಿಗಳಿಂದ ರೂಪಿತಗೊಂಡ ಹೊಸ ಹೊಸ ಛಂದಸ್ಸಿನ ಲಯಗಳ ಪ್ರಸ್ತುತತೆಯನ್ನು ಸಹ ಇಲ್ಲಿ ಹೇಳಲಾಗಿದೆ.

ಸಾಮಾನ್ಯವಾಗಿ ಪದ್ಯಕ್ಕೆ ಇರುವ ಛಂದಸ್ಸಿನ ಲಯಗಳು ಗದ್ಯಕ್ಕೆ ಇಲ್ಲ. ಆದರೂ ಕೂಡ ರೂಪಕ, ಅಲಂಕಾರಗಳನ್ನು ನಾವು ಗದ್ಯ ಸಾಹಿತ್ಯದಲ್ಲಿ ಹೇಗೆ ಅಳವಡಿಸಬಹುದು ಮತ್ತು ಅದರಿಂದ

ಗದ್ಯ ಸಾಹಿತ್ಯಕ್ಕೆ ಒದಗುವ ಸೌಂದರ್ಯದ ಕುರಿತು ಪು.ತಿ.ನ ಹೇಳುವ ಮಾತುಗಳ ಹಿನ್ನೆಲೆಯಲ್ಲಿ, ಈ ಭಾಗದಲ್ಲಿ ಈ ವಿಚಾರವನ್ನು ವಿಮರ್ಶಾತ್ಮಕವಾಗಿ ಹೇಳಿರುವುದು ಗಮನಾರ್ಹ.

ಪಾರಿಭಾಷಿಕ ಪದಗಳು ಪು.ತಿ.ನ ಸಾಹಿತ್ಯದುದ್ದಕ್ಕೂ ಕಂಡುಬರುತ್ತದೆ. ಅವರು ಬಳಸುವ ಪದಗಳು ವಿಶಿಷ್ಟ ಛಾಪನ್ನು ಅಭಿವ್ಯಕ್ತಿಸುವ ಗುಣ ಸ್ವಭಾವದವು. ಹೀಗೆ ಅವರು ತಮ್ಮ ಕೃತಿಯಾದ 'ರಸಪ್ರಕಾಶ'ದಲ್ಲಿ ಬಳಸಿರುವ ಪಾರಿಭಾಷಿಕ ಪದಗಳ ಒಂದು ಸಣ್ಣ ಪಟ್ಟಿಯನ್ನು ಈ ಭಾಗದಲ್ಲಿ ನೀಡಲಾಗಿದೆ.

ತಾತ್ವಿಕಚಿಂತನೆ, ನೈತಿಕ ದೃಷ್ಟಿಕೋನ, ಆಧ್ಯಾತ್ಮಿಕತೆ ಮತ್ತು ರಸಪ್ರಜ್ಞೆಯಿಂದ ಕೂಡಿದ ಸಾಹಿತ್ಯ ಪು.ತಿ.ನ ಅವರದು. ಅವರ ಸಾಹಿತ್ಯ ವಸ್ತುವಿಪುಲತೆಯಿಂದ ಕೂಡಿದೆ. ಅವರದು ಕ್ರಿಯಾಶೀಲ ವ್ಯಕ್ತಿತ್ವ, ಪ್ರತಿಭೆ ರಸನಿಷ್ಠೆಯಿಂದ ಕೂಡಿದ ವಾಸ್ತವಿಕ ಬದುಕಿನ ಅನಾವರಣ ಅವರ ಸಾಹಿತ್ಯದಲ್ಲಿದೆ. ಕಾವ್ಯಮೀಮಾಂಸೆಗೆ ಪು.ತಿ.ನ ರವರ ಕೊಡುಗೆ ಮೌಲಿಕವಾದುದು. ಸಾಹಿತ್ಯಿಕ ಮೂಲಭೂತ ವಿಷಯಗಳಾದ ಸಾಹಿತ್ಯ ತತ್ವ ವಿವೇಚನೆಗಳಿಂದ ಹಿಡಿದು ಕಾವ್ಯಮೀಮಾಂಸೆಯ ವಿಚಾರಗಳವರೆಗೂ ಅವರ ಮೀಮಾಂಸೆ ಹರಡಿದೆ. ಹೀಗೆ ಎಲ್ಲಾ ದೃಷ್ಟಿಕೋನಗಳಿಂದ ಕಾವ್ಯಮೀಮಾಂಸೆಗೆ ಅವರ ಕೊಡುಗೆ ಅವಿಸ್ಮರಣೀಯವಾದುದು.

## ಅನುಬಂಧ – ೧

### ೧. ನಂ. ಶಿವರಾಮಶಾಸ್ತ್ರೀಗೆ

ನೇಹಿಗ

ಮುಗಿಯಿತಿಂದಿಗೀ ಗೀತರೂಪಕ
ವೀಣಾಪಾಣಿಯ ಕರುಣಾಜ್ಞಾಪಕ
ರಾಮಾಯಣದಾ ಕತೆಯ ಪರಾಗ
ಮನದೊಳೂರಿ ಬೆಳೆಯಿತು ಕೃತಿ ಈಗ,
ಈ ನೀಳ್ಗಬ್ಬದ ರಸ ತಾನೆಂಥದೊ;
ರಸಿಕಜನಕೆ ತುಷ್ಟಿಯ ತರುವಂಥದೊ?
ಕೃತಿಕಾರನು ನಾನಿದನೆಂತರಿವೆಂ?
ಆದೊಡೆ ನನ್ನಾಮೋದದಿ ಮರೆವೆಂ
ಈ ಚಿರಸಂದೇಹವ ತುಸಕಾಲ,
ಕೃತಕೃತಿಯಾಯಿತು ಎನುವೆನು ಬಾಳ,
ಈ ಕಬ್ಬದ ಕೆಲಹಾಡನು ಹಾಡಿ
ಮುದವಾಂತೆನು ರಸದರ್ಶನ ಮಾಡಿ
ನುಡಿಗಳ ನಲ್ನಡೆ, ಭಾವೋನ್ಮೇಷ
ಇವಕಾಯಿತು ಕವಿಜನ ಸಂತೋಷ
ಪ್ರಥಿತಯಶಸ್ಕರ ಸುಹೃದರ ಮೆಚ್ಚು
ಎನಗೆಂದಿತು "ಕಜ್ಜದ ಬೆಲೆ ಹೆಚ್ಚು
ಅದರಿಂ ನೇಹಿಗ ನಾನೆದೆ ಮಾಡಿ
ಮುಡುಪಿಡೆ ಬಂದೆನು ಅರ್ತಿಯ ಕೂಡಿ
ನಿನಗೀ ಕೃತಿಯಂ ಮಾಸತಿನುತಿಯಂ
ಭವದೊಳು ಪ್ರೇಮವಿಲಾಸದ ಕತೆಯಂ
ಈ ಕಬ್ಬವು ಕೊನೆಗಾಣುವವರೆಗೂ
ಬಲು ಮಾತಾಯಿತು ಎನಗೂ ಕವಿಗೂ;
"ರಾಮಾಯಣದಾ ಕತೆ ಬಹು ಸರಳ;

ಹೀಗೇಕಾಯಿತು ಎನ್ನುತ ಮರುಳ;
ತರ್ಕಿಸಿ ತರ್ಕಿಸಿ ತೊಳಲುವೆಯೇಕೆ?
ಬುದ್ಧಿಯ ಪೊರೆಯೊಳು ಮರೆಸುವೆ ಏಕೆ
ನಿನ್ನ ವಿಕಾಸವ ಭಾವಪ್ರಕಾಶವ?
ಸರಿ ತಪ್ಪೆನ್ನುತ ಮಾಸವ ಮಾಸವ
ನೂಕುವೆ ರಾಗಕೆ ತತ್ತ್ವವ ಹಚ್ಚಿ
ಜೀವಿಗಳೆಲ್ಲರು ಪ್ರಕೃತಿಯ ನೆಚ್ಚಿ
ನಡೆವರು, ನಿಗ್ರಹವೇತರ ಮಾತು"
ಎನ್ನುವ ಗೀತೆಯ ಗಾದೆಯ ಮರೆತು
ನಾನೆಂದನು "ಕವಿ, ಇದು ಅನಿವಾರ್ಯ
ಎನ್ನದು ತತ್ತ್ವಾನ್ವೇಷಣ ಕಾರ್ಯ.
ಏನೇತಕೆ ಎಂಬುದೆ ಹವ್ಯಾಸ;
ಇದನುಳಿದಾಗದು ಪದವಿನ್ಯಾಸ
ಅದರಿಂ ಸಹಿಸೆನ್ನೀ ಉಪಟಲವ
ಎಂತು ಕಂಪು ಬಿಡದಿಹುದೋ ದಳವ
ಪಂಕದೊಳೆಂತಂಟಿತೊ ಪಂಕೇಜ
ಅಂತೆಯೆ ನಿನಗೆನ್ನಯ ಮನ ಸಹಜ
ಚಿದಾನಂದನನು ತನುವೊಳಗೆಂತು
ರಸಭಾಸ್ಕರನನು ಕಾವ್ಯದೊಳಂತು
ಕುಶಲ ವಿಮರ್ಶಕರರಿವರು ನಿನ್ನ
ನಿನಗವರೌದಾಸೀನ್ಯದ ಬನ್ನ
ಎಂದಿಗು ಆಗದು ಎನಲೆನ್ನೀ ಸ್ತುತಿ
ಗೆಂದನು ನಸುನಗುತಾ ಮೋದದ್ಯುತಿ
"ನಮಗೊಪ್ಪಿತು ಪಂಗ್ವಂಧರ ನೀತಿ
ಒಯ್ಯೆನ್ನನು ನಿನಗೊಪ್ಪುವ ರೀತಿ"
ಈ ಒಪ್ಪಂದದೊಳಾಯಿತು ಕಾವ್ಯ
ಬೆಂಬಳಿಗಿರೆ ಗೆಳೆಯರ ಸಾಚಿವ್ಯ

ನಿನ್ನದು ಕೆಳೆಯಾ, ತೀಕ್ಷ್ಣಾಭಿರುಚಿ
ವರಕವಿಕಾವ್ಯರಸಸ್ನಾನ ಶುಚಿ
ಈ ಗುಣಕೀ ಕೃತಿ ಮಾಪಕವಲ್ಲ
ಆದೊಡೆ ನಿನ್ನೊಲುಮೆಗೆ ಹೊರತಲ್ಲ
ಅದರಿಂ ನೇಹಿಗ, ನಾನೆದೆ ಮಾಡಿ
ಕಾಣಿಕೆ ತಂದೆನು ಅರ್ತಿಯ ಕೂಡಿ
ನಿನಗೀ ಕೃತಿಯಂ ಭವವಿಸ್ಮೃತಿಯಂ
ಮರ್ತ್ಯರಮರ್ತ್ಯಸ್ನೇಹ ಸ್ಮೃತಿಯಂ
ನಿನಗಂತಿಕಮಾದೀ ರಸವಸ್ತು
ಸಹೃದಯಹೃದಯಾಮೋದಕಮಸ್ತು

('ಅಹಲ್ಯೆ' ನಾಟಕದಿಂದ)

## ೨. ನನ್ನ ಹಾಡು

ಬಳ್ಳಿಯೊಡಲ ಕುಸುಮದಂತೆ
        ಹದುಗಿದೆನ್ನ ಗೀತವು
ಮೆಲ್ಲನೊಡೆದು ಬರುವುದೆಂದು?
        ಎಂದು ನಲಿವೆ-ಬೆದರುವೆ

ಎದೆಯ ದುಗುಡವೆಲ್ಲವಳೆದು
ಕಣ್ಣ ನೀರು ಬತ್ತಿ ಹೋಗಿ,
ಕರೆ ಅದೊಂದು ಮಾತ್ರನಿಲ್ಲೆ,
        ನನ್ನ ಹಾಡು ಬಿರಿವುದು

ಬಾಳನೊಂದು ಹುಚ್ಚಮಾಡಿ
ದೊಲುಮೆರಾಗ ಉರಿದು ಹೋಗಿ,
ಅದರ ಬೂದಿ – ನೆನಪು–ನಿಲ್ಲೆ
        ನನ್ನಡು ಬಿರಿವುದು

ಇರವು ಚಿರವು ಬಯಸಿದೊಂದು
ನಲವು ಬಂದು ನಮೆದುಹೋಗಿ,
ಬಯಕೆಯೊಂದು ಮಾತ್ರ ನಿಲ್ಲೆ,
        ನನ್ನ ಹಾಡು ಬಿರಿವುದು

ಮುಗುದೆಯೊಡಲ ಪ್ರೇಮದಂತೆ
        ಹದುಗಿದೆನ್ನ ಗೀತವು
ಬಗೆಯ ಗೂಡನೊಡೆಯುತೆಂದು
        ಬರುವುದೆಂದು ಬೆದರುವೆ.

## ೩. ಕಣಿವೆಯ ಮುದುಕ

ಪಯಣ ಬೆಳೆಸಿತು ಸಂಜೆ; ಬಾನು
ಭಯವ ಬೀರಿತು ಮಿಂಚಿ ಮೊಳಗಿ;
ಬಯಲುದಿಣ್ಣೆಯನೊಂದು ಮಾಡಿತು
ಕಣಿವೆ ತುಂಬುತ ಕತ್ತಲು

ಕಾಡಿನೊಳಗೆ ನಾನೆ ಒಂಟಿ;
ಓಡುತ್ತಿದ್ದೆನು ಹನಿಗೆ ಬೆದರಿ,
ಮೋಡ ಮಿಂಚಲು ಹಾದಿ ಹಿಡಿದು
ಮೆಟ್ಟಲೇರುವ ತಾಣಕೆ

ಏನನೆಡಹಿದೆ? ಸುಯ್ಯಲೇನು?
ಏನು ನರಳಿಕೆ? – ಮನುಜನೇನು!
"ಕಾಣದೇನೋ ದಾರಿಹೋಕನೆ!"
ಎಂದು ಗದರಿತು ವ್ಯಕ್ತಿಯು.

ಹೆದರಿ ನಿಂತೆನು – ಮಿಂಚು ಬೆಳಕೂಳು
ಮುದುಕನೊಬ್ಬನ ಕಂಡೆನಲ್ಲಿ;
ಬದಿಯ ಬಂಡೆಯನೊರಗಿ ಕುಳಿತ
ಹೊಸಿಲಸಾವಿನ ಮುದುಕನ

"ಗೌಡ, ಕ್ಷಮಿಸ್ಯೆ: ಇರುಳು, ಕಾಣದು,
ಮೋಡ ಮುಸುಕಿದೆ – ಕಾಡಿಗೊಬ್ಬನೆ!
ಮೇಡ ಹತ್ತಲು ಕಷ್ಟವಹುದೈ;
ಜೊತೆಗೆ ನಿಲ್ಲುವೆ"ನೆಂದೆನು.

ಮೊದಲು ಕೋಪಿಸಿ, ಬಳಿಕ ನಕ್ಕನು
ಮುದುಕ ಮರುಕವ ಹಳಿವ ನಗೆಯ
"ಮುದಿಗೆ ಚಳಿಯೆ, ಇರುಳೆ, ಮಳೆಯೆ,
ಕಾಡೆ, ಮೇಡೆ? ನಡೆಯೋ ನೀ"

ಹಳುವಿನೊಳಗೂ ಮರುಕ ಬೇಡವೆ!
ಇಳೆಯ ಬವಣೆಗೆ ಜಡ್ಡು ಬಿದ್ದನೆ?
ಕಳೆದ ಬಾಳೊಳು ದಯೆಯ ಕಾಣದೆ
ಇಂದು ಕಾಣಲು ಹಳಿವನೆ?

ಹಿತದ ಮಾತುಗಳಾಡುತಾತನ
ಖತಿಯನಿಳುಹಿದೆ; ಬೇಡವೆಂದರು
ಜೊತೆಯೊಳೊಯ್ದೆನು ಹೆಜ್ಜೆ ಹಜ್ಜೆಗು
ನಿಂತು ಮುದುಕನ ನಡೆಸುತ

ಮೇಡಹತುತಲಿದ್ದೆವಿಂತು–
ಗೌಡ ಕರಗಿದ, ಕರವ ನೆಮ್ಮಿದ.
ಮೋಡ ಮಿಂಚಿನ ಬಾನ ಹೋಲಿತು
ಎನ್ನ ಮನದಾ ಭಾವವು.

ಗಗನವಳೆಯುವ ಮಿಂಚು ಮುದುಕನ
ಮೊಗದಿ ಬಿಂಬಿಸಿತಂದು ಕಂಡೆನು
ಉಗುವ ಕಂಬನಿ ಹೊನಲ, ಸೋಜಿಗ!
ಅಳುವನೇನೀ ಮುದುಕನು!

“ದುಗುಡವೇತಕೆ, ಗೌಡ? ಪೇಳ್ಳೆ
ದಿಗಿಲು ಬಿದ್ದೆಯ? ಮುಪ್ಪ ಹಳಿವೆಯ?
ಬಗೆಯೊಳಾವುದು ನೋವು? ಕೋಪವೆ?
    ನಿನ್ನ ಅಬಲತೆಗಳುವೆಯಾ?”

ಎನ್ನ ಮಾತಿಗೆ ಗೌಡನೆಂದನು,
ಎನ್ನ ಕರಗಳನಮುಕಿ, ಮೆಲ್ಲನೆ;
“ನಿನ್ನ ಈ ಬಗೆ ಮರುಕ ತಂದಿತು
    ಮರೆತ ಕಂದನ ನೆನಪನು”

ನಡೆದೆವಿಬ್ಬರು ಮೌನದಿಂದ
ಅಡವಿಯೊಳಗೆ ನಾನು ಮುದುಕನು
ನುಡಿಯು ತಿಳುಹಲು ಬಲ್ಲುದೇನು
    ಮೌನ ನುಡಿದಾ ದುಗುಡವ?

## ಪರಾಮರ್ಶನ ಗ್ರಂಥಸೂಚಿ

೧. ಉಷಾವಸ್ತಾರೆ ಭಗವತೀ ರಾಮಮೂರ್ತಿ — (ಸಂ)ಪು.ತಿ.ನ. ನಮನ ಪು.ತಿ.ನ ಅಭಿಮಾನಿಗಳು, ನ್ಯೂಜರ್ಸಿ ಯು.ಎಸ್.ಎ, ೨೦೦೫

೨. ಕುರ್ತುಕೋಟಿ.ಕೆ.ಡಿ. — ಪು.ತಿ.ನರಸಿಂಹಾಚಾರ್ಯ ನಡೆದುಬಂದ ದಾರಿ ಸಂಪುಟ–೧

೩. ಕುಂದಣಗಾರ ಕೆ.ಜಿ.ಪ್ರೊ.(ಸಂ) ದಿವಾಣ ಬಹಾದ್ದೂರ್ ಎ.ಪಿ.ಚೌಗುಲೆ — ಪಂಪ ಮಹಾಕವಿ ವಿರಚಿತಂ 'ಆದಿಪುರಾಣಂ' ಶ್ರೀಚಂದ್ರಪ್ರಭ ಪ್ರಿಂಟಿಂಗ್ ಪ್ರೆಸ್, ಬೆಳಗಾವಿ ೧೯೫೩

೪. ಜಯಶ್ರೀ — ಪು.ತಿ.ನ ರಾಮಾಯಣ ಗೀತರೂಪಕಗಳು ಒಂದು ಅಧ್ಯಯನ, ಮದರಾಸ್ ವಿಶ್ವವಿದ್ಯಾಲಯ, ೧೯೭೮

೫. ನರಸಿಂಹಾಚಾರ್. ಪು.ತಿ. — ನಾನು ಮತ್ತು ನನ್ನ ಸಾಹಿತ್ಯ, ಮುನ್ನುಡಿ ರಸ ಸರಸ್ವತಿ, ೧೯೭೧

೬. ನಾರಾಯಣಶೆಟ್ಟಿ (ಸುಜನಾ) — ಪು.ತಿ.ನ ಕವಿಮನಸ್ಸಿನ ಒಂದು ನೋಟ ಲೋಕಪಾವನಿ,

೭. ನರಸಿಂಹಾಚಾರ್. ಪು.ತಿ. — ಅಹಲ್ಯೆ, ಮೈಸೂರು, ಕಾವ್ಯಾಲಯ ೧೯೪೬

೮. ಭಾರತಿ. ಎಂ.ಜಿ. — ಪು.ತಿ.ನ ಸಾಹಿತ್ಯದಲ್ಲಿ ತಾತ್ವಿಕತೆ ಮತ್ತು ಕಲಾರೂಪ: ಒಂದು ಅಧ್ಯಯನ ಬೆಂಗಳೂರು ವಿಶ್ವವಿದ್ಯಾಲಯ, ೨೦೦೩

೯. ಬೇಂದ್ರೆ. ದ.ರಾ.(ಅಂಬಿಕಾತನಯದತ್ತ) — ಉಯ್ಯಾಲೆ, ಬೀ.ಜಿ.ಚಿಮ್ಮಲಗಿ ಗೌಳಿಗುಡ್ಡ, ಹೈದರಾಬಾದ್, ದಕ್ಷಿಣ

೧೦. ಮುಗಳಿ. ರಂ.ಶ್ರೀ. ಪು.ತಿ.ನರಸಿಂಹಾಚಾರ್ಯ, ಕನ್ನಡ ಸಾಹಿತ್ಯ ಇತಿಹಾಸ(ದ್ವಿತೀಯ ಆವೃತ್ತಿ) ಸಾಹಿತ್ಯ ಅಕಾಡೆಮಿ. ನವದೆಹಲಿ, ೧೯೬೮

೧೧. ದೇ.ಜವರೇಗೌಡ (ಸಂ) ಯದುಗಿರಿ–ಪು.ತಿ.ನ ಅಭಿನಂದನಗ್ರಂಥ ಡಿ.ವಿ.ಕೆ.ಮೂರ್ತಿ, ಮೈಸೂರು, ೧೯೮೧

೧೨. ಡಾ.ಪು.ತಿ.ನ.ಟ್ರಸ್ಟ್ ಯದುಗಿರಿ(ಆಯ್ದಕವಿತೆಗಳು) ಡಾ.ಪು.ತಿ.ನ.ಶತಮಾನೋತ್ಸವ ಪ್ರಕಟಣೆ, ಡಾ.ಪು.ತಿ.ನ. ಟ್ರಸ್ಟ್, ಬೆಂಗಳೂರು

೧೩. ರಾಜೇಗೌಡ ಪು.ತಿ.ನ. ರವರ ರಸ ಸರಸ್ವತಿ ಮತ್ತು ಇತರ ಕವನಗಳು

೧೪. ರಾಘವೇಂದ್ರರಾವ್.ಎಚ್.ಎಸ್.ಡಾ.(ಸಂ) ಭೃಂಗಮಾರ್ಗ, ಡಾ.ಪು.ತಿ.ನ. ಟ್ರಸ್ಟ್, ಬೆಂಗಳೂರು. ೨೦೦೫

೧೫. ರಾಮಚಂದ್ರರಾವ್ ಪು.ತಿ.ನ. ಅವರ ನಾಟಕಗಳು ಮೈಸೂರು ವಿಶ್ವವಿದ್ಯಾನಿಲಯ, ೧೯೮೨

೧೬. ರಾಮಾಕಾಂತಾಚಾರ್ಯ ಪು.ತಿ.ನ.ಗೀತನಾಟಕಗಳು–ಒಂದುಅಧ್ಯಯನ ಉಸ್ಮಾನಿಯ ವಿಶ್ವವಿದ್ಯಾಲಯ, ೧೯೮೮

೧೭. ರಾಜಪ್ಪ ದಳವಾಯಿ (ಸಂ) ಕನ್ನಡ ಸಾಹಿತ್ಯ ಕೋಶ ಅವಿಸಂ (ರಿ). ಅನುವನಹಳ್ಳಿ, ಚಿಕ್ಕಮಗಳೂರು, ೧೯೯೬

೧೮. ವಿಜಯಲಕ್ಷ್ಮಿ ಸುಬ್ಬರಾವ್ ಡಾ. ಕನ್ನಡದಲ್ಲಿ ಗೀತನಾಟಕಗಳ ಅಧ್ಯಯನ, ಬೆಂಗಳೂರು ವಿಶ್ವವಿದ್ಯಾಲಯ, ೧೯೮೩

೧೯. ಶಿವರುದ್ರಪ್ಪ.ಜಿ.ಎಸ್.ಡಾ. ವಿಮರ್ಶೆಯ ಪೂರ್ವ–ಪಶ್ಚಿಮ, ಸಾಹಿತ್ಯಭಂಡಾರ, ಬೆಂಗಳೂರು, ೧೯೬೧

೨೦. ಶಿವರುದ್ರಪ್ಪ. ಜಿ.ಎಸ್.ಡಾ. ಕಾವ್ಯಾರ್ಥಚಿಂತನ, ಶಾರದ ಪ್ರಕಾಶನ ಬೆಂಗಳೂರು, ೧೯೮೩

೨೧. ಶಿವರುದ್ರಪ್ಪ.ಜಿ.ಎಸ್.ಡಾ.(ಸಂ) ವೆಂಕಟೇಶ ಮೂರ್ತಿ.ಎಚ್.ಎಸ್.ಡಾ. — ಪು.ತಿ.ನ. ಸಮಗ್ರಗದ್ಯಸಂಪುಟ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ೨೦೦೨

೨೨. ಶಿವರುದ್ರಪ್ಪ.ಜಿ.ಎಸ್.ಡಾ.(ಸಂ) ಶ್ರೀರಾಮಭಟ್ಟ — ಪು.ತಿ.ನ. 'ರಸಪ್ರಕಾಶ' ಡಾ.ಪು.ತಿ.ನ.ಟ್ರಸ್ಟ್, ಬೆಂಗಳೂರು, ೨೦೦೧

೨೩. ಶ್ರೀಕಂಠಯ್ಯ.ತೀ.ನಂ. — ಭಾರತೀಯ ಕಾವ್ಯಮೀಮಾಂಸೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೨೪. ಪು.ತಿ.ನ.ಟ್ರಸ್ಟ್ — ಪು.ತಿ.ನ. ಸಮಗ್ರಕಾವ್ಯ ಡಾ.ಪು.ತಿ.ನ.ಶತಮಾನೋತ್ಸವ ಪ್ರಕಟಣೆ ಡಾ.ಪು.ತಿ.ನ.ಟ್ರಸ್ಟ್, ಬೆಂಗಳೂರು ೨೦೦೪

[illegible]

[illegible]

[illegible]

[illegible]

[illegible]

[illegible]

[illegible]

[illegible]

## ಪರಾಮರ್ಶನ ಲೇಖನಸೂಚಿ


೧. ಕಾವ್ಯಮೀಮಾಂಸೆಯನ್ನುಕುರಿತ ಪು.ತಿ.ನ ಅವರ ಚಿಂತನೆಗಳು : ಪ್ರೊ.ಎಚ್.ಎನ್.ಮುರಳಿಧರ ಸಂಚಿಕೆ–೨ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, (ಸಂ) ಡಾ.ಚಕ್ಕರೆ ಶಿವಶಂಕರ, ಪ್ರೊ.ಜಿ.ಅಬ್ದುಲ್ ಬಷೀರ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೨

೨. ಪು.ತಿ.ನ. ರವರ ರಸಪ್ರಕಾಶ; ಒಂದು ಅವಲೋಕನ : ಪ್ರೊ.ಎಚ್.ಎನ್.ಮುರಳಿಧರ, ಕನ್ನಡ ಸಾಹಿತ್ಯ ಪರಿಷತ್ಪ್ತ್ರಿಕೆ, (ಸಂ)ಡಾ.ಚಕ್ಕರೆ ಶಿವಶಂಕರ, ಪ್ರೊ.ಜಿ.ಅಬ್ದುಲ್ ಬಷೀರ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೪. ಸಂಚಿಕೆ–೧

೩. ಪು.ತಿ.ನ ಸಮಗ್ರ ಕಾವ್ಯ– ಒಂದು ಸಮೀಕ್ಷೆ, ಆಯ್ದ ಲೇಖನಗಳು : ಲೇಖಕರು.ಡಾ.ತಾಳ್ತಜೆ ವಸಂತಕುಮಾರ, ಸಾಹಿತ್ಯ ಪ್ರಕಾಶನ, ಮುಂಬಯಿ, ೧೯೮೯

೪. ಪು.ತಿ.ನಅವರಕಾವ್ಯಜಿಜ್ಞಾಸೆ–ಜಿ.ಎಸ್.ಶಿವರುದ್ರಪ್ಪ,ಸಮಗ್ರಗದ್ಯ–೨, ಲೇಖಕರು.ಜಿ.ಎಸ್.ಶಿವರುದ್ರಪ್ಪ, ಸ್ನೇಹಪ್ರಕಾಶನ, ಬೆಂಗಳೂರು.೧೯೯೪

೫. ಪು.ತಿ.ನ.ಅವರವಿಶಿಷ್ಟತೆ–ಜಿ.ಎಸ್.ಶಿವರುದ್ರಪ್ಪ, ಸಮಗ್ರಗದ್ಯ–೨, ಲೇಖಕರು.ಜಿ.ಎಸ್.ಶಿವರುದ್ರಪ್ಪ, ಸ್ನೇಹ ಪ್ರಕಾಶನ, ಬೆಂಗಳೂರು.೧೯೯೪

೬. ಪು.ತಿ.ನ.ಅವರಪ್ರತೀಕ್ಷೆ–ಡಾ.ಜಿ.ಎಸ್.ಶಿವರುದ್ರಪ್ಪ,ಪ್ರಾಯೋಗಿಕವಿಮರ್ಶೆ, (ಸಂ)ಜಿ.ಎಸ್.ಶಿವರುದ್ರಪ್ಪ,ಎನ್.ಎಸ್.ಲಕ್ಷ್ಮೀನಾರಾಯಣಭಟ್ಟ,ಪ್ರಕಟಣಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.೧೯೭೧

೭. ಪು.ತಿ.ನ ಕಾವ್ಯ : ಕೆಲ ಟಿಪ್ಪಣಿಗಳು – ಓ.ಎಲ್.ನಾಗಭೂಷಣಸ್ವಾಮಿ, ಯದುಗಿರಿಯ ಅಂಗಳದಿಂದ (ಪು.ತಿ.ನ ಸಾಹಿತ್ಯ ಕುರಿತ ಲೇಖನಗಳು), ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ

೮. ಮಂಜಿನ ತೆರೆಯ ಕಾವ್ಯ – ರಾಮರಾವ್ ಕುಲಕರ್ಣಿ, ಯದುಗಿರಿಯ ಅಂಗಳದಿಂದ (ಪು.ತಿ.ನ ಸಾಹಿತ್ಯ ಕುರಿತ ಲೇಖನಗಳು), ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ

೯. ಪು.ತಿ.ನ ಕಾವ್ಯದಲ್ಲಿ ಅಂತಃಕರಣ – ರಂಜಾನ್ ದರ್ಗಾ, ಯದುಗಿರಿಯ ಅಂಗಳದಿಂದ (ಪು.ತಿ.ನ ಸಾಹಿತ್ಯ ಕುರಿತ ಲೇಖನಗಳು), ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ

೧೦.ಕಾವ್ಯಸೃಷ್ಟಿ ಬೇಂದ್ರೆಯವರ ದೃಷ್ಟಿ : ಸಮಗ್ರ ಗದ್ಯ–೨, ಲೇಖಕರು.ಜಿ.ಎಸ್.ಶಿವರುದ್ರಪ್ಪ, ಸ್ನೇಹಪ್ರಕಾಶನ, ಬೆಂಗಳೂರು.೧೯೯೪